
ಸಾಹಿತ್ಯ ದಾಸೋಹ – ೨೦೪



ಏಕತಾ ಮೂರ್ತಿ – ಸ್ಟ್ಯಾಚ್ಯು ಆಫ್ ಯುನಿಟಿ

೧೩ನೇ ಆಗಸ್ಟ್ ೨೦೨೨ರಂದು ೨೦೪ನೆಯ
ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳ ಸಂಕಲನ

ಸಮನ್ವಯ ಸಮಿತಿ * ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

೨೦೨೨ರ ಆಗಸ್ಟ್ ೧೩ರಂದು ಅಂತರ್ಜಾಲ ಮುಖೇನ ನಡೆದ ೨೦೪ನೇ ಸಾಹಿತ್ಯ ದಾಸೋಹದಲ್ಲಿ ಪ್ರಸ್ತುತಪಡಿಸಿದ ಬರಹಗಳ ಸಂಕಲನ ಇಲ್ಲಿದೆ.

ಭೌತಿಕ ಕಾರ್ಯಕ್ರಮಗಳಿಗಿಂತ ಅಂತರ್ಜಾಲ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಸಂಖ್ಯೆ ಹೆಚ್ಚಿರುತ್ತದೆ, ಏಕೆಂದರೆ ಕೇವಲ ಮನೆಯಿಂದಲೇ ಅಲ್ಲದೆ, ಹೊರಊರಿನಲ್ಲಿ, ದೇಶ ವಿದೇಶಗಳಲ್ಲಿ ನೆಲೆಸಿರುವ ಆಸಕ್ತರು ಸಹಾ ಪಾಲ್ಗೊಳ್ಳಬಹುದು ಎಂಬುದು ಹಲವರ ಅಭಿಪ್ರಾಯ. ಆದರೆ ಇತ್ತೀಚೆಗೆ ಅಂತರ್ಜಾಲ ಮೂಲಕ ನಡೆಯುವ ದಾಸೋಹದಲ್ಲಿ ಪಾಲ್ಗೊಳ್ಳುವವರ, ತಂತಮ್ಮ ಬರಹಗಳನ್ನು ಪ್ರಸ್ತುತಪಡಿಸುವವರ ಸಂಖ್ಯೆಯೂ ಕಡಿಮೆ ಆಗುತ್ತಿರುವುದು ವಿಚಾರ ಮಾಡಬೇಕಾದ ಅಂಶ. ಕಳೆದ ತಿಂಗಳ ದಾಸೋಹದಲ್ಲಿ ಒಟ್ಟಾರೆ ವೀಕ್ಷಕರು ಹಾಗೂ ಸ್ವರಚಿತ ಬರಹಗಳನ್ನು ಓದಿದವರ ಸಂಖ್ಯೆ ಕಡಿಮೆ ಆದ ಕಾರಣ ಈ ಅನಿಸಿಕೆ.

ನಮ್ಮ ಸಾಹಿತ್ಯ ದಾಸೋಹ ಅಭಿಯಾನ ಕಳೆದ ಹದಿನೈದು ವರ್ಷಗಳಿಂದ ಪ್ರತಿ ತಿಂಗಳೂ ನಿರಂತರವಾಗಿ ನಡೆದುಕೊಂಡು ಬಂದು ತನ್ನ ೨೦೪ನೇ ಆವೃತ್ತಿಗೆ ಪಾದಾರ್ಪಣೆ ಮಾಡಿರುವುದೇ ಒಂದು ಸಾಧನೆ. ಈ ವೇದಿಕೆಯ ಮೂಲಕ ತಮ್ಮ ಸಾಹಿತ್ಯಕ ಚಟುವಟಿಕೆಗಳಿಗೆ ಬುನಾದಿ ಹಾಕಿದ ಹಲವರು ಇಂದು ಉತ್ತಮ ಬರಹಗಾರರಾಗಿ ಗುರುತಿಸಿಕೊಂಡಿರುವುದು ಹೆಮ್ಮೆಯ ವಿಷಯ. ಇದು ಸದಾ ಮುಂದುವರಿಯಬೇಕು, ಅದಕ್ಕಾಗಿ ದಾಸೋಹದಲ್ಲಿ ಹೆಚ್ಚುಹೆಚ್ಚು ಜನ ಭಾಗವಹಿಸಬೇಕು ಎಂಬುದೇ ನಮ್ಮ ಆಶಯ.

ಕಳೆದ ದಾಸೋಹದ ಅಧ್ಯಕ್ಷತೆ ವಹಿಸಿ ಪ್ರತಿಯೊಂದು ಪ್ರಸ್ತುತಿಗಳನ್ನೂ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಅವಲೋಕಿಸಿ, ಅನಿಸಿಕೆಗಳನ್ನು ತಿಳಿಸಿ, ಅವುಗಳನ್ನು ಬರಹ ರೂಪಕ್ಕಿಳಿಸಿ ಕೊಟ್ಟ ಶ್ರೀ ಜೆ.ಎನ್.ಜಗನ್ನಾಥ ಅವರಿಗೆ ವಂದನೆಗಳು. ಅಲ್ಲದೆ ಸಾಹಿತ್ಯ ದಾಸೋಹದಲ್ಲಿ ತಮ್ಮ ಬರಹಗಳನ್ನು ಮಂಡಿಸಿದ ಎಲ್ಲಾ ದಾಸೋಹಿಗಳಿಗೂ, ಅಂತರ್ಜಾಲ ಪ್ರೇಕ್ಷಕಗಣಕ್ಕೂ, ದಾಸೋಹವನ್ನು ಎಂದಿನಂತೆ ಅಚ್ಚುಕಟ್ಟಾಗಿ ನಿರ್ವಹಿಸಿದ ಮತ್ತು ಈ ಸಂಚಿಕೆಯನ್ನು ಸುಂದರವಾಗಿ ಸಿದ್ಧಪಡಿಸಿದ ನಮ್ಮ ಸಾಹಿತ್ಯ ದಾಸೋಹದ ತಂಡಕ್ಕೂ ಕೃತಜ್ಞತೆಗಳು.

ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ ...

ಮುಖಪುಟದ ಚಿತ್ರ:
'ಏಕತಾ ಮೂರ್ತಿ'–ಸ್ವಾತಂತ್ರ್ಯದ ಅಮೃತ ಮಹೋತ್ಸವ ಲೇಖನ– ಚಿತ್ರ ಕೃಪೆ: ಅಂತರ್ಜಾಲ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೪

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ ೧೩.೦೮.೨೦೨೨ರಂದು ಶನಿವಾರ ಮಧ್ಯಾಹ್ನ ೩.೩೦ಕ್ಕೆ ೨೦೪ನೇ ಸಾಹಿತ್ಯ ದಾಸೋಹ ಕಾರ್ಯಕ್ರಮವು 'ನೋಡಿಯೋ ಸಾಹಿತ್ಯ ದಾಸೋಹ' ಅಂತರಜಾಲ ವೇದಿಕೆಯಲ್ಲಿ ಡಾ. ಜೆ.ಎನ್. ಜಗನ್ನಾಥ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯ್ತು.

ಶ್ರೀ ಸುನೀಲ್ ಹಳೆಯೂರುರವರು ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಜೆ.ಎನ್. ಜಗನ್ನಾಥ್‌ರವರನ್ನು ಪರಿಚಯಿಸಿದರು.



ಡಾ.ಜೆ.ಎನ್.ಜಗನ್ನಾಥ್ ರವರದು ಬಹುಮುಖ ಪ್ರತಿಭೆ. ಹಲವಾರು ದೇಶಗಳನ್ನು ಸುತ್ತಿ ಕನ್ನಡ ಮತ್ತು ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಮೈಸೂರು ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಸ್ವಯಂನಿವೃತ್ತಿ ಪಡೆದ ಇವರು ನಂತರ ಇನ್ಫೋಸಿಸ್ ಸಂಸ್ಥೆಯ ಬ್ಯಾಂಕಿಂಗ್ ತಂತ್ರಾಂಶಗಳ ತರಬೇತಿ ವಿಭಾಗದಲ್ಲಿ ಹಲವು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಎಂಕಾಂ, ಎಂಎ, ಎಂಬಿಎ, ಸಿಎಐಐಬಿ ಮೊದಲಾದ ವೃತ್ತಿಗೆ ಪೂರಕವಾದ ಶಿಕ್ಷಣ ಸಂಪಾದಿಸಿ, ಸಾಹಿತ್ಯಾಭ್ಯಾಸಿಯೂ, ನಿರಂತರ ಓದುಗರೂ ಆಗಿರುವ ಇವರು ವ್ಯಾವಹಾರಿಕ ಕನ್ನಡಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಖಜಾನೆ ವ್ಯವಸ್ಥಾಪನ (ಟ್ರೆಜರಿ ಮ್ಯಾನೇಜ್‌ಮೆಂಟ್) ಬಗ್ಗೆ ಬರೆದ ಮಹಾಪ್ರಬಂಧಕ್ಕೆ ಫ್ಲೋರಿಡಾ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಹಲವಾರು ಲೇಖಕರ, ಕವಿಗಳ ಪರಿಚಯವನ್ನು ತಮ್ಮ

ಕಂಚಿನ ಕಂಠದಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಮಾಡಿ ಅವುಗಳನ್ನು ಯೂಟ್ಯೂಬ್‌ನಲ್ಲಿ ದಾಖಲಿಸಿದ್ದಾರೆ. ಅಲ್ಲದೆ, ಹೆಸರಾಂತ ಕವಿಗಳ ಪರಿಚಯವನ್ನೊಳಗೊಂಡ 'ಧ್ರುವತಾರೆಗಳು' ಎಂಬ ಕೃತಿಯನ್ನೂ ಪ್ರಕಟಿಸಿದ್ದಾರೆ. ಹಣಕಾಸು ಕ್ಷೇತ್ರಕ್ಕೆ ಸಂಬಂಧಿಸಿದಂತೆ 'ಫೈನಾನ್ಸಿಯಲ್ ಡಿರೈವಿಟೀಸ್' ಎಂಬ ಆಂಗ್ಲ ಕೃತಿರಚನೆಯಲ್ಲೂ ತೊಡಗಿದ್ದು ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ ಎಂದು ಪರಿಚಯಿಸಿ ಜಗನ್ನಾಥ್ ಅವರನ್ನು ಸ್ವಾಗತಿಸಿದರು.

ಆರಂಭದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ 'ಜಯತಿ ಜಯತಿ ಭಾರತಮಾತಾ' ಎಂಬ ಗೀತೆಯನ್ನು ಶ್ರೀ ಕೆ.ಆರ್.ವೆಂಕಟೇಶ್ (ಮನು) ರವರು ಸುಶ್ರಾವ್ಯವಾಗಿ ಹಾಡಿದರು.

ಇತ್ತೀಚೆಗೆ ನಮ್ಮನ್ನು ಅಗಲಿದ ಡಾ. ಎಂ.ಎಚ್.ಕೃಷ್ಣಯ್ಯ ಹಾಗೂ ಶ್ರೀ ಶಿವಮೊಗ್ಗ ಸುಬ್ಬಣ್ಣ ಅವರ ಆತ್ಮಕ್ಕೆ ಶಾಂತಿ ಕೋರಿ ಅರ್ಧ ನಿಮಿಷ ಮೌನ ಆಚರಿಸಲಾಯಿತು.

ನಂತರ ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ನಮ್ಮ ದೇಶವು ಸ್ವತಂತ್ರವಾಗಿ, ರಾಜಕೀಯವಾಗಿ ಏಕತೆ ಪಡೆದು ಈಗ ೭೫ ವರ್ಷಗಳಾಗಿವೆ. ಯುದ್ಧ, ಆಂತರಿಕ ಕ್ಷೋಭೆ, ಬರಗಾಲ, ಅತಿವೃಷ್ಟಿಯೇ ಮೊದಲಾದ ಸವಾಲುಗಳನ್ನು ಎದುರಿಸಿ ಇಂದು ವಿಶ್ವದಲ್ಲಿ ಎದ್ದುಕಾಣುವ ದೇಶವಾಗಿರುವುದು ಸಂತಸದ ವಿಚಾರ. ಭಾರತದ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಿ ಎಲ್ಲರಿಗೂ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಶುಭಾಶಯಗಳನ್ನು ತಿಳಿಸಿದರು.

ವೇದಿಕೆಯ ಸದಸ್ಯರು ಹೆಚ್ಚು ಹೆಚ್ಚು ಸಾಧನೆ ಮಾಡುತ್ತಿರುವುದು ಸಂತಸ ತಂದಿದೆ ಎಂದ ಅವರು ಅನೇಕ ಸದಸ್ಯರ ಕೃತಿಗಳು ಜನಪ್ರಿಯ ದಿನಪತ್ರಿಕೆ ವಾರ/ಮಾಸಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಬಗ್ಗೆ ವಿವರಿಸಿ ಎಲ್ಲರನ್ನೂ ಅಭಿನಂದಿಸಿದರು.

ಖೋ ಕಾದಂಬರಿಗೆ ಶ್ರೀ ಶ್ರೀಧರಮೂರ್ತಿಯವರು ಮುನ್ನುಡಿ ಬರೆದಿದ್ದಾರೆ. ಈ ಕೃತಿ ಹಾಗೂ ಪ್ರಧಾನ ಗುರುದತ್ತರವರು ರಚಿಸಿರುವ 'ಎಚ್ಚೆಸ್ಕೆ ಬದುಕು ಬರಹ' ಕೃತಿ ಸದ್ಯದಲ್ಲೇ ಮುದ್ರಣಕ್ಕೆ ಹೋಗಲಿದೆ ಎಂದೂ ರವೀಂದ್ರ ತಿಳಿಸಿದರು. .

ಸಾಹಿತ್ಯ ದಾಸೋಹ.ಕಾಮ್ ಎಂಬ ಜಾಲತಾಣ ಆರಂಭಿಸಲು ಶ್ರೀ ಗುರುರಾಜ ಶಾಸ್ತ್ರಿಯವರು ಮುಂದೆ ಬಂದಿದ್ದು ಇದರಲ್ಲಿ ಸಾಹಿತ್ಯ ದಾಸೋಹದ ಸಂಚಿಕೆಗಳನ್ನು ಮತ್ತು ಇತರ ವಿಶೇಷ ಕಾರ್ಯಕ್ರಮಗಳ ವಿವರಗಳನ್ನು ಹಾಕಲಾಗುವುದು ಎಂದು ಹೇಳಿದರು.

ಮುಂದಿನ ಭಾನುವಾರ ದಿನಾಂಕ ೧೩.೦೮.೨೨ ರಂದು 'ಕನ್ನಡ ವಾಙ್ಮಯಕ್ಕೆ ಪ್ರೊ. ಜಿ.ವೆಂಕಟಸುಬ್ಬಯ್ಯನವರ ಕೊಡುಗೆ' ಎಂಬ ವಿಷಯದ ಬಗ್ಗೆ ಡಾ. ಚಿಂತಾಮಣಿ ಕೊಡ್ಲೆಕೆರೆಯವರು ಮಾತನಾಡಲಿದ್ದು, ಈ ಕಾರ್ಯಕ್ರಮ ನೋಡಿಯೋ ವೇದಿಕೆಯಲ್ಲಿ ಅಂತರಜಾಲ ಮೂಖೇನ ನಡೆಯಲಿದ್ದು ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಿದರು.

ನಂತರ ಶ್ರೀ ಎಸ್. ಶೃಂಗೇಶ್ವರ ಶರ್ಮರವರು 'ಸಾಹಿತ್ಯ ದಾಸೋಹ ೨೦೩' ರ ಪ್ರಸ್ತುತಿಗಳನ್ನೊಳಗೊಂಡ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು. ಪ್ರತಿ ಸಂಚಿಕೆಯನ್ನು ಹೊರತರುವಾಗ ತಮ್ಮದೇ ಆದ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದು, ಸಂಚಿಕೆಗೆ ದೊರೆಯುತ್ತಿರುವ ಪ್ರೋತ್ಸಾಹ ಮತ್ತು ಮೆಚ್ಚುಗೆ ಸಂತಸ ತಂದಿದೆ ಎಂದರು. .ಕಳೆದ ದಾಸೋಹದ ಸಂಚಿಕೆಯನ್ನು ಪ್ರದರ್ಶಿಸಿದ ಅವರು ದಾಸೋಹದ ಲೇಖನಗಳಲ್ಲದೆ ಈ ಬಾರಿ ವೇದಿಕೆಯಲ್ಲಿ ದಾಸೋಹದ ಬೆಳವಣಿಗೆಯ ಬಗ್ಗೆ ಕ್ರಿಯೆ–ಪ್ರತಿಕ್ರಿಯೆಯಾಗಿ ಮೂಡಿಬಂದ ಶ್ರೀ ಬೆಂ.ಶ್ರೀ.ರವೀಂದ್ರ ಹಾಗೂ ಶ್ರೀ ಜಿ.ವಿ.ಅರುಣರವರ ಕವನಗಳ ಜುಗಲ್ಬಂದಿಯನ್ನು ಸಂಚಿಕೆಯಲ್ಲಿ ದಾಖಲಿಸಿರುವುದಾಗಿ ತಿಳಿಸಿದರು. ದಾಸೋಹದ ಸಂಚಿಕೆಗಳನ್ನು ಪ್ರಸ್ತಾವಿತ ಸಾಹಿತ್ಯ ದಾಸೋಹ ಜಾಲತಾಣದಲ್ಲಿ ದಾಖಲಿಸಲಿರುವುದು ಸ್ವಾಗತಾರ್ಹ ಎಂದರು.

ನಂತರ ಹದಿನೇಳು ಜನ ಸಾಹಿತ್ಯ ದಾಸೋಹಿಗಳು ತಮ್ಮ ವಿವಿಧ ಸ್ವರಚಿತ ಪ್ರಸ್ತುತಿಗಳನ್ನು ಮಂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ಜೆ.ಎನ್.ಜಗನ್ನಾಥ್‌ರವರು ಮಾತನಾಡಿ ಶಿಸ್ತು ಮತ್ತು ಪ್ರತಿಭೆಯಿಂದ ಸಾಹಿತ್ಯವನ್ನು ಬೆಳಗುತ್ತಾ ಸಾಗುತ್ತಿರುವ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಮನ್ವಯ ಸಮಿತಿಯ ಕಾರ್ಯಚಟುವಟಿಕೆಗಳಿಗೆ ಚೇತನವಾಗಿದ್ದ ಪ್ರಾ. ಎಚ್ಚೆಸ್ಕೆಯವರನ್ನು ಸ್ಮರಿಸಿದ ಅವರು 'ಬ್ಯಾಂಕಿಂಗ್ ಪ್ರಪಂಚ' ಹಾಗೂ 'ಬ್ಯಾಂಕಿಂಗ್ ನಿಘಂಟು'ಗಳನ್ನು ಬ್ಯಾಂಕಿಂಗಿಗೆ ಸಂಬಂಧಿಸಿದ ವಿಷಯಗಳಲ್ಲಿ ಗೊಂದಲ ಉಂಟಾದಾಗಲೆಲ್ಲ ಆಧರಿಸುತ್ತಿದ್ದೆ. ಸಮನ್ವಯ ಸಮಿತಿಯು ಹಲವು ಸಾಧಕರ ಗುಂಪು. ಇಂತಹ ವೇದಿಕೆಯಲ್ಲಿ ೨೦೪ನೇ ದಾಸೋಹಕ್ಕೆ ಅಧ್ಯಕ್ಷನಾಗಿರುವುದು ನನ್ನ ಸೌಭಾಗ್ಯ ಎಂದು ತಿಳಿದುಕೊಂಡಿದ್ದೇನೆ ಎಂದು ಹೇಳಿದರು. ದಾಸೋಹದಲ್ಲಿ ಪ್ರಸ್ತುತಿಗಳ ಬಗ್ಗೆಯೂ ಬಹಳ ಸೊಗಸಾಗಿ, ಪಾಂಡಿತ್ಯಪೂರ್ಣವಾಗಿ ತಮ್ಮ ಸಿರಿಕಂಠದಿಂದ ವಿಶಿಷ್ಟ ಶೈಲಿಯಲ್ಲಿ ವಿಶ್ಲೇಷಣೆ ಮಾಡಿದ ಅವರು, ಕೆಲವು ರಸವತ್ತಾದ ಪ್ರಸಂಗಗಳನ್ನು ಸಹಾ ನಡುನಡುವೆ ಉದಾಹರಿಸಿ ವೀಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಕಾರ್ಯಕ್ರಮ ನಿರ್ವಹಣೆ ಮಾಡಿದ ಶ್ರೀ ಕೆ.ಎನ್.ಮಹಾಬಲರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ.ಜೆ.ಎನ್. ಜಗನ್ನಾಥ್ ಅವರಿಗೆ, ತಮ್ಮ ಬರಹಗಳನ್ನು ಪ್ರಸ್ತುತಪಡಿಸಿದ ಎಲ್ಲಾ ದಾಸೋಹಿಗಳಿಗೆ, ವೀಕ್ಷಕರಿಗೆ ಮತ್ತು ತಾಂತ್ರಿಕ ಸಹಕಾರ ನೀಡಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ಸಾಹಿತ್ಯ ದಾಸೋಹ – 204ರ ಸಂಪೂರ್ಣ ಕಾರ್ಯಕ್ರಮವು ಸಮನ್ವಯ ಸಮಿತಿ ವೇದಿಕೆಯ ಯೂಟ್ಯೂಬ್‌ನಲ್ಲಿಯೂ ವೀಕ್ಷಣೆಗೆ ಲಭ್ಯವಿದೆ.

*****

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಡಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸ

"ರಷ್ಯಾ ಉಕ್ರೇನ್ ಯುದ್ಧ – ಅಭಿವೃದ್ಧಿಶೀಲ ರಾಷ್ಟ್ರಗಳ ಅರ್ಥವ್ಯವಸ್ಥೆಯ ಮೇಲೆ ಪರಿಣಾಮಗಳು"

ಕಾರ್ಯಕ್ರಮ ವರದಿ : ಗುರುರಾಜ ಶಾಸ್ತ್ರಿ



ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸ್ಥಾಪಿಸಿರುವ "ಡಾ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸ" ಈಬಾರಿ ದಿನಾಂಕ 12ನೇ ಆಗಸ್ಟ್ 2022ರಂದು ಸಂಜೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಡಿ.ವಿ.ಜಿ ಸಭಾಂಗಣದಲ್ಲಿ ನಡೆಯಿತು. ಸಮನ್ವಯ ಸಮಿತಿ – ಕನ್ನಡವೇ ಸತ್ಯ ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಟಿ.ಕೆ.ರಂಗನಾಥ್ ಅವರು, "ರಷ್ಯಾ ಉಕ್ರೇನ್ ಯುದ್ಧ – ಅಭಿವೃದ್ಧಿಶೀಲ ರಾಷ್ಟ್ರಗಳ ಅರ್ಥವ್ಯವಸ್ಥೆಯ ಮೇಲೆ ಪರಿಣಾಮಗಳು" ಎಂಬ ಪ್ರಚಲಿತ ಬಹುಚರ್ಚಿತ ವಿಷಯದ ಕುರಿತು ಉಪನ್ಯಾಸ ಮಾಡಿದರು.

ಅಂದು ಸಂಜೆ 6.00 ಗಂಟೆಗೆ ಶ್ರೀ ರವಿ ಕುಸಬಿಯವರ ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ ಸುಮಾರು ತೊಂಬತ್ತು ನಿಮಿಷಗಳ ಕಾಲ ವಿಷಯದ ಬಗ್ಗೆ ಕನ್ನಡದಲ್ಲಿ ನಿರರ್ಗಳ ವಾಗಿ ಮಾತನಾಡಿದ ಶ್ರೀ ಟಿ.ಕೆ.ರಂಗನಾಥ್ ಅವರ ಸಾಮರ್ಥ್ಯ ಯುವಪೀಳಿಗೆಯನ್ನು ನಾಚಿಸು ವಂತಿತ್ತು. ರಷ್ಯಾ ಉಕ್ರೈನ್ ಯುದ್ಧದ ಬಗೆಗಿನ ಆಮೂಲಾಗ್ರ ಮಾಹಿತಿ, ಯುದ್ಧದ ಮುಖ್ಯ ಕಾರಣಕರ್ತರಾದ ಎರಡೂ ದೇಶದ ಅಧ್ಯಕ್ಷರ ಪರಿಚಯ, ಎರಡೂ ದೇಶದ ಆರ್ಥಿಕ ನೀತಿಗಳು, ಯುದ್ಧಕ್ಕೆ ಕಾರಣ, ವಿವಿಧ ರಾಷ್ಟ್ರಗಳ ಆರ್ಥಿಕತೆಯ ಮೇಲೆ ಯುದ್ಧದ ಪರಿಣಾಮಗಳು, ಸ್ವಿಫ್ಟ್, ಯುಪಿಐ ಮುಂತಾದ ಹಣ ವರ್ಗಾವಣೆ ಕುರಿತ ಬ್ಯಾಂಕಿಂಗ್ ತಂತ್ರಾಂಶಗಳು, ಉಕ್ರೇನಿಗೆ ನ್ಯಾಟೋ, ಅಮೆರಿಕಾ ಮುಂತಾದ ರಾಷ್ಟ್ರಗಳ ಬೆಂಬಲ, ತೈಲೋದ್ಯಮದ ಮೇಲಿನ ಪರಿಣಾಮಗಳು, ಅಮೆರಿಕನ್ ಡಾಲರ್ಸ್ ಪ್ರಾಬಲ್ಯ, ವಿವಿಧ





ರಾಷ್ಟ್ರಗಳಲ್ಲಿ ತಲೆದೋರಿರುವ ಆರ್ಥಿಕ ಸಂಕಷ್ಟ, ಜನಸಾಮಾನ್ಯರ ನಿತ್ಯದ ಬದುಕಿನ ಮೇಲೆ ಬೆಲೆ ಏರಿಕೆಯ ಬರೆ, ಯುದ್ಧದ ಬಗ್ಗೆ ಭಾರತದ ನಿಲುವು, ಭಾರತದ ಆರ್ಥಿಕತೆಯ ಸಮರ್ಥ ನಿರ್ವಹಣೆಗೆ ಇರುವ ಸವಾಲುಗಳು, ಸದ್ಯದಲ್ಲಿಯೇ ಯುದ್ಧ ನಿಲುಗಡೆಯ ಅಸಾಧ್ಯತೆ ಮತ್ತು ಈ ಬಗ್ಗೆ ನ್ಯಾಟೋ, ಯುಎಸ್ಎ, ಚೀನಾ ಮಾತ್ರ ವಲ್ಲದೆ ಹಲವು ರಾಷ್ಟ್ರಗಳ ರಾಜಕೀಯ ಲೆಕ್ಕಾಚಾರ, ಮತ್ತು ಸ್ವಹಿತಾಸಕ್ತಿಗಳು – ಹೀಗೆ ಹಲವಾರು ವಿಷಯಗಳ ಬಗ್ಗೆ ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ತಮ್ಮ ಖಚಿತ ಅಭಿಪ್ರಾಯ ಗಳನ್ನು ಉದಾಹರಣೆ ಸಹಿತವಾಗಿ ಶ್ರೀ ರಂಗನಾಥ್ ವಿವರಿಸಿದರು. .

ಸುಮಾರು 150 ಆಸನಗಳ ಸಭಾಂಗಣದಲ್ಲಿ ಕೊನೆಯವರೆಗೂ 130ಕ್ಕೂ ಹೆಚ್ಚು ವೀಕ್ಷಕರು ತದೇಕಚಿತ್ತರಾಗಿ ಕುಳಿತದ್ದು ಶ್ರೀ ರಂಗನಾಥರ ಉಪನ್ಯಾಸ ವಿಚಾರಪ್ರಚೋದಕವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿತ್ತು. ಕಾರ್ಯಕ್ರಮದಲ್ಲಿ ಸಮನ್ವಯ ಸಮಿತಿ ಸದಸ್ಯರು ಮಾತ್ರವಲ್ಲದೆ, ವಿಷಯದ ಬಗ್ಗೆ ಆಸಕ್ತರಾಗಿ ಹಾಜರಾದ ಸಾರ್ವಜನಿಕರ ಸಂಖ್ಯೆಯೂ ಸಾಕಷ್ಟಿದ್ದುದು ವಿಶೇಷ. ಉಪನ್ಯಾಸದ ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿಯೂ ಪ್ರೇಕ್ಷಕರು ಭಾಗವಹಿಸಿ, ರಷ್ಯಾ-ಉಕ್ರೇನ್ ಯುದ್ಧ ಕುರಿತಂತೆ ತಮ್ಮ ಅನೇಕ ಗೊಂದಲಗಳನ್ನು ಹಂಚಿಕೊಂಡರು. ಶ್ರೀ ಗುರುರಾಜ ಶಾಸ್ತ್ರಿಯವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪೂರ್ಣವಾಯಿತು.

ಈ ಉಪನ್ಯಾಸ ಕಾರ್ಯಕ್ರಮವನ್ನು ವೇದಿಕೆಯ ಯೂಟ್ಯೂಬ್‌ನಲ್ಲಿಯೂ ವೀಕ್ಷಿಸಬಹುದು.



*****

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ವಿಶೇಷ ಉಪನ್ಯಾಸ

ಕನ್ನಡ ವಾಙ್ಮಯಕ್ಕೆ ಪ್ರೊ ಜಿ ವೆಂಕಟಸುಬ್ಬಯ್ಯ ಅವರ ಕೊಡುಗೆ

ಉಪನ್ಯಾಸಕಾರರು: ಡಾ ಚಿಂತಾಮಣಿ ಕೊಡ್ಲೆಕೆರೆ

ಕಾರ್ಯಕ್ರಮ ವರದಿ : ಹು.ವಾ.ಶ್ರೀಪ್ರಕಾಶ್

ದಿನಾಂಕ 21ನೇ ಆಗಸ್ಟ್ 2022ರಂದು ಭಾನುವಾರ ಸಂಜೆ 05.00 ಗಂಟೆಗೆ ಅಂತರಜಾಲ ಮುಖೇನ ಕಾರ್ಯಕ್ರಮ ಆರಂಭವಾಯಿತು.



ಆರಂಭದಲ್ಲಿ ಪ್ರಾಸ್ತಾವಿಕ ಹಾಗೂ ಸ್ವಾಗತ ಭಾಷಣ ಮಾಡಿದ ಪ್ರಧಾನ ಸಂಚಾಲಕ ರಾದ ಶ್ರೀ ಬೆಂ.ಶ್ರೀ.ರವೀಂದ್ರರವರು ಆಗಸ್ಟ್ 23ರಂದು ಪ್ರೊ.. ಜಿ. ವೆಂಕಟಸುಬ್ಬಯ್ಯ ನವರ ಜನ್ಮ ದಿನ. ಜಿವಿಯವರಿಗೂ ನಮ್ಮ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಗೂ ಒಂದು ರೀತಿ ವಿಶಿಷ್ಟವಾದ ಸಂಬಂಧವಿದೆ. ಪ್ರಾ. ಎಚ್ಚೆಸ್ಕೆ ಯವರ ಬಗ್ಗೆ ಅವರಿಗೆ ಅಪಾರ ಅಭಿಮಾನ. ಸಮನ್ವಯ ಸಮಿತಿಯ ಆಶ್ರಯದಲ್ಲಿ 1994ರಲ್ಲಿ ಮೈಸೂರಿನಲ್ಲಿ 25ನೇ ಬ್ಯಾಂಕಿಂಗ್ ಕಮ್ಮಟವನ್ನು ಆಯೋಜಿಸಿದಾಗ ಜೀವಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಂದು ಎಚ್ಚೆಸ್ಕೆಯವರನ್ನು ಸನ್ಮಾನಿಸಲು ಅವರಿಗಿಂತ ಹಿರಿಯರಾದ ನಿಘಂಟು ತಜ್ಞರು ಬಂದಿದ್ದು ನಮಗೆಲ್ಲಾ ಖುಷಿತಂದಿತ್ತು. ಜಿ.ವಿ.ಯವರು ಹಲವು ಬಾರಿ ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ವೇದಿಕೆಗೂ ಬಂದಿದ್ದು, ಭಾರತೀಯ ಸ್ಟೇಟ್ ಬ್ಯಾಂಕು ತನ್ನ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಅವರನ್ನು ಸನ್ಮಾನಿಸಿದೆ. ಕರೋನಾ ಸಮಯದಲ್ಲಿ ಶ್ರೀಮತಿ ಶಾಂತಾ ನಾಗಮಂಗಲರವರು ಮೇಘದೂತ ಗಮಕ ವಾಚನ–ವ್ಯಾಖ್ಯಾನ ಕಾರ್ಯಕ್ರಮ ನಡೆಸುತ್ತಿದ್ದಾಗ ನಮ್ಮ ನೋಡಿಯೋ ವೇದಿಕೆಯಲ್ಲೂ ಜೀವಿಯವರು ಪಾಲ್ಗೊಂಡದ್ದು ವಿಶೇಷ ಮತ್ತು ನಮ್ಮೆಲ್ಲರ ಮನದಲ್ಲಿ ಚಿರನೂತನವಾಗಿ ಉಳಿಯುವ ಘಟನೆ. ಕಳೆದ ವರ್ಷ ಜಿವಿಯವರ ಅಗಲಿಕೆಯ ನಂತರ ನಾವು ವೇದಿಕೆಯಲ್ಲಿ ಒಂದು ಕಾರ್ಯಕ್ರಮ ಮಾಡಿದ್ದೆವು.. 'ಕನ್ನಡ ವಾಙ್ಮಯಕ್ಕೆ ಪ್ರೊ ಜಿ.ವೆಂಕಸುಬ್ಬಯ್ಯನವರ ಕೊಡುಗೆ' ಎಂಬ ವಿಷಯದ ಬಗ್ಗೆ ಪ್ರಾಜ್ಞರಿಂದ ಉಪನ್ಯಾಸ ಏರ್ಪಡಿಸಬೇಕು ಎಂಬುದು ನಮ್ಮ ಬಯಕೆಯಾಗಿತ್ತು.

ಜಿವಿಯವರ 110ನೇ ವರ್ಧಂತಿಯ ಸಮಯದಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ಉಪನ್ಯಾಸ ನೀಡಲು ಆಗಮಿಸಿರುವ ಡಾ.ಚಿಂತಾಮಣಿ ಕೊಡ್ಲೆಕೆರೆಯವರು 2019ರಲ್ಲಿ ನಮ್ಮ ಸಮನ್ವಯ ಸಮಿತಿ–ಕನ್ನಡವೇ ಸತ್ಯ ವೇದಿಕೆ ಹೊರತಂದ ಐದನೆಯ ಸಾಹಿತ್ಯ ಸಂಚಿಕೆ 'ಸಾಹಿತ್ಯ ಸಿರಿ'ಯನ್ನು ಬಿಡುಗಡೆ ಮಾಡಿದ್ದರು. ಈಗ ಎರಡನೇ ಬಾರಿಗೆ ನಮ್ಮ ಇಂದಿನ ಕಾರ್ಯಕ್ರಮಕ್ಕೆ ಒಪ್ಪಿ ಬಂದಿರುವುದು ನಮ್ಮ ಭಾಗ್ಯ ಎಂದು ಹೇಳಿ ಅವರಿಗೆ ಸ್ವಾಗತ ಬಯಸಿದರು.



ಶ್ರೀ ಜಿ.ವೆಂಕಟಸುಬ್ಬಯ್ಯನವರ ಪುತ್ರರಾದ ಶ್ರೀ ಜಿ.ವಿ.ಅರುಣರವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯಿಂದ ಗುರುತಿಸಿಕೊಳ್ಳುತ್ತಿದ್ದಾರೆ. ಕನ್ನಡ ಧ್ವಜವನ್ನು ನಿಷ್ಠೆ, ಪ್ರೀತಿಯಿಂದ ಮುನ್ನಡೆಸುತ್ತಿದ್ದು ಇಂದಿನ ಕಾರ್ಯಕ್ರಮ ಆಯೋಜಿಸಲು ನೆರವಾಗಿದ್ದಾರೆ. ಅವರು ನಮ್ಮ ವೇದಿಕೆಯ ಸದಸ್ಯ ರಾಗಿರುವುದು ನಮಗೆಲ್ಲ ಹೆಮ್ಮೆ ಎಂದು ಹೇಳಿ ಶ್ರೀ ಅರುಣರಿಗೂ, ಕಾರ್ಯಕ್ರಮಕ್ಕೆ ಆಗಮಿಸಿದ ಜಿವಿಯವರ ಅಭಿಮಾನಿಗಳು, ಶಿಷ್ಯರು ಹಾಗೂ ವೇದಿಕೆಯ ಎಲ್ಲ ಸದಸ್ಯರಿಗೂ ಸ್ವಾಗತ ಕೋರಿದರು.

ಶ್ರೀ ಕೆ.ಎನ್. ಮಹಾಬಲರವರು ಶ್ರೀ ಚಿಂತಾಮಣಿ ಕೊಡ್ಲೆಕೆರೆಯವರನ್ನು ಪರಿಚಯಿಸುತ್ತಾ, ಅವರು ನಮ್ಮ ವೇದಿಕೆಗೆ ಅಪರಿಚಿತರಲ್ಲ. ಈ ಹಿಂದೆ ನಮ್ಮ 'ಸಾಹಿತ್ಯ ಸಿರಿ' ಸಂಚಿಕೆ ಬಿಡುಗಡೆ ಮಾಡಿ, ವಿದ್ವತ್ಪೂರ್ಣವಾಗಿ ಮಾತನಾಡಿದ್ದು ನಮ್ಮ ಮನದಲ್ಲಿ ಅನುರಣಿಸುತ್ತಿದೆ. ಮೂಲತಃ ಗೋಕರ್ಣದವರಾದ ಅವರು ಭಾರತೀಯ ಸಂಚಾರ ನಿಗಮದಲ್ಲಿ ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾಗಿ ಸಾಹಿತ್ಯದ ಅನುಸಂಧಾನದಲ್ಲಿ ಪ್ರವೃತ್ತರಾಗಿದ್ದಾರೆ. ಈ ಜಗತ್ತು, ಭೂಮಧ್ಯ ರೇಖೆ, ಗೋವಿನ ಹೆಜ್ಜೆ, ಚಂದ್ರದೀಪ ಮುಂತಾದ ಕವನ ಸಂಕಲನಗಳು, ಸಿಂಡ್ರೆಲಾ ಮತ್ತು ಅಂಬ್ರೆಲಾ ಮಕ್ಕಳ ಕವನಗಳು, ಮಕ್ಕಳಿಗಾಗಿ ರಮಣ ಮಹರ್ಷಿ, ಗೌರೀಶ ಕಾಯ್ಕಿಣಿ, ನಾರಾಯಣ ಗುರು, ವಿನೋಬಾ ಭಾವೆ ಮುಂತಾದವರ ಜೀವನಚಿತ್ರಗಳು, ಗಿಂಡಿಯಲ್ಲಿ ಗಂಗೆ ಎಂಬ ಪ್ರವಾಸ ಕಥನ, 'ಅಂತರಂಗದ ಆಕಾಶ' ಎಂಬ ಸಂಶೋಧನಾ ಪ್ರಬಂಧ ಮತ್ತಿತರ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಉಪ್ಪಿನ ಗೊಂಬೆ ಕವನ ಸಂಕಲನಕ್ಕೆ ಪುತಿನ ಪ್ರಶಸ್ತಿ ಲಭಿಸಿದೆ. ಇದಲ್ಲದೆ ಮಾಸ್ತಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಕಾಂತಾವರ ಕನ್ನಡ ಸಂಘದ ಮುದ್ದಣ ಕಾವ್ಯ ಪ್ರಶಸ್ತಿ, ಹೀಗೆ ಹಲವು ಪ್ರಶಸ್ತಿಗಳಿಗೆ ಇವರು ಭಾಜನರಾಗಿದ್ದಾರೆ. ಬಹುಶೃತರಾದ ಇವರು ಕನ್ನಡ ವಾಙ್ಮಯಕ್ಕೆ ಶಬ್ದ ಬ್ರಹ್ಮ ಜಿವಿಯವರ ಕೊಡುಗೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿರುವುದು ಸಂತಸ ತಂದಿದೆ ಎಂದರು.

ನಂತರ ಡಾ ಕೊಡ್ಲೆಕೆರೆಯವರು ಸುಮಾರು ಒಂದು ಗಂಟೆ ಕಾಲ ಉಪನ್ಯಾಸ ನೀಡಿದರು. ಅದರ ಸಾರಾಂಶ ಹೀಗಿದೆ:


ಕನ್ನಡ ಶಬ್ದ ಪ್ರಪಂಚಕ್ಕೆ ಜೀವಿಯವರ ಕೊಡುಗೆ ಎಂಬ ವಿಷಯದ ಬಗ್ಗೆ, ಅದರಲ್ಲೂ ಹತ್ತಿರ ಹತ್ತಿರ 108 ವರುಷ ಬದುಕಿದ ಧೀಮಂತರ ಬಗ್ಗೆ ಅಲ್ಪಾವಧಿಯಲ್ಲಿ ಮಾತಾಡುವುದು ಬಹಳ ಕಷ್ಟದ ಕೆಲಸ. ಜೀವಿಯವರ ದೀರ್ಘಾವಧಿ ಜೀವನ ನೆನಪು ಮಾಡಿಕೊಂಡಾಗ ಕಾಣುವುದು ಮೈಸೂರು ಪ್ರಾಂತ್ಯದ ಒಂದು ಹಳ್ಳಿ, ಒಂದು ಪುರೋಹಿತರ ಮನೆತನ. ಪೌರೋಹಿತ್ಯವನ್ನು ನಂಬಿಕೊಂಡು ಬದುಕುತ್ತಿರುವ ಅಜ್ಜ, ಅವರ ಬೆನ್ನ ಹಿಂದೆ ಮೊಮ್ಮಗ – ಇದು ಕಣ್ಣಿಗೆ ಕಟ್ಟುವ ಚಿತ್ರ.. ಅಜ್ಜ ಅಮರಕೋಶ ಹೇಳಿದರೆ ಮೊಮ್ಮಗ ಪುನರುಚ್ಚರಿಸುತ್ತಾನೆ. ಸುಮಾರು ಎಂಟು ವರ್ಷದ ಒಳಗಿನ ಜಿವಿಯವರು ಅಮರ ಕೋಶವನ್ನು ನೆನಪಿನಿಂದ ಹೇಳಬಲ್ಲವರಾಗಿದ್ದರು.

ಆ ಎಳೆಯ ವಯಸ್ಸಿನಲ್ಲಿ ಅಮರ ಕೋಶ, ರುದ್ರದಂತಹ ಎಲ್ಲ ಮಂತ್ರಪಾಠಗಳು ಸಹಜವಾದ ದಿನದ ಪ್ರಕ್ರಿಯೆಯಲ್ಲಿ ಸಿಕ್ಕಿದ್ದು, ಜಿ.ವಿ.ಯವರನ್ನು ಅಮರವಾದ ಶಬ್ದ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಂತೆ ಆಯಿತೆನ್ನಬಹುದು. ಸಂತೃಪ್ತಿಯಲ್ಲಿ

ಸಂತೋಷವಿದೆ ಎಂಬ ಸಾತ್ವಿಕತೆಯನ್ನು ನಿರೂಪಿಸಿದವರು ಜಿ.ವಿ.ಯವರ ತಂದೆಯವರಾದ ತಿಮ್ಮಣ್ಣಯ್ಯ ಅವರು. ತಂದೆಯವರ ಜೊತೆ ಸಾಹಿತ್ಯದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದ ಜಿವಿಯವರಿಗೆ ಅವರ ತಂದೆಯೇ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದರು


ಹಿರಿಯ ತಲೆಮಾರಿನ ಬಿಎಂಶ್ರೀ, ತೀನಂಶ್ರೀಯವರು ಜಿ.ವಿ.ಯವರಿಗೆ ಶಿಕ್ಷಕರಾಗಿದ್ದರು. ಆ ಕಾಲಘಟ್ಟದಿಂದ ನಮ್ಮ ಕಾಲ ಘಟ್ಟದವರೆಗಿನ ಒಟ್ಟೂ ಸಾಹಿತ್ಯದ ಚಲನೆಯನ್ನು ಕಣ್ಣಮುಂದೆ ಕಂಡವರು ಜಿ.ವಿಯವರು. ಒಮ್ಮೆ ಶ್ರೀ ಬಿ.ಎಂ. ಶ್ರೀಕಂಠಯ್ಯನವರು ಮೌಖಿಕ ಪರೀಕ್ಷೆಯಲ್ಲಿ ಎರಡೂವರೆ ಗಂಟೆ ಸಂದರ್ಶನ ಮಾಡಿ ಹಳಗನ್ನಡ ಸಾಹಿತ್ಯದಿಂದ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ಕೇಳಿ, "ನೋಡಿ ವೆಂಕಟಸುಬ್ಬಯ್ಯ, ಕನ್ನಡವನ್ನು ನಿಮ್ಮ ಕೈಯಲ್ಲಿಟ್ಟಿದ್ದೇನೆ. ಇದನ್ನು ಮುಂದೆ ತೆಗೆದುಕೊಂಡು ಹೋಗುವುದು ನಿಮ್ಮ ಜವಾಬ್ದಾರಿ" ಎಂದರಂತೆ. ಈ ದೊಡ್ಡ ಜವಾಬ್ದಾರಿಯನ್ನು ಜಿವಿಯವರು ಹಲವು ಪದಕೋಶಗಳ ಮೂಲಕ, ಅನೇಕ ಶಬ್ದಾರ್ಥಗಳನ್ನು ಕನ್ನಡಿಗರಿಗೆ ಮುಟ್ಟಿಸುವ ಮೂಲಕ ಸಾರ್ಥಕವಾಗಿ ಪೂರೈಸಿದ್ದಾರೆ. ಕನ್ನಡದ ಅಸ್ಮಿತೆಯನ್ನು ಮತ್ತೆ ಪ್ರತಿಷ್ಠಾಪಿಸಿ ಆರಂಭದ ದಿನಗಳಿಂದ ಈ ಮಟ್ಟಕ್ಕೆ ತಂದಿದ್ದಾರೆ. ಜೀವಿಯವರ ವ್ಯಕ್ತಿತ್ವದ ಹಿಂದೆ ಸಾಂಸ್ಕೃತಿಕವಾದ ಹಲವು ವ್ಯಕ್ತಿತ್ವಗಳು ಇವೆ. "ಜೀವಿಯವರೇ ಸರಸ್ವತಿ ನಮಗಿತ್ತ ಕೊಡುಗೆ" ಎಂದು ಲೇಖಕಿ ಶ್ರೀಮತಿ ಎಂ.ಕೆ.ಇಂದಿರಾರವರು ಹೇಳಿರುವುದು ಉತ್ಪ್ರೇಕ್ಷೆಯಲ್ಲದ ಮಾತು.


ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘವಾಗಿ ಸೇವೆ ಸಲ್ಲಿಸಿದ ಅವರು ಶಿಕ್ಷಕರಾಗಿ ಬಹುಪಾಲು ವಿಜಯಾ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಸಮುದಾಯವನ್ನು ಮುನ್ನಡೆಸಿದರು. ಕನ್ನಡ ಶಿಕ್ಷಕನಿಗೆ ಒಂದು ಬಗೆಯ ಅನಾದರಣೆ ಇದ್ದ ಕಾಲದಲ್ಲಿ, ಟಿಎಸ್ಸಾರ್‌ರವರು ಹೇಳಿದಂತೆ ಕನ್ನಡಕ್ಕೆ ಸೂಟು ತೊಡಿಸಿದ ಜಿವಿಯವರು ಹೆರಾಲ್ಡ್ ಕಾರನ್ನು ಇಟ್ಟುಕೊಂಡು ಭೌತಿಕ ಲೋಕದಲ್ಲೂ ಕನ್ನಡ ಶಿಕ್ಷಕನಿಗೆ ಸ್ಥಾನಮಾನವಿದೆಯೆಂದು ತೋರಿದರು. ನಿವೃತ್ತರಾದ ಬಳಿಕ ಆರ್ಥಿಕವಾಗಿ ಲಾಭ ತಂದುಕೊಡದ, ಆದರೆ ಅರ್ಥಪೂರ್ಣವಾದ ಕನ್ನಡ ಸಾಹಿತ್ಯ ಪರಿಷತ್ತಿನ ಪದಕೋಶ ನಿರ್ಮಾಣದ ಕೆಲಸಕ್ಕೆ ಜೀವಿಯವರು ಎರಡು ದಶಕಗಳ ಕಾಲ ತಮ್ಮನ್ನು ಅರ್ಪಿಸಿಕೊಂಡರು. ಶಬ್ದ ಎನ್ನುವುದೊಂದು ಸಾಗರ ಅದರ ಆಳ ಅಗಲ ತಿಳಿಯುವುದು ಯಾರಿಂದಲೂ ಸಾಧ್ಯವಾಗದು ಎಂಬ ಅರ್ಥಕೊಡುವ ಕೇಶಿರಾಜನ ಮಾತನ್ನು ಸಾಧ್ಯಮಾಡಿ ತೋರಿದಂತೆ ಎಂಟು ಸಂಪುಟಗಳ ಪದಕೋಶ ನಿರ್ಮಾಣ ಮಾಡಿದರು. ಇವರು ರಚಿಸಿದ ಇತರ ಪದಕೋಶಗಳೆಂದರೆ,



1. ಇಗೋ ಕನ್ನಡ (ಸಾಮಾಜಿಕ ನಿಘಂಟು) – ಪ್ರಜಾವಾಣಿ ದಿನಪತ್ರಿಕೆಯಲ್ಲಿ ಓದುಗರ ಪ್ರಶ್ನೆಗೆ ಕೊಟ್ಟ ಉತ್ತರಗಳು; 2. ಮುದ್ದಣ ಪದ ಪ್ರಯೋಗ ಕೋಶ; 3. ಐಬಿಎಚ್ ಕನ್ನಡ ಕನ್ನಡ ಇಂಗ್ಲೀಷ್ ನಿಘಂಟು; 4. ಕನ್ನಡ ಕನ್ನಡ ಸಂಕ್ಷಿಪ್ತ ನಿಘಂಟು; 5.ಎರವಲು ಪದಕೋಶ; 6. ಕನ್ನಡ ನಿಘಂಟುಶಾಸ್ತ್ರ ಪರಿಚಯ; 7.ಕನ್ನಡ ನಿಘಂಟು ಪರಿವಾರ; 8. ಕನ್ನಡ ಕ್ಲಿಷ್ಟ ಪದಕೋಶ; 9.ಪ್ರಿಸಂ ಕನ್ನಡ ಇಂಗ್ಲೀಷ್ ನಿಘಂಟು, 9. ಪ್ರಿಸಮ್ ಇಂಗ್ಲಿಷ್–ಕನ್ನಡ ಶಾಲಾ ನಿಘಂಟು ಇತ್ಯಾದಿ.

ಜೀವಿಯವರಿಗೆ ಇಷ್ಟೆಲ್ಲ ಕೆಲಸ ಮಾಡಿದರೂ ತೃಪ್ತಿ ಇಲ್ಲ .ಇನ್ನೂ ಎಷ್ಟೊಂದು ಮಾಡಬಹುದಿತ್ತು ಎಂಬ ಚಿಂತೆ. ತಯಾರಿಸಿದ ಅಮೂಲ್ಯ ಟಿಪ್ಪಣಿಗಳನ್ನು ಕಾಪಾಡುವ ಕೆಲಸವೂ ಆಗಲಿಲ್ಲ ಎಂಬ ಬೇಸರವಿತ್ತು. ಜಿ.ವಿ.ಯವರಿಗೆ ನೂರು







ವರ್ಷಗಳು ತುಂಬಿದ ಹೊತ್ತಿನಲ್ಲಿ ಶ್ರೀ ಕೊಳಗಿಶಂಕರ ನಾರಾಯಣ ಉಪಾಧ್ಯಾಯರು ಮಾಡಿದ ಸುದೀರ್ಘ ಸಂದರ್ಶನದಲ್ಲಿ ನಡೆಸಿದಶಬ್ದ ಜಿಜ್ಞಾಸೆಯ ಒಂದು ದೃಷ್ಟಾಂತ ಹೀಗಿದೆ:


ಹಡಪದ ಅಪ್ಪಣ್ಣ ಕವಿಯ ಒಂದು ವಚನದ ಸಾಲು "ಬೆಲ್ಲಕ್ಕೆ ಚದುರ ರಸ ಉಂಟಲ್ಲದೆ ಸಿಹಿಗೆ ಉಂಟೇ ಅಯ್ಯಾ". ಇಲ್ಲಿ ಚದುರ ಪದಕ್ಕೆ ಜಾಣ ಎಂಬ ಅರ್ಥ ಹೊಂದದು. ಚದುರಶ್ರ ಪದದ ತದ್ಭವ ಚದುರಸ ಅಂದರೆ ಚೌಕ. ಬೆಲ್ಲಕ್ಕೆ ಚೌಕಾಕಾರವಲ್ಲದೆ ಸಿಹಿಗೆ ಉಂಟೇ ಎಂಬ ಅರ್ಥ. ಇದೊಂದು ಮಹಾಪ್ರಸವ. ಈ ಅರ್ಥ ಹುಡುಕುವ ಹಿಂದೆ ಶ್ರಮವೆಷ್ಟು. ಇದು ಜೀವಿಯವರು ಕೆಲಸ ಮಾಡುತ್ತಿದ್ದ ಸ್ವರೂಪ .ಒಂದೊಂದು ಶಬ್ದದ ಅರ್ಥ ಹುಡುಕುವುದು ಸುಲಭವಲ್ಲ

ಕೊಡ್ಲೆಕೆರೆಯವರು ಜೀವಿಯವರ ಪಯಣದ ಒಂದು ನೆನಹನ್ನು ಜಿ.ವಿ.ಅರುಣರವರ ಪುಸ್ತಕದಿಂದ ಉದಾಹರಿಸಿದರು. ಜೀವಿ ಯವರು ಯಾವುದೇ ಊರಿಗೆ ಹೋದರೂ ಅಲ್ಲಿನ ಸ್ಥಳೀಯ ಪತ್ರಿಕೆ ಪಡೆದು ಓದುತ್ತಿದ್ದರಂತೆ. ಹೀಗೊಮ್ಮೆ ಬೆಳಗಾವಿಯ ಪತ್ರಿಕೆಯಲ್ಲಿ ಕಂಡ 'ಅಗ್ದಿ ಅಚಾನಕ್ಕಾಗಿ'ಎಂಬ ಪದವನ್ನು ಗಮನಿಸಿದ ಅವರು ಈ ಪದ ಬಹಳ ಸೊಗಸಾಗಿದೆ, ಸ್ವೀಕಾರಾರ್ಹವಾಗಿದೆ ಎಂದರಂತೆ.

ಇಂಗ್ಲೀಷಿನಲ್ಲಿ synonimಗೆ ಸಮಾನಾರ್ಥ ಪದ ಎನ್ನುತ್ತೇವೆ ಒಂದು ಭಾಷೆಯಲ್ಲಿ ಒಂದು ಪದಕ್ಕೆ ಒಂದೇ ಅರ್ಥವಿರುತ್ತದೆ. ಆದರೆ ಸಮೀಪಾರ್ಥದ ಅನೇಕ ಶಬ್ದಗಳಿರಬಹುದು. ಪ್ರತಿಯೊಂದು ಪದವೂ ಸ್ವತಂತ್ರ ಮತ್ತು ಅದನ್ನೇ ಸೂಚಿಸುವ ವಿವಿಧ ಅರ್ಥಗಳಿರುತ್ತವೆ. ಉದಾಹರಣೆಗೆ 'ಆರಿಸು' ಎಂಬ ಪದಕ್ಕೆ ಆಯ್ಕೆಮಾಡು, ಶೋಧಿಸು, ತೆಗೆದಿಡು, ತಪಾಸಣೆ ಮಾಡು, ಚುನಾಯಿಸು ಮುಂತಾದ ಸಮಾನಾರ್ಥಕ ಪದಗಳಿದ್ದು ಇವೆಲ್ಲಕ್ಕೂ ಇರುವ ಬೇರೆ ಬೇರೆ ಅರ್ಥಗಳನ್ನು ಗಮನಿಸಿದರೆ ಎಲ್ಲವೂ ಬೇರೆ ಬೇರೆಯೇ! ಈ ಕಾರಣದಿಂದ ಸಮಾನಾರ್ಥ ಪದ ಎನ್ನುವುದಕ್ಕಿಂತ ಸಮೀಪಾರ್ಥ ಪದ ಎನ್ನುವುದೇ ಸೂಕ್ತ. ಕನ್ನಡಕ್ಕೆ ಒಂದು ಸಮೀಪಾರ್ಥ ಪದಕೋಶ ಬೇಕು ಎನ್ನುತ್ತಿದ್ದರಂತೆ. ಹೀಗೆ 'ಜಿ.ವೆಂಕಟಸುಬ್ಬಯ್ಯ ಅವರ ಕನ್ನಡ ಪ್ರಜ್ಞೆ' ಎಂಬ ಪುಸ್ತಕದಲ್ಲಿ ಜಿ.ವಿ.ಅರುಣರವರು ಹಲವು ನೆನಹುಗಳನ್ನು ಹಂಚಿಕೊಂಡಿದ್ದಾರೆ. ಇದೊಂದು ಓದಲೇಬೇಕಾದ ಪುಸ್ತಕ.

.

'ಉ' ಎಂಬ ಅಕ್ಷರ ಬಳಸಿ ಯಾವುದೇ ಭಾಷೆಯ ಪದವನ್ನು ಕನ್ನಡಕ್ಕೆ ಅಳವಡಿಸಬಹುದು. ಎಲ್ಲಾ ಬೆಳೆಯುತ್ತಿರುವ ಬದುಕುತ್ತಿರುವ ಭಾಷೆಗಳೂ ಇದನ್ನು ಮಾಡುತ್ತವೆ. ಸಾವಿರಾರು ಪದಗಳು ಹೊಸತಾಗಿ ಸೃಷ್ಟಿಯಾಗುತ್ತಿರುವ ತಂತ್ರಜ್ಞಾನದ ಕಾಲದಲ್ಲಿ ಪರ್ಯಾಯ ಪದ ಹುಡುಕಲು ಸಮಯ ಬೇಕು. ತಕ್ಷಣ ಸ್ವೀಕರಿಸಲು ಉ ಪ್ರತ್ಯಯ ಸೇರಿಸಬೇಕಾಗುತ್ತದೆ



(ಉದಾ: ಟೆಲಿಫೋನು ಪೋಲೀಸು). 'ಬಿಡು' ಎನ್ನುವ ಪ್ರಯೋಗವೂ ಬಳಕೆಯಲ್ಲಿದೆ. ಉದಾಹರಣೆಗೆ ಮಾಡಿಬಿಡು ಹೋಗಿಬಿಡು ಇತ್ಯಾದಿ. ನಿಯಮಗಳ ವಿಷಯದಲ್ಲಿ ಸಮಸ್ಯೆಗಳಿದ್ದರೂ ಸಾಮಾನ್ಯರ ಬಳಕೆಗೆ ಬಂದ ಪದಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಅಭಿಪ್ರಾಯ ಜಿವಿಯವರದಾಗಿತ್ತು.

ಱ ಕಾರವನ್ನು ತೆಗೆಯುವ ಪ್ರಸ್ತಾಪದ ಬಗ್ಗೆ ಅವರಿಗೆ ಆಕ್ಷೇಪವಿತ್ತು. ಱ ದಿಂದ ಕೆಲವು ಶಬ್ದಗಳಿವೆ. ನಿಷೇಧ ಹೇರುವುದು ಸರಿಯಲ್ಲ .ಶಬ್ದಗೌರವ ಉಳಿಸಿಕೊಳ್ಳೋಣ ಎಂಬುದು ಶಬ್ದಗಳ ಬಗ್ಗೆ ಜಿವಿಯವರಿಗಿದ್ದ ಸ್ಪಷ್ಟ ನಿಲುವು.

ಕನ್ನಡ ಬೆಳೆಯುವುದು ವಿದ್ವಾಂಸರ ಸೂಚನೆಯಿಂದ ಅಥವಾ ಆಡಳಿತಾತ್ಮಕ ಆದೇಶದಿಂದ ಅಲ್ಲ. ಕನ್ನಡ ಬೆಳೆಯುವುದು ಜನಸಾಮಾನ್ಯರು ಉಪಯೋಗಿಸು ವುದರಿಂದ. ಜನ ಬಳಸುವ ಪದಗಳು ಸ್ವೀಕಾರಾರ್ಹವಾಗುತ್ತವೆ. ಉದಾಹರಣೆಗೆ ಕದ್ದಾಲಿಕೆ ಪದ ಪ್ರಯೋಗಾತ್ಮಕವಾಗಿ ತಪ್ಪೇ ಆದರೂ ಬಳಕೆಯಲ್ಲಿದ್ದು ಸ್ವೀಕಾರಾರ್ಹವಾಗಿದೆ ಪ್ರಯೋಗದಲ್ಲಿ ಸಾಧುವಲ್ಲದಿದ್ದರೂ ಸಿದ್ದವಾದ ಇಂತಹ ಪದಗಳನ್ನು ಒಪ್ಪಿಕೊಳ್ಳಬೇಕು.

ಕನ್ನಡ ಶಬ್ದಪ್ರಪಂಚಕ್ಕೆ ಜಿ.ವಿ.ಯವರ ಕೊಡುಗೆ ಎಂದಾಗ ವ್ಯಾಪಕ ಅರ್ಥ ಮೂಡುತ್ತದೆ. ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ವಿಶ್ವವಿದ್ಯಾನಿಲಯದ ಸೆನೆಟ್ ಸಮಿತಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಜಿವಿಯವರು ಬಹಳ ಘನವಾದ ಕಾರ್ಯ ಮಾಡಿದ್ದಾರೆ. ಇವರ ಕೆಲಸಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಶ್ಲಾಘನೆಗೆ ಒಳಗಾಗಿವೆ. ಜಿವಿಯವರು ಪ್ರಧಾನ ಸಂಪಾದಕರಾಗಿ ಹೊರತಂದ ಎಂಟು ಸಂಪುಟದಂತಹ ಬೃಹತ್ ನಿಘಂಟು ಭಾರತದ ಇತರ ಯಾವ ಭಾಷೆಗಳಲ್ಲೂ ಇಲ್ಲ. ನಿಘಂಟು ಒಬ್ಬರು ಮಾಡುವ ಕೆಲಸವಲ್ಲ ಹಲವು ವಿದ್ವಾಂಸರು ಕುಳಿತು ಮಾಡುವುದರಿಂದ ಸಾಕಷ್ಟು ಸಮಯವೂ ಬೇಕಾಗುತ್ತದೆ. ನಿಘಂಟು ರಚನಾಶಾಸ್ತ್ರಕ್ಕೆ ಅದು ನೀಡಿದ ಪ್ರೇರಣೆ ಮಹತ್ವದ್ದು. ಮುಖ್ಯವಾಗಿ ನಿಘಂಟಿನ ಸ್ವರೂಪದ ಕುರಿತ ವಿಶ್ಲೇಷಣೆಯಲ್ಲಿ ಜಿ.ವಿ.ಯವರು ಆಧುನಿಕ ಬದಲಾವಣೆಗೆ ಸ್ಪಂದಿಸಿರುವುದು ಮಹತ್ವದ ಸಂಗತಿಯಾಗಿದೆ ವರ್ತಮಾನದ ನಿಘಂಟಿನ ಹಾದಿಗೆ ಇದರಿಂದ ಅನೇಕ ಒಳನೋಟಗಳು ಲಭಿಸಿವೆ. ಇವರ ಎರವಲು ಪದಕೋಶ ಮತ್ತು ಇಗೋ ಕನ್ನಡ ನಿಘಂಟು ಆಧುನಿಕ ಬದಲಾವಣೆಗೆ ಸ್ಪಂದಿಸಿದ್ದರ ಫಲವಾಗಿ ರಚಿತವಾಗಿವೆ. ಶಬ್ದದ ಸೌಂದರ್ಯ, ಶುದ್ಧತೆ ಶುಚಿತ್ವ ಕಾಪಡಿಕೊಳ್ಳಿ ಎಂದು 'ಇಗೋ ಕನ್ನಡ" ಕೊಟ್ಟಿದ್ದಾರೆ

ನಿಘಂಟು ಶಾಸ್ತ್ರದ ಕುರಿತು ಕನ್ನಡದ ಮೊಟ್ಟಮೊದಲ ಪುಸ್ತಕ ರಚಿಸಿದವರು ಜಿವಿಯವರು. ಒಂದು ಸಂಪ್ರದಾಯಬದ್ಧ ಭಾಷೆ ಸ್ಥಾಪಿತವಾಗಿರುವಾಗ ಯಾವ ವ್ಯತ್ಯಾಸಗಳನ್ನೂ ಮಾಡಬಾರದು. ಭಾಷೆಯನ್ನು ಬದಲಾಯಿಸುವುದು, ಮಹಾಪ್ರಾಣಗಳನ್ನು ಬಿಡುವುದು, ಕೇವಲ ತದ್ಭವಗಳನ್ನೇ ಉಪಯೋಗಿಸುವುದು ಮುಂತಾದ ಸುಧಾರಣೆಗಳು ಗೊಂದಲ ಮೂಡಿಸಬಹುದು. ಜನಸಾಮಾನ್ಯರಾರಿಗೂ ಈ ಸುಧಾರಣೆ ಬಗ್ಗೆ ಆಸಕ್ತಿ ಇಲ್ಲ. ಈಗ ಆಗಬೇಕಾಗಿರುವುದು ಸಹಸ್ರಾರು ವೈಜ್ಞಾನಿಕ, ಕಂಪ್ಯೂಟರ್ ಶಬ್ದಗಳಿಗೆ ಕನ್ನಡ ಪದ ಸೃಷ್ಟಿಸುವ ಕೆಲಸ. ಕೆಲವಕ್ಕೆ ಇಂಗ್ಲೀಷಿನ ಪದಗಳನ್ನೇ ಬಳಸುವುದು ಒಳ್ಳೆಯದು, ತೀರಾ ಕನ್ನಡೀಕರಣ ಬೇಡ. ಕಾರಣ ಆ ಶಬ್ದಗಳನ್ನು ಬಳಸುವವರು ಇಂಗ್ಲೀಷ್ ಬಲ್ಲವರೇ ಆಗಿರುತ್ತಾರೆ ಕ್ರಮೇಣ ಒಂದು ವಿದ್ವಜ್ಜನ ಸಮೂಹದಿಂದ ಶಿಷ್ಟ ಶಬ್ದ ಸೃಷ್ಟಿಸಲು ಪ್ರಯತ್ನಿಸಬೇಕು ಎಂದು ಜಿವಿಯವರು ಹೇಳಿದ್ದಾರೆ.

ಆಕ್ಸ್‌ಫರ್ಡ್ ಪದಕೋಶದವರು ನಮಗೆ ಮಾದರಿಯಾಗಬೇಕಿತ್ತು. ಇಡೀ ಭಾರತದ ವಿವಿಧ ಭಾಗಗಳ ವಿವಿಧ ಭಾಷೆಗಳ ನಿಘಂಟುಕಾರರೊಂದಿಗೆ ಸಮನ್ವಯ ಸಾಧಿಸಿ ಅಖಿಲ ಭಾರತ ಮಟ್ಟದಲ್ಲಿ ನಿಘಂಟು ರಚನೆ ಮತ್ತು ಅಭಿವೃದ್ಧಿಗೆ ಒಂದು

ಆಯಾಮ ನೀಡಬಹುದಿತ್ತು. ಅದು ಭಾಷಾ ಬೆಳವಣಿಗೆಯ ಒಂದು ಶಾಶ್ವತ ವ್ಯವಸ್ಥೆ ಆಗುತ್ತಿತ್ತು ಎಂಬುದು ಜಿವಿಯವರ ಅಭಿಪ್ರಾಯವಾಗಿತ್ತು. ಭಾಷಾ ಸಂಶೋಧಕರು, ನಿಘಂಟುಕಾರರು, ಕನ್ನಡಿಗರು ಎಲ್ಲೆಲ್ಲಿ ಇದ್ದಾರೋ ಅಲ್ಲೆಲ್ಲಾ ಭಾಷಾ ಸರ್ವೇಕ್ಷಣ ನಡೆಸಿ ಹಳೆ ಶಬ್ದಗಳ ಹೊಸ ರೂಪಗಳನ್ನು ನಿಘಂಟಿಗೆ ಸೇರಿಸುತ್ತಾ ಹೋಗಬೇಕು. ನಿಘಂಟು ಮುಗಿದ ಕೆಲಸವಲ್ಲ ಅದನ್ನು ನಿರಂತರವಾಗಿ ಮಾಡುತ್ತಾ ಇರಬೇಕು – ಎಂಬುದು ಜೀವಿಯವರ ಆಶಯವಾಗಿತ್ತು ಎಂದರು.

ಸಾಮಾನ್ಯವಾಗಿ ಪದಕೋಶಕ್ಕೆ ಬಹಳ ದೊಡ್ಡದಾದ ಮನ್ನಣೆ ಸಿಗದು. ಆದುದರಿಂದ ಜಿವಿಯವರಿಗೆ ಸಿಗಬೇಕಾದಂತಹ ಮನ್ನಣೆ ಸಿಗಲಿಲ್ಲ. ಜೀವಿಯವರಂತಹ ಸಾಧಕರಿಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ದೊರೆತದ್ದು ಅವರ ೨೮ನೇ ವಯಸ್ಸಿನಲ್ಲಿ. 'ಪದ್ಮಶ್ರೀ' ಪ್ರಶಸ್ತಿ ಬಂದಾಗ ಅವರಿಗೆ 105 ವರ್ಷ.

ಜೀವಿಯವರು ಪುಣ್ಯವಂತರು. ಸುದೀರ್ಘ ಬದುಕಲ್ಲಿ ಅವರ ಕಾರ್ಯವನ್ನು ಕನ್ನಡದ ಜನ ಮೆಚ್ಚಿದ್ದನ್ನು, ಆರಾಧಿಸಿದ್ದನ್ನು ಕಣ್ಣಾರೆ ಕಂಡರು. ಕನ್ನಡ ನಾಡಿನ ಅಪಾರ ಗೌರವ ಮನ್ನಣೆಗೆ ಪಾತ್ರರಾದರು. ಭಾಷೆಯ ಯೋಗ್ಯತೆ ಹೆಚ್ಚಿಸಿದ ಮಹಾನ್ ಚೇತನ ಪ್ರೊ.ಜಿ.ವೆಂಕಟಸುಬ್ಬಯ್ಯನವರು ಎಂದು ಹೇಳಿದ ಡಾ.ಚಿಂತಾಮಣಿ ಕೊಡ್ಲೆಕೆರೆಯವರು ಈ ಸಂದರ್ಭದಲ್ಲಿ ಜಿವಿಯವರ ಕೆಲವು ಸಾಧನೆಗಳನ್ನು ನೆನಪಿಸಿಕೊಳ್ಳಲು ಅವಕಾಶಮಾಡಿಕೊಟ್ಟುದಕ್ಕೆ ವೇದಿಕೆಗೆ ವಂದನೆಗಳನ್ನು ತಿಳಿಸಿ ತಮ್ಮ ಮಾತುಗಳನ್ನು ಮುಗಿಸಿದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಡಾ.ಚಿಂತಾಮಣಿ ಕೊಡ್ಲೆಕೆರೆಯವರೊಂದಿಗೆ ಶ್ರೀ ಜಿವಿ. ಅರುಣರವರೂ ಭಾಗವಹಿಸಿ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು. ಆಧುನಿಕತೆಯ ಪ್ರವಾಹದಲ್ಲಿ ವೃತ್ತಿ ಕಣ್ಮರೆಯಾದಾಗ ಹಲವು ಶಬ್ದಗಳೂ ಮರೆಯಾಗಿ ಹೋಗುತ್ತವೆ. ಕಮ್ಮಾರನ ಜೊತೆಯಲ್ಲಿ ಅವನ ವೃತ್ತಿಗೆ ಸಂಬಂಧಿಸಿದ ಶಬ್ದಗಳೂ ಹೋಗುತ್ತವೆ. ಗಾದೆಮಾತು, ಪಡೆನುಡಿಗಳು ಬಿಟ್ಟುಹೋಗುತ್ತಾ ಇವೆ ಎಂದು ಕೊಡ್ಲೆಕೆರೆಯವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶ್ರೀ ಜಿ.ವಿ.ಅರುಣರವರು, ಕ.ಸಾ.ಪ. ಹೊರತಂದ ಎಂಟು ಸಂಪುಟಗಳ ಬೃಹತ್ ನಿಘಂಟಿನ ಪುನರ್ ಮುದ್ರಣಕ್ಕೆ ಮುಂದಾದಾಗ ಕೆಲವು ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿ ಪರಿಷ್ಕರಣೆ ಮಾಡಿದರೆ ಒಳಿತು ಎಂಬ ಸಲಹೆಯನ್ನು ಜಿವಿಯವರು ಕೊಟ್ಟಿದ್ದರೂ ಇನ್ನೂ ಆ ಕೆಲಸ ಮಾಡಿಲ್ಲ. ತಮ್ಮ 104ನೇ ವರ್ಷದಲ್ಲೂ ಕಮ್ಮಟ ಮಾಡಿದರೆ ನಿಘಂಟು ಕಾರ್ಯಮಾಡುವ ಬಗ್ಗೆ ತರಬೇತಿ ನೀಡಬಲ್ಲೆ ಎಂದಿದ್ದ ಜಿವಿಯವರ ಜೀವನೋತ್ಸಾಹವನ್ನು ನೆನೆದರು.

ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಶ್ರೀಮತಿ ಸರಸ್ವತಿ ನಟರಾಜ್‌ರವರು ಇಂದು ಸಾಹಿತ್ಯ ಶಾರದೆಯು ನೋಡಿಯೋ ಸಾಹಿತ್ಯ ದಾಸೋಹದ ತೇರನ್ನು ಏರಿದ್ದಾಳೆ. ಶ್ರಾವಣ ಭಾದ್ರಪದ ಎಂದರೆ ಹಬ್ಬಗಳ ಸಾಲು ಸಾಲು. ಅಂತಹದೇ ಒಂದು ಹಬ್ಬ ಇಂದಿನದು. ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ವಿಶಿಷ್ಟ ವ್ಯಕ್ತಿ–ವಸ್ತುಗಳ ಬಗ್ಗೆ ಉಪನ್ಯಾಸ ಏರ್ಪಡಿಸಿ ಶ್ರೋತೃಗಳ ಜ್ಞಾನದಾಹಕ್ಕೆ ನೀರೆರೆಯುವಂತಹ ಕೆಲಸವಾಗುತ್ತಿದೆ. ಕನ್ನಡ ಭಾಷೆ, ಸಾಹಿತ್ಯಗಳು ದೀರ್ಘ ಇತಿಹಾಸದಲ್ಲಿ ಇಷ್ಟು ಸಮೃದ್ಧವಾಗಿ ಬೆಳೆದು ಬಂದಿರುವುದಕ್ಕೆ ವಿವಿಧ ಕಾಲಘಟ್ಟಗಳಲ್ಲಿ, ವಿವಿಧ ಪ್ರಕಾರಗಳಲ್ಲಿ ತಮ್ಮ ತಮ್ಮ ಕೊಡುಗೆ ನೀಡಿದ ಮಹನೀಯರನ್ನು ಸ್ಮರಿಸುವುದು ಅವಶ್ಯಕವಾಗಿದೆ. ಸಾಹಿತ್ಯ ಹಾಗೂ ವಾಂಙ್ಮಯ ನಿಂತ ನೀರಲ್ಲ, ನಿರಂತರವಾಗಿ ಬೆಳೆಯುವ ತೊರೆ. ನಮ್ಮೆಲ್ಲರ ಕಾಲಘಟ್ಟದಲ್ಲೇ ಕನ್ನಡದ ವಾಂಙ್ಮಯಕ್ಕೆ ಅಗಾಧ ಸೇವೆ ಸಲ್ಲಿಸಿದ ನಿಘಂಟುತಜ್ಞ ಶ್ರೀ ಜಿ ವೆಂಕಟಸುಬ್ಬಯ್ಯನವರ ಕೊಡುಗೆಯ ಕುರಿತು ಡಾ.ಚಿಂತಾಮಣಿ ಕೊಡ್ಲೆಕೆರೆಯವರು ಅದ್ಭುತವಾದ ಉಪನ್ಯಾಸ ನೀಡಿದ್ದಾರೆ. ಜೀವಿಯವರ ಜೀವನ ಯಾತ್ರೆ, ಅವರ ವ್ಯಕ್ತಿತ್ವ ನಿರ್ಮಾಣದ ಹಿನ್ನೆಲೆ ಮತ್ತು ವಿದ್ವತ್ ಪ್ರಪಂಚದ ನಡಿಗೆ, ಭಾಷಾ ಸಂಶೋಧನೆಯಲ್ಲಿ ಅವರ ಹೆಜ್ಜೆಗಳು, ಗುರಿಗಳು ಎಲ್ಲವನ್ನೂ ಕೊಡ್ಲೆಕೆರೆಯವರು ತುಂಬಾ ಚೆನ್ನಾಗಿ ಕಟ್ಟಿಕೊಟ್ಟರು ಎಂದು ಹೇಳಿ ಉಪನ್ಯಾಸಕರಿಗೂ, ಸಂಚಾಲಕರಿಗೂ ಸದಸ್ಯರಿಗೂ, ಅಂತರ್ಜಾಲ ಮುಖೇನ ಕಾರ್ಯಕ್ರಮವನ್ನು ವೀಕ್ಷಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸಿದರು. ***

ಅರಿಸಮಾಸ

– ಜೀವಿ. ಹೆಗಡೆ

ಸಂಸ್ಕೃತ ಕನ್ನಡ ಭಾಷೆಯ ತಾಯಿ ಎನ್ನುವ ವಾದ ಉಂಟು. ಕನ್ನಡ ಮಾತ್ರ ಏಕೆ ಎಲ್ಲಾ ಭಾರತೀಯ ಭಾಷೆಗಳಿಗೂ ಸಂಸ್ಕೃತ ಭಾಷೆಯೇ ತಾಯಿ ಎನ್ನುವವರೂ ಇದ್ದಾರೆ. ಒಂದು ಕಾಲದಲ್ಲಿ ಸಂಪೂರ್ಣ ಭಾರತ ಭೂಖಂಡವನ್ನು ಸಂಸ್ಕೃತ ವ್ಯಾಪಿಸಿದ್ದು ಸುಳ್ಳಲ್ಲ. ಆದರೆ ಸಮಾಜದ ಎಲ್ಲಾ ವರ್ಗಗಳ ಜನರು ಸಂಸ್ಕೃತದಲ್ಲಿ ವ್ಯವಹರಿಸುತ್ತಿರಲಿಲ್ಲ ಎನ್ನುವದೂ ಅಷ್ಟೇ ಸತ್ಯ.

ಸಮಾಜದಲ್ಲಿ ಮೇಲುಸ್ತರದ ಜನರು ಸಂಸ್ಕೃತವನ್ನೂ ಉಳಿದವರು ಪ್ರಾಕೃತವನ್ನೂ ವ್ಯವಹಾರದಲ್ಲಿ ಬಳಸುತ್ತಿದ್ದರು. ಪ್ರಾಕೃತದಲ್ಲಿಯೇ ಮಾತನಾಡುವ ಎಷ್ಟೋ ಜನರಿಗೆ ಸಂಸ್ಕೃತ ಅರ್ಥವಾಗುತ್ತಿತ್ತು. ಆದರೆ ತಿರುಗಿ ಸಂಸ್ಕೃತದಲ್ಲಿ ಹೇಳಲು ಬರುತ್ತಿರಲಿಲ್ಲ. ಬೇರೆಯವರು ಸಂಸ್ಕೃತದಲ್ಲಿ ಮಾತನಾಡಿದಾಗ ತಿರುಗಿ ಪ್ರಾಕೃತದಲ್ಲಿಯೇ ಮಾತನಾಡುತ್ತಿದ್ದರು. (ಈಗಲೂ ಇಂಗ್ಲೀಷ್ ಅಥವಾ ಅನ್ಯ ಭಾಷೆಗಳು ಕೇಳಿದಾಗ ಅರ್ಥವಾದರೂ ಸಂಭಾಷಣೆ ಮಾಡಲು ಬರದೇ ಇರುವುದನ್ನು ಕಾಣುತ್ತೇವೆ.)

ಪ್ರಾಕೃತ ಅಂದರೆ ಸ್ಥಳೀಯ ಭಾಷೆ ಅಂತಲೇ ಇದ್ದಿರಬಹುದು. ಬೇರೆ ಬೇರೆ ಭಾಷೆಗಳನ್ನಾಡುವ ಜನರ ಮಧ್ಯದಲ್ಲಿಯ ಸಂಪರ್ಕ ಭಾಷೆ ಅಥವಾ ಸಂವಹನ ಭಾಷೆ ಸಂಸ್ಕೃತವೇ ಆಗಿತ್ತು. ಭಾರತೀಯರ ಒಟ್ಟೂ ಜೀವನಕ್ರಮಕ್ಕೆ ಸಂಬಂಧಿಸಿದ ವೇದ, ವೈದ್ಯಕೀಯ ಶಾಸ್ತ್ರ, ಆಡಳಿತಕ್ಕೆ ಸಂಬಂಧಿಸಿದ ಧರ್ಮಶಾಸ್ತ್ರ, ನೀತಿಶಾಸ್ತ್ರ, ಅರ್ಥಶಾಸ್ತ್ರ ಇವುಗಳೂ ಸಂಸ್ಕೃತದಲ್ಲಿಯೇ ಇದ್ದವು. ಕ್ರಮೇಣ ಈ ಸಂಸ್ಕೃತ ಭಾಷೆಯ ಪ್ರಭಾವ ಭಾರತೀಯ ಭಾಷೆಗಳ ಮೇಲೆ ಆಗಿದ್ದು ಸಹಜ.

ಆಡಳಿತಾತ್ಮಕವಾದ ಗ್ರಂಥಗಳು ಕನ್ನಡದಲ್ಲಿ ಬಂದರೂ ಮೂಲ ಸ್ವರೂಪವು ಸಂಸ್ಕೃತವೇ ಆಗಿದ್ದು ಕಂಡು ಬರುತ್ತವೆ. ಅದು ಜನ ಸಾಮಾನ್ಯರಿಗೆ ಅರ್ಥವಾಗಬೇಕು ಎನ್ನುವ ಕಾರಣಕ್ಕಾಗಿ ಸಂಸ್ಕೃತ ಮೂಲದ ಗ್ರಂಥದ ಅನುವಾದೀರೂಪವಾಗಿ ಕನ್ನಡದಲ್ಲಿ ಬಂದಿತು.

ಅಲಂಕಾರ ಹಾಗೂ ರಸೋತ್ಪತ್ತಿಗೆ ಸಂಬಂಧಿಸಿದ ಲಕ್ಷಣ ಗ್ರಂಥಗಳಿಗೆ ಭಾಷೆಯ ಸೀಮೆ ಇಲ್ಲ ಎನ್ನುವದು ಸತ್ಯ ವಾದರೂ, ಶಬ್ದ ಸಂಯೋಜನೆ ಹಾಗೂ ವಾಕ್ಯರಚನೆಗಳಿಗೆ ಸಂಬಂಧಿಸಿದಂತೆ, ಭಾಷೆಯ ವೈಶಿಷ್ಟ್ಯ ಎದ್ದು ಕಾಣುತ್ತವೆ. ಇಂತಹ ಸಂದರ್ಭಗಳಲ್ಲಿ ಆಯಾ ಭಾಷೆಯ ಶಬ್ದ ಹಾಗೂ ಶಬ್ದಾರ್ಥಗಳು ವಾಕ್ಯರಚನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.

ಬೇರೆ ಬೇರೆ ಭಾರತೀಯ ಭಾಷೆಗಳ ಸಂಗತಿಯನ್ನು ಒತ್ತಟ್ಟಿಗಿಡೋಣ. ಅವುಗಳ ಅನುಭವ ಜ್ಞಾನವೂ ನನಗೆ ಇಲ್ಲ. ನಾನು ಬರೆಯಲು ಉದ್ದೇಶಿಸಿದ್ದು ಕನ್ನಡಕ್ಕೆ ಮಾತ್ರ ಸಂಬಂಧಿಸಿದ್ದು.

ಕನ್ನಡದಲ್ಲಿ ಸಂಸ್ಕೃತ ಮೂಲವಾದ ಶಬ್ದಗಳು ವಿಫುಲವಾಗಿಯೇ ಸಿಗುತ್ತವೆ. ಈಗ ಚಾಲ್ತಿಯಿರುವ ಕನ್ನಡ ಶಬ್ದಗಳಲ್ಲಿ ಪ್ರತಿಶತ ಅರವತ್ತಕ್ಕೂ ಹೆಚ್ಚು ಶಬ್ದಗಳು ಸಂಸ್ಕೃತ ಮೂಲದವು ಎನ್ನುವ ಹೇಳಿಕೆ ಇದೆ. ಇಂಗ್ಲೀಷ್, ಪರ್ಶಿಯನ್, ಅರಬ್ಬೀ, ಪೋರ್ತುಗೀಸ್ ಮುಂತಾದ ವಿದೇಶೀ ಭಾಷೆಗಳ ಜೊತೆಗೆ ಮರಾಠೀ, ತಮಿಳು ಮುಂತಾದ ಭಾರತೀಯ ಭಾಷೆಗಳ ಶಬ್ದಗಳೂ ಇವೆ.

(ಸಾಬೂನು, ಮೇಜು, ಅಲೆಮಾರಿ, ತೋಪು, ನಕಲು, ಖಾಲಿ, ಸ್ಕೂಲು, ಇಂಜಿನೀಯರ, ನಕಾಶೆ, ಪೈಜಾಮ, ದಿವಾನ, ಮೇಜು, ಕುರ್ಚಿ, ಮೋಟಾರು ಮೊದಲಾದವುಗಳು ವಿದೇಶೀ ಭಾಷೆಗಳಿಂದ ಕನ್ನಡಕ್ಕೆ ಎರವಲು ಬಂದ ಶಬ್ದಗಳು.)

ಈ ಎಲ್ಲಾ ಶಬ್ದಗಳು ಕನ್ನಡಕ್ಕೆ ಬಂದಾಗ ಸ್ವರೂಪದಲ್ಲಿ ಕನ್ನಡೀಕರಣಗೊಳ್ಳುವದು ಸಹಜ. ಹರಿಃ, ಗುರುಃ, ಮಾಲಾ, ಪುಸ್ತಕಮ್ ಮೊದಲಾದ ಶಬ್ದಗಳು ಹರಿ, ಗುರು, ಮಾಲೆ, ಪುಸ್ತಕ ಹೀಗೆ ಕೆಲವೊಂದು ಅಲ್ಪ ಅಥವಾ ಮಹತ್ ಆಗಿ ರೂಪಾಂತರಗೊಳ್ಳುತ್ತವೆ.

ಆದರೆ ಮಾಲಾ+ಉಪಮೆ=ಮಾಲೋಪಮೆ ಆದಾಗ ಸಂಸ್ಕೃತದ ಶಬ್ದದ ಹಾಗೆ (ಗುಣಸಂಧಿ– ಸಂಸ್ಕೃತ ಸಂಧಿ) ಮಾಲೆ+ಅಲ್ಲಿ=ಮಾಲೆಯಲ್ಲಿ ಆದಾಗ ಕನ್ನಡದ ಶಬ್ದದ ಹಾಗೆ (ಯಕಾರಾಗಮ ಸಂಧಿ– ಕನ್ನಡ ಸಂಧಿ).

ಗುರು ಎನ್ನುವದು ಸಂಸ್ಕೃತದಿಂದ ಕನ್ನಡಕ್ಕೆ ಬಂದ ಶಬ್ದ. ಹಾಗೆ ಮೇಜು ಹಾಗೂ ಮೋಟಾರು ಇವು ಬೇರೆ ಭಾಷೆಗಳಿಂದ ಬಂದ ಶಬ್ದಗಳು.

ಇವುಗಳನ್ನು ಸಂಧಿಯನ್ನು ಮಾಡುವಾಗ ಏನಾಗುವದು ಅಂತ ನೋಡೋಣ.

ಗುರುಃ ಹಾಗೂ ಆಜ್ಞಾ ಎರಡೂ ಸಂಸ್ಕೃತ ಭಾಷೆಯ ಶಬ್ದಗಳು. ಆದರೆ ಕನ್ನಡಕ್ಕೆ ಎರವಲಾದಾಗ ಕ್ರಮವಾಗಿ ಗುರು ಹಾಗೂ ಆಜ್ಞೆ ಅಂತ ಆಗುತ್ತವೆ. ಸಂಧಿ ಮಾಡುವಾಗ

ಗುರು+ಆಜ್ಞೆ=ಗುರ್ವಾಜ್ಞೆ ಅಂತಲೇ ಆಗುತ್ತದೆ.

ಮೇಜು ಹಾಗೂ ಮೋಟಾರು ಈ ಶಬ್ದಗಳೂ ಈಗ ಕನ್ನಡ ಶಬ್ದಗಳೇ ಆಗಿವೆ. ಆದರೆ ಇವುಗಳನ್ನು ಸೇರಿಸುವಾಗ ಮೇಜು+ಆಚೆ=ಮೇಜ್ವಾಚೆ ಆಗದೆ ಮೇಜಾಚೆ ಅಥವಾ ಮೇಜಿನಾಚೆ;

ಮೋಟಾರು+ಅಲ್ಲಿ=ಮೋಟಾರ್ವಲ್ಲಿ ಆಗದೆ ಮೋಟಾರಲ್ಲಿ ಅಥವಾ ಮೋಟಾರಿನಲ್ಲಿ ಅಂತ ಆಗುತ್ತದೆ.

ಸಂಸ್ಕೃತ ಮೂಲದ ಶಬ್ದಗಳು ಸೇರುವಾಗ ಸಂಸ್ಕೃತ ಸಂಧಿಯಂತೆಯೂ ಉಳಿದ ಭಾಷೆಗಳ ಮೂಲದ ಶಬ್ದಗಳು ಸೇರುವಾಗ ಕನ್ನಡ ಸಂಧಿಯಂತೆಯೂ ಆಗುತ್ತವೆ.

ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಕೂಡುವುದಕ್ಕೆ ಸಂಧಿ ಎಂದು ಹೆಸರು. ಈ ಮೊದಲು ಹೇಳಿದಂತೆ ಆ ಅಕ್ಷರಗಳೆರಡೂ ಸಂಸ್ಕೃತ ಶಬ್ದದ್ದಾದಲ್ಲಿ ಸಂಸ್ಕೃತ ಸಂಧಿಯೂ, ಆ ಎರಡು ಅಕ್ಷರಗಳೆರಡೂ ಅಥವಾ ಒಂದು ಅಕ್ಷರ ಸಂಸ್ಕೃತವಲ್ಲದೇ ಕನ್ನಡದ್ದಾದರೆ ಕನ್ನಡ ಸಂಧಿಯಂತೆಯೂ ಬದಲಾವಣೆಯಾಗುತ್ತದೆ. ಆದರೆ ಸಂಸ್ಕೃತ ಸಂಧಿ ಹಾಗೂ ಕನ್ನಡ ಸಂಧಿಗಳಿಗೆ ಪ್ರತ್ಯೇಕವಾದ ನಿಯಮಗಳೇ ಇವೆ.

ಮೃದು+ಅಂಗಿ=ಮೃದ್ವಂಗಿ ಆಗುತ್ತದೆಯೇ ವಿನಃ, ಮೃದುವಂಗಿ ಆಗುವದಿಲ್ಲ.

ಕಿರು+ಅಂಗಿ=ಕಿರುವಂಗಿ ಆಗುತ್ತದೆಯೇ ವಿನಃ ಕಿರ್ವಂಗಿ ಅಂತ ಆಗುವದಿಲ್ಲ.

ಒಂದೇ ರೂಪವಿರುವ ಈ ಎರಡು ಶಬ್ದಗಳ ಸಂಯೋಜನೆಯಿಂದ ಉಂಟಾದ ಸಂಧಿಕಾರ್ಯಗಳು ಕನ್ನಡೇತರರಿಗೆ ಅರ್ಥವಾಗುವದು ಕಷ್ಟ. ಆದರೆ ಒಂದು ಸಮಾಧಾನ. ಸಂಸ್ಕೃತ ಮೂಲ ಹಾಗೂ ಕನ್ನಡ ಮೂಲದ ಕನ್ನಡ ಶಬ್ದಗಳನ್ನು ಬೆರೆಸಿ ಸಂಧಿಕಾರ್ಯಕ್ಕೆ ಯಾರದೂ ವಿರೋಧ ಇಲ್ಲ. ಆ ಎರಡು ಶಬ್ದಗಳ ಕೊನೆಯ ಹಾಗೂ ಮೊದಲಿನ ವರ್ಣಗಳು ವಿಳಂಬವಿಲ್ಲದೇ ಹಾಗೂ ಸುಲಭವಾಗಿ ಕೂಡಬೇಕು ಅಷ್ಟೇ.

ಆದರೆ ಸಮಾಸದಲ್ಲಿ ಹಾಗಲ್ಲ. ಸಂಧಿಯಲ್ಲಿ ಎರಡು ಶಬ್ದಗಳ ವರ್ಣಗಳು ಕೂಡಿ ಇನ್ನೊಂದು ವರ್ಣವಾದ ಹಾಗೆ ಸಮಾಸದಲ್ಲಿ ಎರಡು ಅಥವಾ ಹೆಚ್ಚು ಶಬ್ದಗಳು ಸೇರಿ ಇನ್ನೊಂದು ಶಬ್ದವಾಗುವದು.

ಸಮಾಸದಲ್ಲಿ ಪ್ರಧಾನವಾಗಿ ನಾಲ್ಕು ವಿಧಗಳನ್ನು ಕಾಣಬಹುದು. ಪೂರ್ವಪದ ಪ್ರಧಾನ, ಉತ್ತರಪದ ಪ್ರಧಾನ, ಅನ್ಯಪದ ಪ್ರಧಾನ ಹಾಗೂ ಉಭಯಪದ ಪ್ರಧಾನವಾದವುಗಳು. ದ್ವಿಗು, ಅಂಶೀ, ಕ್ರಿಯಾ ಹಾಗೂ ಕರ್ಮಧಾರಯ ಸಮಾಸಗಳು ಉಪವಿಭಾಗಗಳು. ಈ ನಾಲ್ಕೂ ಸಮಾಸ ಪ್ರಕಾರಗಳಲ್ಲಿ ಸಂಸ್ಕೃತವಿರಲಿ, ಕನ್ನಡವಿರಲಿ ಸಂಯೋಜನೆಯ ಕ್ರಮ ಒಂದೇ. ಆದರೆ ಎರಡೂ ಶಬ್ದಗಳು ಒಂದೇ ಜಾತಿಗೆ ಸೇರಿರಬೇಕು ಅಷ್ಟೇ. (ಸಂಸ್ಕೃತ ಮೂಲದ ಜಾತಿ ಅಥವಾ ಕನ್ನಡ ಮೂಲದ ಜಾತಿ.)

ಕಣ್ಣಿನಲ್ಲಿ ಉರಿ =ಕಣ್ಣುರಿ (ಎರಡೂ ಕನ್ನಡ ಶಬ್ದಗಳು)
ಪುರುಷರಲ್ಲಿ ಉತ್ತಮ = ಪುರುಷೋತ್ತಮ (ಎರಡೂ ಸಂಸ್ಕೃತ ಶಬ್ದಗಳು)

ಆದರೆ 'ಮಂಗಳದ ಆರತಿ=ಮಂಗಳಾರತಿ' ಅಂತ ಸಮಾಸ ಮಾಡಬಾರದು ಅಂತ ಹೇಳುತ್ತಾರೆ ಕೆಲವು ವೈಯಾಕರಣಿಗಳು. (ಮಂಗಳ ಸಂಸ್ಕೃತದ ಶಬ್ದ. ಆರತಿ ಕನ್ನಡದ ಶಬ್ದ). ಇಂತಹ ಸಮಾಸಗಳು ಶುದ್ಧವಾದ ಸಮಾಸವಲ್ಲ ಎನ್ನುವದು ಅವರ ಅಭಿಪ್ರಾಯ.

ಕನ್ನಡ ಪದಕ್ಕೂ ಸಂಸ್ಕೃತ ಪದಕ್ಕೂ ಸಮಾಸವು ಕೂಡದು. ಇದನ್ನು ಅರಿಸಮಾಸವೆನ್ನುವರು. ಇದಕ್ಕೆ ಕೆಲವು ವಿನಾಯತಿ ಉಂಟು. ಕ್ರಿಯಾ ಸಮಾಸದಲ್ಲಿಯೂ, ಗಮಕ ಸಮಾಸದಲ್ಲಿಯೂ ಬಿರುದಾವಳಿಯಲ್ಲಿಯೂ ಕೆಲವು ಪೂರ್ವಕವಿ ಪ್ರಯೋಗಗಳಲ್ಲಿಯೂ ಅರಿಸಮಾಸ ದೋಷವಿಲ್ಲ ಅಂತ ಇದೇ ವೈಯಾಕರಣಿಗಳು ಹೇಳುತ್ತಾರೆ.

ಆದರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಬಂದ ಶಬ್ದಗಳಿಗೆ ಈ 'ಅರಿಸಮಾಸ' ವಿರೋಧ ಅನ್ವಯಿಸುವುದಿಲ್ಲ. ಆದರೆ ಕ್ರಿಯಾಸಮಾಸದಲ್ಲಿಯೂ, ಗಮಕಸಮಾಸದಲ್ಲಿಯೂ ಬಿರುದಾವಳಿಯಲ್ಲಿಯೂ ಕೆಲವು ಪೂರ್ವಕವಿ ಪ್ರಯೋಗಗಳಲ್ಲಿಯೂ ಅರಿಸಮಾಸ ದೋಷವಿಲ್ಲ.

ದೋಷ ಇಲ್ಲದೇ ಇರಲಿಕ್ಕೆ ಉದಾಹರಣೆ.

ಕ್ರಿಯಾ ಸಮಾಸ: ಚಕ್ರಂಗೊಳೆ, ಪದಂಬಡಿದು.

ಗಮಕಸಮಾಸ: ಮೂಡುವರವಿ, ಬೀಸುವ ಚಾಮರಂ.

ಬಿರುದಾವಳಿ: ಅಂಕತ್ರಿಣೇತ್ರಂ, ರಾಯಕೋಲಾಹಲಂ, ನರಲೋಕದಲ್ಲಣಂ.

ಪೂರ್ವಕವಿಪ್ರಯೋಗ: ಮಂಗಳಾರತಿ, ಕೂರಸಿ, ಮಂಗಳಾರತಿ.

ಆದರೆ ಕೇಶೀರಾಜನು ಬಿರುದಾವಳಿ ಹಾಗೂ ಪೂರ್ವಕವಿ ಪ್ರಯೋಗ ಬಿಟ್ಟು ಉಳಿದ ಕಡೆ ಅರಿಸಮಾಸ ದೋಷ ಎನ್ನುತ್ತಾನೆ.

ಪದವಿಧಿ ಕನ್ನಡಕಂ ಸ।ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಟೆದಿ॥ರ್ಪುದು ಬಿರುದಾವಳಿಯೊಳ್ ಪೇ।ಟ್ವುದು ಪೆಱವಱೊಳಾಗದಿದು ವಿರುದ್ಧ ಸಮಾಸಂ॥

ದೋಷಕ್ಕೆ ಉದಾಹರಣೆ: ಅರಸುಕುಮಾರಂ, ಕೆಳದಿಸಮೇತಂ, ಮುಖತಾವರೆ.

ಬಹುಶಃ ಕೇಶೀರಾಜನ ಅವಧಿಯಲ್ಲಿ ಸಂಸ್ಕೃತವನ್ನು ಬಿಟ್ಟು ಉಳಿದ ಅನ್ಯದೇಶಿಯ ಶಬ್ದಗಳು ಇರಲಿಕ್ಕಿಲ್ಲ. ಆ ಶಬ್ದಗಳಿಂದಾದ ಅರಿಸಮಾಸದ ಕುರಿತು ಕೇಶೀರಾಜನ ಅಭಿಪ್ರಾಯ ಏನಿದ್ದೀತು?

ಉದಾ: ಮಂಚದಮೇಲೆ, ಟಪಾಲಿನಲ್ಲಿ, ಕುರ್ಚಿಯಕಾಲು ಇತ್ಯಾದಿ.

*****

ಶಾವಾತ್ಮ ಪದಗಳು

ಮತ್ಸರದ ಕಪಿಯಾಟ

– ಶಾಂತಿ ವಾಸು

ಕ್ಷಣದಲಿ ಸೃಷ್ಟಿಯಾಗುವ ನಾ, ಕಂಡಿಲ್ಲ ಕಾಣುವುದೇ ಇಲ್ಲ ಎಂದೆಂದೂ ಯಾರಿಗೂ...
ಭೂಮಿ ನಿನ್ನದು, ನಾನಿರದೆ ಜೀವ ಸವೆಸಲಾರೆ ನೀ ಇಂದೂ ಮುಂದೆಂದೂ....

ಮನಮನಗಳ, ಭಾಂಧವ್ಯಗಳ ನಡುವೆ ಮೌನದಲೇ ಆರಂಭದ ಜಿಗಿದಾಟ ಕುಣಿದಾಟ....
ಅರಚಿಕಿರುಚಿ, ವ್ಯಂಗ್ಯವಾಡಿ, ಕಿಚ್ಚುಹಚ್ಚುವಾಗಲೇ ಶುರುವೆನ್ನ ಪರದೆಯಾಟ....

ಅಂಕುರವಿಕ್ಕದೆ, ಬೆಳೆದು ಮರವಾಗುವೆ ನಾ, ವಿಷಭರಿತ ಬಾಳಲ್ಲಿ ಹಾಸುಹೊಕ್ಕು....
ವಿರಸ, ವಿಷಾದ, ಸಂಕಟ, ಸೊಕ್ಕುಭರಿತ ಮನವೆನ್ನಧಿಕಾರ ಹಕ್ಕು....

ಉಲಿಯಲೇನು ಕೋಕಿಲ ಪಂಚಮವ, ಉರಿವ ಕಾವಿಗೆ ಮದ್ದಾಗದು.....
ಬೇಗುದಿಯೊಳ ಮೌನಾಗ್ನಿ ಕರ್ಕಶ ಕಾಗೆಯೊಂದಿಗೂ ಸ್ಪರ್ಧಿಸದೇ ಇರದು..

ಕಪಿಯಂತೆ ತೂಗಿ ನಾಟಕದ ನಂತರವೇ ಹಿಡಿವೆ, ನೀ ಹಾಕಿದ ವೇಷಕೆ ಕನ್ನಡಿಯ....
ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ ನಾ ಬರೆದೇ ಬಿಡುವೆ ಮುನ್ನುಡಿಯ....

ಮತ್ಸರಭರಿತ ಮನವ, ನಿಲ್ಲಿಸುವೆ ನಾಮೊದಲು ತಾಮೊದಲೆಂಬ ಪೈಪೋಟಿಗೆ...
ತಡೆಯುವರಾರು, ನಿಂದಿಪರಾರು, ಅಧಿಕಾರವೆನ್ನದೇ 'ನಾನೇ' ಕಾರಣ ನಿನ್ನಧೋಗತಿಗೆ...

****

ಹಾಸ್ಯ ಲೇಖನ

ಸುಂದರ ಹೂ ಕಂಡು ಬೆಚ್ ಬಿದ್ದೆ

– ಎಲ್. ಗಿರಿಜಾ ರಾಜ್

ಸುಡುಬೇಸಿಗೆ, ಬಿರುಬೇಸಿಗೆ, ಬೆವರುಬೇಸಿಗೆ ಏನಾದರೂ ಅನ್ನಿ. ಪ್ರತಿವರ್ಷದ ಹಾಗೆ ಇಂಥ ಬಿಸಿಲುಗಾಲದಲ್ಲಿ ಪ್ರಾರಂಭವಾಯಿತು ನೋಡಿ ನಮ್ಮ ಮೌಲ್ಯಮಾಪನ. ಆ ಬಿಸಿ ಸಾಲದೆಂಬಂತೆ ಮುಟ್ಟಿದರೆ ಸಾಕು, ಶಾಕ್ ಹೊಡೆಯುತ್ತವೇನೋ ಎನ್ನುವಷ್ಟು ಬಿಸಿ ಬಿಸಿ ಉತ್ತರಗಳು ಅಂತೂ ಛಾಫಿ ಆದೆವು.

ಪ್ರಾರಂಭಕ್ಕೆ ರನ್ನನ "ಗದಾಯುದ್ಧ"ದ ಪ್ರಶ್ನೆ ಒಂದು ಅಂಕದ ಪ್ರಶ್ನೆಗೆ ಸರಿಯಾದ ಉತ್ತರ "ದುರ್ಯೋಧನ". ಒಂದು ಅಂಕದ ಪ್ರಶ್ನೆಗೆ ಬಹುತೇಕ ವಿದ್ಯಾರ್ಥಿಗಳು ಸರಿ ಉತ್ತರ ಕೊಡುತ್ತಾರೆ. ಪಾಸಾಗಲು ತಿಣುಕಾಡುವ ವಿದ್ಯಾರ್ಥಿಗಳಿಗೆ ಒಂದಂಕದ ಪ್ರಶ್ನೆಗಳೇ ಆಶೀರ್ವಾದ ಅಂತಿಟ್ಟುಕೊಳ್ಳಿ. ಹೀಗೆ ದುರ್ಯೋಧನನಿಂದ ಮೊದಲಾಗಿ "ಹಾಸಿಗೆ ಇದ್ದಷ್ಟು ಕಾಲು ಚಾಚು" ಗಾದೆಯಿಂದ ಕೊನೆಯಾಗುವ ಉತ್ತರಗಳ ಮೇಲೆ ಸರಸರ ಕಣ್ಣಾಡಿಸುತ್ತ ಹುಡುಗರ ಯೋಗ್ಯತೆ ಅಳೆಯುತ್ತ, ಕೆಂಪು ಲೇಖನಿಯನ್ನು ಆಡಿಸಿ ರೈಟು-ರಾಂಗುಗಳನ್ನು ಗುರುತಿಸಿ, ಅಂಕ ದಯಪಾಲಿಸಿ 259 ಪೇಪರುಗಳನ್ನು 11 ದಿನದಲ್ಲಿ ಮುಗಿಸುವ ಹೊತ್ತಿಗೆ ಯಾರಾದರೂ ಹಾಸಿಗೆ ಕೊಟ್ಟರೆ ಸಾಕಪ್ಪಾ! ಕಾಲು ಆಚೆಗೆ ಚಾಚದೆ ಚೊಕ್ಕವಾಗಿ ಮಲಗಿಬಿಡುತ್ತೇವೆ ಎಂಬಷ್ಟು ಆಯಾಸ!

ಮೌಲ್ಯಮಾಪನ ಶಿಬಿರದ ತುಂಬಾ ಡಿಸಿಇಗಳ ಓಡಾಟ. ಡಿಸಿಇ ಎಂದರೆ ಉಪ ಮುಖ್ಯ ಮೌಲ್ಯಮಾಪಕರು, ಎಇ ಎಂದರೆ ಸಹಾಯಕ ಮೌಲ್ಯಮಾಪಕರು. ಉತ್ತರ ಪತ್ರಿಕೆಗಳ ಐದಾರು ಬಂಡಲುಗಳನ್ನು ಹೊತ್ತು ಓಡಾಡುತ್ತಿರುವ ಡಿಸಿಇಗಳು.. "ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರೇ" ಎಂಬಂತೆ ನಾನು ಕುಳಿತುಕೊಳ್ಳುವ ಕಡೆ ಸರಿಯಾಗಿ ನೇರಕ್ಕಿರುವ ಟ್ಯೂಬ್‌ಲೈಟ್ ಸರಿಯಿಲ್ಲ, ಮಿಂಚಿನಂತೆ ಮಿಣಕ್ ಮಿಣಕ್ ಮಣಕ್ ಮಣಕ್ ಎಂದು ಹೊತ್ತಿ ಆರುತ್ತಿರುತ್ತದೆ. ಅದಾರ ಪುಣ್ಯವೋ, ಆ ಮೂಲೆಯಲ್ಲಿ ಇರುವ ಫ್ಯಾನ್ ರಾಜಾರೋಷವಾಗಿ ಬೀಸುತ್ತಿದ್ದರೆ, ನಮ್ಮ ಕಡೆ ಇರುವುದಕ್ಕೆ ರೋಷವೇ ಇರಲಿಲ್ಲ!

ಈ ಬಾರಿ ನಮ್ಮ ಉತ್ತರ ಪತ್ರಿಕೆಗಳಿಗೂ, ಮಹಾಭಾರತದ ಪಾತ್ರಗಳಿಗೂ ಭಾರಿ ನಂಟು. ಅಂದಮೇಲೆ ಕೇಳಬೇಕೇ? ರಾಮಾಯಣ-ಮಹಾಭಾರತದ ಪಾತ್ರಗಳನ್ನೆಲ್ಲಾ ಕಲೆಸಿ, ನಾದಿ, ಮಿದ್ದಿ, ಗುದ್ದಿ, ಮುದ್ದೆ ಮಾಡಿಬಿಟ್ಟಿದ್ದರು ನಮ್ಮ ಶಿಷ್ಯರು. ಅವರೇ ಇಲ್ಲಿ ಸೂತ್ರಧಾರರಲ್ಲವೇ? ಉತ್ತರ ಪತ್ರಿಕೆಯ ತುಂಬಾ ಗದಾಪ್ರಹಾರ ಮಾಡುವ ರನ್ನನ ಭೀಮ, ದುರ್ಯೋಧನರು.. "ಏಕಲವ್ಯ" ನಾಟಕದಲ್ಲೂ ಮಹಾಭಾರತದ ಪಾತ್ರಗಳೇ! ನಡುವೆ ನಮ್ಮ ರಾಷ್ಟ್ರಕವಿ ಜಿ.ಎಸ್.ಎಸ್. ಅವರ ವಿಡಂಬನಾತ್ಮಕ "ಭೀಮಾಲಾಪ". ಅದೊಂದು ಸುಂದರ "ನವ್ಯ ಕವನ". ಅದರಲ್ಲಿ ಅಳುವ ವಿರಾಟಪರ್ವದ "ಭೀಮ"ನನ್ನು ಕಂಡು ಖುಷಿಯಾಗಿರಬೇಕು ನಮ್ಮ ವಿದ್ಯಾರ್ಥಿಗಳಿಗೆ. ತಮ್ಮ ಅಭೂತಪೂರ್ವ ಉತ್ತರಗಳಿಂದ ಮತ್ತಷ್ಟು ಅಳಿಸಿಬಿಟ್ಟಿದ್ದರು ಭೀಮನೊಂದಿಗೆ, ನಮ್ಮನ್ನೂ...

'ತಲೆಬಾಗು, ಬೆಚ್ಚಿಬೀಳು' ಪದಗಳನ್ನು ವಾಕ್ಯರಚನೆಯಲ್ಲಿ ಬಳಸಿ ಬರೆಯಿರಿ ಎಂಬ ಪ್ರಶ್ನೆಗೆ ಒಬ್ಬರು "ನಾನು ಸುಂದರವಾದ ಹೂವನ್ನು ನೋಡಿದಾಗ ಬೆಚ್ಚಿಬಿದ್ದೆ" ಎಂದು ಬರೆದದ್ದು ನೋಡಿ ನಾನು ಬೆಚ್ಚಿಬಿದ್ದೆ! ಸುಂದರ ಹೂವನ್ನು ಕಂಡೇ ಬೆಚ್ಚಿ ಬೀಳುವ ಈ ಹುಡುಗ ಯಾ ಹುಡುಗಿ ಯಾವುದಕ್ಕೆ ಸಂತಸಪಡುತ್ತಾರೆ ಎಂದು ತಲೆಕೆಡಿಸಿಕೊಂಡು ಉತ್ತರ ಹೊಳೆಯದೆ, ತೆಪ್ಪಗೆ ಒಂದಂಕ ನೀಡಿ ಮುಂದಿನ ಉತ್ತರಕ್ಕೆ ಕಾಲಿಟ್ಟೆ, ಛೇ! ಪೆನ್ ಇದ್ದ ಕೈಯಿಟ್ಟೆ.

ಮನಸ್ಸಿನ ಆಳದಲ್ಲೆಲ್ಲೋ ಅಡಗಿದ್ದ ನೆನಪು ಮೇಲೆದ್ದು ಬಂದವು. ಕೆಲ ವರ್ಷಗಳ ಹಿಂದೆ ನಮ್ಮ ಸಹೋದ್ಯೋಗಿ ಯೊಬ್ಬರು (ಈಗ ಅವರು ಸಮನ್ವಯದಲ್ಲೇ ಇದ್ದಾರೆ) ನಿವೃತ್ತಿ ಹೊಂದಿದಾಗ ಆ ಸಂದರ್ಭದಲ್ಲಿ ಏರ್ಪಡಿಸಿದ್ದ

ಬೀಳ್ಕೊಡುಗೆ ಸಮಾರಂಭದಲ್ಲಿ ಆ ಪ್ರತಿಭಾಪೂರ್ಣ ಸಹೋದ್ಯೋಗಿ ಬಗ್ಗೆ ನಾಲ್ಕು ಮಾತಿನ ಭಾಷಣ ಮಾಡಿ, ಮುಗಿಸಿ ನನ್ನ ಜಾಗಕ್ಕೆ ಬಂದು ಕುಳಿತಾಗ ಇನ್ನೊಬ್ಬ ಸಹೊದ್ಯೋಗಿ ಏನೆನ್ನಬೇಕು? "ಅಬ್ಬ! ನಿಮ್ಮ ಭಾಷಣ ಕೇಳಿ ಬೆಚ್‌ಬಿದ್ದೆ" ಎಂದರು. ಅವರೂ ಶಿವಮೊಗ್ಗ ಕಡೆಯವರೇ... ನಾಲ್ಕೈದು ಜನ ಚೆನ್ನಾಗಿತ್ತು ಎಂದು ಹೇಳಿದ್ದರ ಆಧಾರದ ಮೇಲೆ ಧೈರ್ಯಮಾಡಿ ಅದರ ಅರ್ಥ "ತುಂಬಾ ಚೆನ್ನಾಗಿತ್ತು" ಎಂದಿರಬಹುದು ಎಂದು ಹೃದಯಕ್ಕೆ ಸಾಂತ್ವನ ನುಡಿದಿದ್ದೆ. ಏಕೆಂದರೆ ಕಾಲೇಜಿನಲ್ಲಿ ಅದು ನನ್ನ ಮೊದಲ ಭಾಷಣ ಬೇರೆ! ಆ ವಿದ್ಯಾರ್ಥಿಯೂ ಮಲೆನಾಡಿನವನೇ ಇರಬೇಕು.

ಆಗಾಗ ಅಲ್ಲಿ ಬೇರೆ ಬ್ಯಾಚುಗಳ ಎಇಗಳು, ಡಿಸಿಇಗಳು ಮನರಂಜನೆ ನೀಡುವ ಉತ್ತರಗಳನ್ನು ಓದುತ್ತ, ಮಾಡುತ್ತಿದ್ದ ಹಹ್ಹಹ, ಓಹೋ...ಇತ್ಯಾದಿ ಉದ್ಗಾರಗಳು ಕೇಳಿಬಂದು ಮೌಲ್ಯಮಾಪನದ ಗಂಭೀರ ವಾತಾವರಣ ಕಲಕಿ ಖುಷಿ ನೀಡುತ್ತಿದ್ದವು, ಬೇಸಿಗೆಯ ಬಿಸಿಲಲ್ಲಿ ಕೊಂಚ ತಂಪೆರೆಯುತ್ತಿದ್ದವು.

ಅಂಕಗಳನ್ನು ಕೊಡಬೇಕೇ, ಬೇಡವೇ? ಇದು ಕನ್ನಡವೇ ಅಲ್ಲವೇ? ಎಂಬ ಜಿಜ್ಞಾಸೆಗೆ ನೂಕುತ್ತಿದ್ದ ಉತ್ತರ ಪತ್ರಿಕೆಗಳು ಉತ್ತರ ಇಲ್ಲದ ಹಾಗೂ ಇದ್ದ ಉತ್ತರ ಪತ್ರಿಕೆಗಳು, ಹೆಚ್ಚುವರಿ ಉತ್ತರಗಳನ್ನು ಬರೆದು ಕಾಡಿಸುವ ಜಾಣರ ಉತ್ತರ ಪತ್ರಿಕೆಗಳು, ಅದದೇ ಉತ್ತರಗಳನ್ನು ಮತ್ತೆ ಮತ್ತೆ ಅಲ್ಲಿ ಇಲ್ಲಿ ಬರೆದು ಪ್ರಾಣ ತಿನ್ನುವ ಕೋಣರ ಉತ್ತರ ಪತ್ರಿಕೆಗಳ ನಡುವೆ ವಿನೋದಮಯವಾದ ಉತ್ತರ ಪತ್ರಿಕೆಗಳು ಒಂದಿಷ್ಟು ಸಿಕ್ಕಿ, ಎದೆಯ ಭಾರವನ್ನು ಒಂದಿಷ್ಟು ಹಗುರ ಮಾಡಿದ್ದಂತೂ ನಿಜ.

*****

ಗಝಲ್

– ಸುಜಾತಾ ರವೀಶ್

ಸನಾತನ ಪರಂಪರೆಯ ದೈದೀಪ್ಯತೆಯ ಪ್ರತಿರೂಪ ನಮ್ಮ ದೇಶ
ವಿನೂತನ ಆಲೋಚನೆಯ ಅನ್ವೇಷಣೆಗಳ ನಿಜರೂಪ ನಮ್ಮ ದೇಶ

ಸಂಸ್ಕೃತಿ ಹಾದಿಗೆ ಸೇರಿಸು ಹೆಜ್ಜೆ ವಿಶ್ವಗುರು ಆಗಲಿ ಭಾರತ
ಸಂಪ್ರದಾಯ ಸನ್ಮಾರ್ಗದಲಿ ಅಡಿಯಿಡುವ ಅಪರೂಪ ನಮ್ಮ ದೇಶ

ವಿಜ್ಞಾನದ ಹೊಂಬೆಳಕಲಿ ಮಿನುಗುವ ಜ್ಞಾನ ಭೂಮಿ ಅನವರತ
ವೇದಾಂತದ ಸಂಸರ್ಗತೆಯಲಿ ಬೆಳಗುವ ಅಗ್ನಿ ರೂಪ ನಮ್ಮ ದೇಶ

ಗೀತಾಚಾರ್ಯ ಬೋಧನೆಯ ಸಾರಾಂಶದ ಕರ್ಮಭೂಮಿ ನಮ್ಮದು
ಆಧ್ಯಾತ್ಮಿಕತೆ ತೇಜದಲಿ ಪ್ರಜ್ವಲಿಸುವ ದಿವ್ಯ ರೂಪ ನಮ್ಮ ದೇಶ

ಶತಮಾನಗಳ ಚರಿತೆಯ ವೈಭವದ ಪುಣ್ಯಭೂಮಿಯಿದು
ಸುಜಿಯ ಜೀವನದ ಅವಿಭಾಜ್ಯ ಭವ್ಯತೆಯ ಸುಸ್ವರೂಪ ನಮ್ಮ ದೇಶ

*****

ಎರಡು ಕವನಗಳು.

ಕವನ – 1

ಬೇಡಿಕೆ

– ಶೀಲಾ ಅರಕಲಗೂಡು

ಬಾರೋ ಕವನಾ ಬಾರೇ ಕಾವ್ಯಾ
ಬನ್ನಿರಿ ಬೇಗನೆ ಬೇಡುವೆನು
ಕಥೆಯೇ ಬಾ ಬಾ ಪ್ರಬಂಧ ನೀ ಬಾ
ತೋರಿರಿ ಕಿಂಚಿತ್ಕರುಣೆಯನು

ನನ್ನನು ಕಂಡರೆ ಕೋಪವದೇಕೆ?
ನನ್ನಯ ಮೊರೆಯದು ಕೇಳಿಸದೇ?
ಗೊತ್ತಿದೆ ತಪ್ಪನು ಮಾಡಿಹೆನೆಂದು
ಕ್ಷಮೆಯನು ಕೇಳುವೆ ನಾನಿಂದು

ಬಾಲ್ಯದಿ ಬಂದಿರಿ ಸಂತಸ ಕೊಟ್ಟಿರಿ
ನಿಮ್ಮೊಡನಾಟದಿ ಬೆಳೆದಿದ್ದೆ
ನಂತರ ನಿಮ್ಮನು ಮರೆತೇ ಬಿಟ್ಟೆ
ಪೋಷಣೆ ಮಾಡದೆ ನಾ ಕೆಟ್ಟೆ

ನೋಡಿಹೆ ನಿಮ್ಮನು ಕವಿಗಳ ಬಳಿಯಲಿ
ಆಡುತ ನಲಿಯುತ ಇರುವುದನು
ಅದೆಷ್ಟು ಮೋಹಕ ಸೌಂದರ್ಯವಿದೆ
ನಿಮ್ಮಯ ಚಂದದ ಗುಟ್ಟೇನು?

ತಪಸನು ಮಾಡುವೆ ಕೇಳಿದ ನೀಡುವೆ
ಅಪ್ಪಿ ಹಿಡಿಯುವೆನು ನಿಮ್ಮನ್ನು
ಎಂದೂ ಬಿಡದಲೆ ತೋರುವೆ ಪ್ರೀತಿಯ
ತಪ್ಪದೆ ಕೊಡುವೆನು ಮಾತನ್ನು

ಬನ್ನಿರಿ ಬನ್ನಿರಿ ಬೇಗನೆ ಬನ್ನಿರಿ
ಕುಳ್ಳಿರಿ ನನ್ನಯ ಹೃದಯದಲಿ
ತೋರಿರಿ ನಿಮ್ಮಂತಾಗುವ ಬಗೆಯನು
ಚಿಗುರಲಿ ಭಾವವು ನನ್ನಲ್ಲಿ

ನಿಮ್ಮೊಡನಾಡುತ ಹಗುರದಿ ತೇಲುತ
ತಳೆಯುವೆ ನಾ ಬಹು ರೂಪಗಳ
ಗಾಳಿಯೊ ಮೋಡವೊ ಕಾಮನಬಿಲ್ಲೋ
ಬಾಂದಳದಂಗಳ ನನ್ನ ಸ್ಥಳ

ಮರ ನಾನಾಗುವೆ ಹಣ್ಣಾಗುವೆ ನಾ
ಬಯಸಿದ ರೂಪವ ಪಡೆಯುವೆ ನಾ
ನಿಸರ್ಗ ಹೇಳುವ ಪಾಠವ ಕಲಿಯುತ
ಸೃಷ್ಟಿ ರಹಸ್ಯವ ತಿಳಿಯುವೆ ನಾ

ಬಳಿಯಲಿ ನೀವಿರೆ ಎಂತಹ ಸುಖವದು
ತೇಲುವೆ ಕಲ್ಪನೆ ಲೋಕದಲಿ
ದೂರದ ಚೇತನ ನನ್ನೊಳು ಸೇರಲಿ
ಬದುಕದು ಸಾರ್ಥಕವೆನ್ನಿಸಲಿ

***

ಕವನ – 2

ಕೇಳಿರಿ ಮಕ್ಕಳೆ

–ಶೀಲಾ ಅರಕಲಗೂಡು

(ಈ ಕವನವು ತೋಟಕ ಛಂದಸ್ಸಿನಲ್ಲಿದೆ. ಇದನ್ನು ಶ್ರೀ ವೆಂಕಟೇಶ ಸುಪ್ರಭಾತದ, ಕಡೆಯಲ್ಲಿ ಬರುವ, ಕಮಲಾಕುಚ ಚೂಚುಕ ಕುಂಕುಮತೋ.... ಈ ಧಾಟಿಯಲ್ಲಿ ಹಾಡಿಕೊಳ್ಳಬೇಕು)

ಕಮಲಾ ವಿಮಲಾ ಮೃದುಲಾ ಸಲಿಲಾ
ಕುಸುಮಾ ಶುಭದಾ ದನಿ ಕೇಳುವುದೇ ।
ಬಳಿ ಬನ್ನಿರಿ ನೀವ್ಗಳು ಸೇರುತಲೀ
ಕಥೆ ಹೇಳುವೆ ನಾ ನಿಮಗಾಗೆನುತಾ ॥ 1 ॥

ರವಿಯೂ ಶಶಿಯೂ ಮಧುವೂ ಹರಿಯೂ
ಅರವಿಂದನೆ ಬನ್ನಿರಿ ನೀವುಗಳೂ ।
ನಿಮಗೂ ಕಥೆ ನಾ ತಿಳಿ ಹೇಳುವೆನೂ
ಬಳಿ ಕುಳ್ಳಿರಿ ನೀವ್ಗಳು ಕೇಳುತಲೀ ॥ 2 ॥

ರಘುರಾಮನ ಸುಂದರ ಕಾವ್ಯವಿದೇ
ಬಹು ರಮ್ಯದ ಕೃಷ್ಣನ ಭಾರತವೂ ।
ಕರುನಾಡಿನ ವೈಭವದಾ ಕಥೆಯೂ
ಕಿವಿಗಮೃತವಾಗಿಯೆ ಕೇಳುವುದೂ ॥ 3 ॥

ರಘುರಾಮನು ತಂದೆಯ ಮಾತುಳಿಸೇ
ವನಕೈದಿದ ಸೀತೆಯ ಕೈಹಿಡಿದೂ ।
ಜೊತೆ ಲಕ್ಷ್ಮಣ ಹೋದನು ಕಾಪಿಡಲೂ
ಇದು ಎಂತಹ ದಿವ್ಯ ಕಥಾನಕವೂ ॥ 4 ॥

ವನಕೈದಿದ ರಾವಣ ಸೀತೆಯನೂ
ಕರೆದೊಯ್ದನು ಲಂಕೆಗೆ ಮೋಸದಲೀ ।
ಕಪಿ ಸೇನೆಯು ಕಟ್ಟಿತು ಸೇತುವೆಯಾ
ಜೊತೆಗೂಡಿದ ರಾಮನು ದಾಟಿದನೂ ॥ 5 ॥

ಬಹು ಘೋರದ ಯುದ್ಧವು ಆಯಿತು ಲಂ–
ಕೆಯಲೀ ತಲೆ ಬಿದ್ದಿತು ರಾವಣದೂ ।
ಕರುಣಾಮಯಿ ರಾಮನು ಹಿಂತಿರುಗೀ
ಸುಖದಿಂದಲಿ ರಾಜ್ಯವನಾಳಿದನೂ ॥ 6 ॥

ಧೃತರಾಷ್ಟ್ರನ ಮೋಹದ ಅಂಧತೆಗೇ
ಬಲು ದುಷ್ಟರು ಮಕ್ಕಳು ನೂರಿಹರೂ ।
ಕಡು ದ್ವೇಷದಿ ಪಾಂಡವ ಸೋದರರಾ
ರಣರಂಗದಿ ಕೊಲ್ಲಲು ನೋಡಿದರೂ ॥ 7 ॥

ರಣಭೂಮಿಯನರ್ಜುನ ನೋಡುತಲೇ
ಮನಗುಂದಿ ವಿಷಾದದ ಭಾವದಲೀ ।
ಸಖ ಕೃಷ್ಣಗೆ ಹೇಳಿದ ಹೀಗೆನುತಾ
ಹಿರಿ ಭೀಷ್ಮರ ದ್ರೋಣರ ಸಾಯಿಸೆನಾ ॥ 8 ॥

ಸಖ ಕೃಷ್ಣನು ಗೀತೆಯ ಸಾರವನೂ
ಪರಿಪಾಲಿಸಬೇಕಿಹ ಧರ್ಮವನೂ ।
ತಿಳಿ ಹೇಳಿದ ನಂತರ ಪಾರ್ಥನಿಗೇ
ಅರಿವಾಯಿತು ಧರ್ಮದ ಸೂಕ್ಷ್ಮವದೂ ॥ 9 ॥

ಜಯವೆಂದಿಗು ಧರ್ಮಕೆ ಸಿಕ್ಕುವುದೂ
ಅದರಿಂದಲೆ ಪಾಂಡವರ್ಕೈವರಿಗೇ ।
ಜಯವಾಯಿತು ಕೃಷ್ಣನ ಬೆಂಬಲದೀ
ಒಳಿತಾಯಿತು ಧರ್ಮದ ನಂಬಿಕೆಗೇ ॥ 10 ॥

ಪ್ರಿಯ ಭಾರತ ಅಸ್ಮಿತೆ ಕಂಗೊಳಿಸೀ
ಬೆಳಕಾಗಲಿ ಧೈರ್ಯವ ನೀಡುತಲೀ ।
ಚಿರ ನೂತನ ಸುಸ್ಥಿರವಾಗಿರಲೀ
ಇದರಾಸ್ತಿಯು ನಾವ್ಗಳೆ ಆಗಿರಲೀ ॥ 11 ॥

ಕರುನಾಡಿನ ಮಕ್ಕಳು ನಾವುಗಳೂ
ಬಲು ಹೆಮ್ಮೆಯ ಭಾವದಿ ಬಂದಿಹೆವೈ ।
ಜಯ ಭಾರತವೆನ್ನುವ ಘೋಷಣೆಯಾ
ದನಿ ಏರಿಸಿ ಹೇಳುವ ಜೈ ಜಯಜೈ ॥ 12 ॥

*****

ಸಾಯುವುದೋ? ಬೇಡವೋ ನೀವೇ ಹೇಳಿ

–ನಾಗರತ್ನ ಚಂದ್ರಶೇಖರ್

ಸಾಯುವುದೋ, ಬೇಡವೋ ಯಾರು ನಿರ್ಧರಿಸಬೇಕಂತೀರಿ?

ಸಾಯುವುದೋ? ಬೇಡವೋ? ಛೆ! ಇದೇನಿದು ಪ್ರಾರಂಭದಲ್ಲೇ ಸಾವು–ನೋವು ಇದೆಂತಹ ಲೇಖನ, ಇದರ ಉದ್ದೇಶ, ಅರ್ಥ, ಪ್ರಯೋಜನ ಏನು, ಎಂದು ನಿಮಗೆ ಬೇಸರವಾಗಿರಬೇಕು ಖಂಡಿತ.

ಸಾವು ಅಗತ್ಯ, ಅನಿವಾರ್ಯ, ಅವಶ್ಯಕತೆ ಎನ್ನುವ ವಿಶ್ಲೇಷಣೆಯೊಂದಿಗೆ ಅದರ ಹಿಂದಿನ ಅರ್ಥ, ಉದ್ದೇಶ, ಪ್ರಕರಣ, ಸನ್ನಿವೇಶ ಇತ್ಯಾದಿ ಇತ್ಯಾದಿಗಳನ್ನು ತಿಳಿದುಕೊಂಡಾಗ ಸಾಯುವುದೋ ಬೇಡವೋ ಎಂದು ಯಾವ ಮನುಷ್ಯ ಏಕೆ ತನ್ನೊಳಗೇ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದಾನೆ ಎಂದು ಅರ್ಥ ಮಾಡಿಕೊಳ್ಳಲು ಸಾಧ್ಯ.

ಅಪ್ಪ–ಅಮ್ಮ ಸೀರಿಯಸ್, ಇನ್ನೇನು ಕೊನೆಗಳಿಗೆ ಎಣಿಕೆ ಪ್ರಾರಂಭವಾಗಿದೆ ಎಂಬ ಸುದ್ದಿ ಸಾವಿರಾರು ಮೈಲಿ ದೂರದಲ್ಲಿರುವ ವಿದೇಶವಾಸಿ ಮಗನಿಗೂ ಮಗಳಿಗೂ ತಲುಪಿದ ತಕ್ಷಣ ಅವರ ಲೆಕ್ಕಾಚಾರ ಶುರುವಾಗುತ್ತದೆ. ಸಿಗುವ ರಜೆ, ಹಿಡಿಯಬೇಕಾದ ವಿಮಾನ, ಅಲ್ಲಿ ಇರಬೇಕಾಗಿಬರಬಹುದಾದ ದಿನಗಳು ಹೀಗೆ ಒಂದು ದೊಡ್ಡ ಸಮಸ್ಯೆಗಳ ಮೂಟೆಗೆ ಉತ್ತರ ಸಿಗಬೇಕಾದರೆ ಅವರು ಅಲ್ಲಿಗೆ ತಲುಪಲೇಬೇಕಾಗುತ್ತದೆ. ಮಗನ ಅಥವಾ ಮಗಳ ಮುಖ ನೋಡಿದ ಮೇಲೂ ಸಾಯುವ ಆಟಕ್ಕೆ ಕೊನೆ ಸಿಗದೇ ಬದುಕಿ ಬಂದವರು ವಾಪಸ್ಸು ಹೋದಮೇಲೆ ಎಷ್ಟೋ ದಿನದ ಮೇಲೆ ಸತ್ತವರೆಷ್ಟೋ ಜನ ಅಥವಾ ಇವತ್ತು ಸಾಯಬಹುದು, ನಾಳೆ ಪ್ರಾಣ ಹೋಗೇಬಿಡುತ್ತದೆ ಎಂದು ಲೆಕ್ಕಾಚಾರ ಹಾಕುತ್ತಾ ತುದಿಗಾಲಲ್ಲಿ ನಿಂತವರಿಗೂ ಲೆಕ್ಕವಿಲ್ಲ.

ಸಾಯುವುದೇ ನಿಶ್ಚಯವಾದ ಮೇಲೆ ಅದು ನಾವು ಹೇಳಿದ ಸಮಯಕ್ಕೆ ಬರುತ್ತದೆ ಎಂಬ ಗ್ಯಾರಂಟಿ ಕೊಡಲು ಆಸ್ಪತ್ರೆಯವರಂತೂ ಸಿದ್ಧವಿರುವುದಿಲ್ಲ ಅವರಿಗೆ ರೋಗಿ ಸಾವನ್ನು ಮುಂದೂಡಿದಷ್ಟು ಲಾಭವಲ್ಲವೇ? ತುರ್ತು ನಿಗಾ ಘಟಕದಲ್ಲಿ ಇದ್ದರಂತೂ ಅವರಿಗೆ ಹಣದ ಝಣಝಣ. ರೋಗಿಯ ಬಂಧುಗಳಿಗೆ ಎದೆಯಲ್ಲಿ ಢವಢವ! ಯಮ ಧರ್ಮರಾಯನನ್ನೇ ಹಿಮ್ಮೆಟ್ಟಿಸುವ, ನಾವು ಕರೆದಾಗ ಬಾ ಎಂದು ಹೇಳುವಷ್ಟು ಭಂಡತೆಯ ಆಸ್ಪತ್ರೆಯವರಿಗೆ ಮೂಗಿನ ನಳಿಕೆಯೊಳಗೆ ಅಡಗಿ ಕುಳಿತ ಪ್ರಾಣಪಕ್ಷಿಯು ವೈದ್ಯರ ಅನುಮತಿಗಾಗಿ ಕಾದು ಕುಳಿತಿರುವಾಗ ಯಮಧರ್ಮರಾಯ ಹಗ್ಗ ಹೊಸೆಯುತ್ತ, ಹೊಸೆಯುತ್ತ ತನ್ನನ್ನೇ ಕಾಯಿಸುತ್ತಿರುವ ಮಹಾಶಯರ ಮೇಲೆ ಹಲ್ಲು ಮಸೆಯುತ್ತಿರಬೇಕಷ್ಟೆ!

ಅಯ್ಯೋ! ನನ್ನ ಮೈದುನನ ನಿಶ್ಚಿತಾರ್ಥ ಮುಂದಿನ ವಾರ ಇತ್ತು, ಅಷ್ಟರಲ್ಲಿ ಇವರು ತೀರಿಕೊಂಡಿದ್ದರೆ ಚೆನ್ನಾಗಿತ್ತು. ನಾವು ಯುರೋ ಪ್ರವಾಸ ಹೊರಟಿದ್ದೇವೆ. ಈಗ ನೋಡಿದರೆ ದೊಡ್ಡಪ್ಪ ಈಗಲೂ ಆಗಲೋ ಎನ್ನುವ ಹಾಗಿದ್ದಾರೆ. ನಾಲ್ಕು ದಿನದಿಂದ ಈಗ ಹೋಗ್ತಾರೆ ಆಗ ಹೋಗ್ತಾರೆ ಅಂತಾನೇ ಕಾಯುತ್ತಿದ್ದೇವೆ.

ಅವರು ಅಷ್ಟು ಬೇಗ ಸಾಯಕ್ಕೆ ಆಸ್ಪತ್ರೆಯವರು ಎಲ್ಲಿ ಬಿಡ್ತಾರೆ? ಕುಟುಕು ಜೀವ ಇದೆ ಅಂತ ಮೂಗಿಗೆ ನಳಿಕೆ ಹಾಕಿ ಎಂಟು ದಿನದಿಂದ ಹೇಳ್ತಾನೆ ಇದಾರೆ. ದಿನಕ್ಕೆ 40,000 ಸಿಗೋವಾಗ ಒಂದಷ್ಟು ಲಕ್ಷ ಆದಮೇಲೆ ಅಲ್ವೇ ಡಿಕ್ಲೇರ್ ಮಾಡೋದು ಅವರು.

ನೀವು ಹೇಳಿದ್ದು ಖರೇನೇ ಇದೇರಿ, ನಮ್ಮ ನೆಂಟರೊಬ್ಬರಿಗೆ ಸೀರಿಯಸ್ಸಾಗಿ ನರ್ಸಿಂಗ್ ಹೋಂಗೆ ಸೇರಿಸಬೇಕಾಯಿತು. ಅಲ್ಲಿ ದುಡ್ಡು ಕಟ್ಟುವಷ್ಟು ಶ್ರೀಮಂತರಲ್ಲ ಅವರು. ಒಂದೇ ದಿನಕ್ಕೆ ಅವರ ಬಂಡವಾಳ ಎಷ್ಟು ಅಂತ ಆ ನರ್ಸಿಂಗ್

ಹೋಂನವರಿಗೆ ಗೊತ್ತಾಯ್ತು. ಏನೋ ಎರಡೇ ದಿನಕ್ಕೆ ಖೇಲ್ ಖತಂ. ಡೆಡ್ ಬಾಡಿ ತೆಗೆದುಕೊಂಡು ಹೋಗಿ ಅಂತ ಹೇಳೇಬಿಟ್ರು.. ಸತ್ತವರಿಗೂ ನೆಮ್ಮದಿ. ಲಕ್ಷಾಂತರ ಸಾಲ ಮಾಡಿ ಆಸ್ಪತ್ರೆ ಋಣ ತೀರಿಸಬೇಕಾದ ಕಷ್ಟ ತಪ್ಪಿತಲ್ಲ ಅಂತ ಕುಟುಂಬದವರಿಗೂ ಎಲ್ಲೋ ಆ ದುಃಖದಲ್ಲೂ ಒಂದಷ್ಟು ಸಮಾಧಾನ ಸಿಕ್ಕಿರಬಹುದೇನೋ.

ಸಾವು ಅನಿವಾರ್ಯವಾದಾಗ ಅದನ್ನು ಮುಂದೂಡುವ ಅಗತ್ಯ ಯಾರಿಗಿದೆ ಎಂಬ ಪ್ರಶ್ನೆಗೆ ಮೇಲಿನ ಪ್ರಕರಣಗಳಲ್ಲಿ ಉತ್ತರ ಸಿಕ್ಕಿರಬಹುದು. ತಿಂಗಳುಗಟ್ಟಲೆ ಬದುಕುವ ಒಂದು ಸಣ್ಣ ಆಸೆಯನ್ನು ಹಿಡಿದುಕೊಂಡೇ ವೈದ್ಯರ ಆಶ್ವಾಸನೆ, ಮನೆಯವರ ಕುಟುಂಬದವರ ಪ್ರೀತಿಯ ಆರೈಕೆಯಲ್ಲಿ ಹಾಸಿಗೆ ಹಿಡಿದವರು ನಾನು ಸಾಯುವುದೋ ಬೇಡವೋ ಎಂಬ ಗೊಂದಲಕ್ಕೆ ಖಂಡಿತ ಒಳಗಾಗಿಯೇ ಇರಬಹುದು.

ಚಿಕ್ಕ ಪುಟ್ಟ ಪ್ರಾಯದವರನ್ನು ಬಿಡಿ., ತೊಂಬತ್ತರ ಅಂಚನ್ನು ತಲುಪಿದವರಿಗೂ ಇನ್ನೂ ಬದುಕಬೇಕೆಂಬ ಆಸೆ. ಸಾಯುವುದೇ ಇಲ್ಲ, ಜೀವಂತ ಸಮಾಧಿಯಾಗುತ್ತೇನೆ ಎಂದು ಹೊರಟ ಅನೇಕ ಯೋಗಿಗಳಿಗೆ ಬದುಕುವ ಹಕ್ಕನ್ನು, ಆಸೆಯನ್ನು ಧಿಕ್ಕರಿಸುವ ದೃಢ ಮನಸ್ಸು ಉಂಟಾಗಲು ಕಾರಣವಾದರೂ ಏನಿರಬಹುದು ಎಂಬ ಜಿಜ್ಞಾಸೆ ಬರಬಹುದು. ಮರುದಿನದ ಸೂರ್ಯೋದಯ ನೋಡುತ್ತೇನೆ ಎಂಬ ನಂಬಿಕೆಯಿಂದಲೇ ರಾತ್ರಿ ಎಲ್ಲರೂ ಸುಖವಾಗಿ ಮಲಗುತ್ತಾರೆ. ಆ ರಾತ್ರಿ ಅವರ ಕೊನೆಯ ರಾತ್ರಿ ಎಂಬ ಅರಿವಿಲ್ಲದೆ ಕೆಲವರು ಚಿರನಿದ್ರೆಗೆ ಜಾರಿಬಿಟ್ಟಿರುತ್ತಾರೆ. ಬದುಕಿನ ಕೊನೆ ಹೀಗೆ ಸುಖಾಂತವಾಗಿರುತ್ತದೆ ಎಂದು ಸತ್ತವರಿಗಂತೂ ಕಲ್ಪನೆಗೂ ಬಂದಿರುವುದಿಲ್ಲ.

ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಯಿಂದ ನರಳುವವರ ಕುಟುಂಬದವರಿಗೆ ಸಾವನ್ನು ಸ್ವೀಕರಿಸುವ ಮನೋಭೂಮಿಕೆ ಒಂದು ರೀತಿಯಲ್ಲಿ ತಯಾರಾಗಿರುವುದರಿಂದ ಆಘಾತವನ್ನು ತಡೆದುಕೊಳ್ಳುವ ಶಕ್ತಿ ಬರಬಹುದು. ಸಾವಿನ ಸಾರ್ಥಕತೆಯನ್ನು ಪಡೆಯಲು ಅಥವಾ ನೀಡಲು ಕೆಲವೊಮ್ಮೆ ಆಕಸ್ಮಿಕಕ್ಕೊಳಗಾಗಿ ಮೆದುಳು ನಿಷ್ಕ್ರಿಯರಾದವರ ಕುಟುಂಬದವರು ಅಂಗಾಂಗ ದಾನ ಮಾಡಿ ಧನ್ಯತೆಯನ್ನು ಹೊಂದುತ್ತಾರೆ. ಆಗ ಸಾಯುವುದೋ ಬೇಡವೋ ಎಂಬ ದ್ವಂದ್ವಕ್ಕೆ ಆಸ್ಪದವೇ ಇರುವುದಿಲ್ಲ.

ಈಗ ಹೇಳಿ ಸಾಯುವುದೋ ಬೇಡವೋ ಎಂಬ ಪ್ರಶ್ನೆ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ದಿನ ಬರಬಹುದು ಅದನ್ನು ನಿರ್ಧರಿಸಬೇಕಾದವರು ನಾವಲ್ಲ ನರ್ಸಿಂಗ್ ಹೋಂನವರು ಅಥವಾ ಯಮಧರ್ಮರಾಯ ಎಂದು ಹೇಳಬಹುದು ಅಲ್ಲವೇ. ಏನಂತೀರಿ?

*****

ಅಪ್ಪುಗೆ

– ಮಹಾಬಲ

ಅಬ್ಬ ಅದೆಂಥ ಬಿಸುಪು, ಸೌಹಾರ್ದಮಯ ಈ ಅಪ್ಪುಗೆ
ಎರಡು ವರ್ಷವಾಗಿತ್ತೆ ಕಳಚಿ ಬಾಂಧವ್ಯದ ಬೆಸುಗೆ?
ಈಗಲಾದರೂ ಆಯಿತಲ್ಲ ಇಬ್ಬರಿಗೂ ಜ್ಞಾನೋದಯ
ಹೇಗೋ ತಪ್ಪಿತು ಅಂತೂ ಆ ಅನಿಷ್ಟದ ಕರಡಿ ಹಿಡಿತ

ಅಂದು ನಿನ್ನಪ್ಪ ಹಾಕಿದ್ದ ನನಗೆ ಹಿಡಿಶಾಪ ಕೋಪದಲಿ
ನಾನೂ ಲೇವಡಿ ಮಾಡಿದ್ದೆ ಅವನ ಪತ್ರಿಕಾಗೋಷ್ಠಿಯಲಿ
ನನ್ನ ಅಂದಿನ ಚರ್ಯೆಗೆ ಈಗ ನನಗೆ ಪರಿತಾಪ
ನಿಮ್ಮಪ್ಪನಿಗೂ ಹೇಳು ಎಲ್ಲ ಮರೆಯಲಿದು ಸಕಾಲ

ನಾಲ್ಕು ದಿನದ ಬಾಳು ಇದು ಯಾವುದು ಗೆಳೆಯ ಶಾಶ್ವತ
ಇಲ್ಲಿ ಯಾರೂ ಮಿತ್ರರೂ ಅಲ್ಲ ಶತ್ರುಗಳೂ ಅಲ್ಲವೇ ಅಲ್ಲ
ಭವಿಷ್ಯದತ್ತ ನೆಟ್ಟಿರಬೇಕು ನಮ್ಮ ಮುಂದಿನ ನೋಟ
ಹಳೆಯದೆಲ್ಲ ಮರೆತು ಆರಂಭಿಸೋಣ ಹೊಸಪಾಠ

ಇದು ಸಮಯದ ಕರೆ: ಬಾ ಜತೆಯಾಗಿ ಸಾಗೋಣ
ಸೃಷ್ಟಿಯಾಗಿದೆ ಇಂದು ನಿನ್ನದೇ ಮೊದಲ ಉದ್ಯೋಗ

*****

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮ

– ಜಿ.ವಿ. ನಿರ್ಮಲ



ಆಗಸ್ಟ್ ಮೊದಲ ದಿನದಿಂದಲೇ ಸ್ವಾತಂತ್ರ್ಯದ ಅಮೃತೋತ್ಸವದ ಸಂಭ್ರಮಾಚರಣೆ ಪ್ರಾರಂಭ ವಾಗಿದೆ. ಇದೇ ನೆಪದಲ್ಲಿ ನಮ್ಮ ಸ್ನೇಹಿತೆಯರ ಗುಂಪು ಒಂದು ಅವಿಸ್ಮರಣೀಯ ಪ್ರವಾಸಕ್ಕೆ ಮುಂದಾದೆವು. 'ಭಾರತದ ಉಕ್ಕಿನ ಮನುಷ್ಯ' ಎಂದೇ ಪ್ರಖ್ಯಾತರಾಗಿದ್ದ ಭಾರತದ ಮೊದಲ ಉಪಪ್ರಧಾನಿ ಹಾಗೂ ಗೃಹಮಂತ್ರಿ ಸರ್ದಾರ್ ವಲ್ಲಭಭಾಯ್ ಪಟೇಲರಿಗೆ ಗೌರವ ಸಲ್ಲಿಸಲೆಂದೇ ಗುಜರಾತಿನ ಕೆವಾಡಿಯಾದಲ್ಲಿ ಸ್ಥಾಪನೆಯಾಗಿರುವ ಐಕ್ಯತೆಯ ಪ್ರತಿಮೆ ಅಂದರೆ 'ಸ್ಟಾಚೂ ಆಫ್ ಯೂನಿಟಿ'ಗೆ ಪ್ರವಾಸ ಹೋಗಲು ನಿಶ್ಚಯಿಸಿದೆವು. ವಿವಿಧ ರಾಜ್ಯಗಳ ಮಹಾರಾಜರುಗಳ ಮನವೊಲಿಸಿ, ಒಪ್ಪಿಸಿ, ಒಟ್ಟುಗೂಡಿಸಿ ಸ್ವತಂತ್ರ ಭಾರತದ ಸ್ಥಾಪನೆಗೆ ಭದ್ರ ಬುನಾದಿ ಹಾಕಿದ ಕೀರ್ತಿ ಸಲ್ಲುವದು ಈ ಮಹಾನ್ ವ್ಯಕ್ತಿಗೆ. ಐಕ್ಯತೆಯ ಪ್ರತಿಮೆ ಇಂದು ಪ್ರಪಂಚದ ಅತಿ ಎತ್ತರವಾದ ಪ್ರತಿಮೆ ಎನ್ನುವ ಹೆಗ್ಗಳಕೆಗೂ ಪಾತ್ರವಾಗಿದೆ. ಅಮೆರಿಕದ 'ಸ್ಟಾಚೂ ಆಫ್ ಲಿಬರ್ಟಿ'ಯ ಎತ್ತರ 93 ಮೀಟರ್ ಇದ್ದರೆ ಸರ್ದಾರರ ಭವ್ಯವಾದ ಪ್ರತಿಮೆ ಇದರ ಸುಮಾರು ದುಪ್ಪಟ್ಟು ಅಂದರೆ 182 ಮೀಟರ್ ಎತ್ತರವಿದೆ. ಗುಜರಾತಿನಲ್ಲಿ ಅಂದು 182 ವಿಧಾನಸಭಾ ಕ್ಷೇತ್ರಗಳಿದ್ದದ್ದರಿಂದಲೇ ಈ ಪ್ರತಿಮೆಯ ಎತ್ತರವನ್ನೂ 182 ಮೀಟರ್ ಎಂದು ನಿರ್ಧರಿಸಿದರಂತೆ! ಈ ವಿಶಿಷ್ಟ ರಾಷ್ಟ್ರೀಯ ಸ್ಮಾರಕವನ್ನು ಸ್ವಾತಂತ್ರ್ಯದ ಅಮೃತಮಹೋತ್ಸವದ ತಿಂಗಳಿನಲ್ಲಿ ನೋಡಿ ಕಣ್ತುಂಬಿಕೊಂಡೆವು.

ಐಕ್ಯತೆಯ ಪ್ರತಿಮೆ ಎಲ್ಲಿದೆ?

ಐಕ್ಯತೆಯ ಪ್ರತಿಮೆ ಗುಜರಾತಿನ ರಾಜಧಾನಿ ಅಹಮದಾಬಾದಿನಿಂದ ಸುಮಾರು ಮೂರೂವರೆ ಗಂಟೆಗಳಷ್ಟು ಅಥವಾ ವಡೋದರಾದಿಂದ ಎರಡು ಗಂಟೆಗಳಷ್ಟು ದೂರವಿರುವ ಕೆವಾಡಿಯಾದ ಸಾಧು ಬೆಟ್ ದ್ವೀಪದಲ್ಲಿದೆ. ಈ ಪ್ರದೇಶವನ್ನು ಏಕತಾ ನಗರ ಎಂದು ಹೆಸರಿಸಿದ್ದಾರೆ. ವಿಂಧ್ಯಾ ಮತ್ತು ಸಾತ್ಪುರ ಬೆಟ್ಟಗಳ ನಡುವೆ ನರ್ಮದಾ ನದಿಯ ಕಣಿವೆಯ ಸುಂದರ ಪ್ರದೇಶದಲ್ಲಿ ಮಾನವ ನಿರ್ಮಿತ ಸರೋವರದ ತಟದಲ್ಲಿ, ನರ್ಮದಾ ನದಿಗೆ ಅಡ್ಡವಾಗಿ ಕಟ್ಟಿರುವ ಸರ್ದಾರ್ ಸರೋವರ ಅಣೆಕಟ್ಟನ್ನು ನೋಡುತ್ತಾ ನಿಂತಿರುವ ಸರ್ದಾರ್ ವಲ್ಲಭಭಾಯ್ ಪಟೇಲರ ಲೋಹದ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿಯವರು ಅನಾವರಣ ಮಾಡಿದ್ದು 2018 ಅಕ್ಟೋಬರ್ 31ರಂದು. ಅಂದೇ ಸರ್ದಾರರ 143ನೇ ಹುಟ್ಟುಹಬ್ಬ. ನರೇಂದ್ರ ಮೋದಿಯವರು 2010ರ ಅಕ್ಟೋಬರ್ 7ರಂದು ಯೋಜನೆಗೆ ಚಾಲನೆ ಕೊಟ್ಟಿದ್ದರು. ಅಂದು ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಕನಸು ನನಸಾಗುವ ವೇಳೆಗೆ ಅವರು ಭಾರತದ ಪ್ರಧಾನಮಂತ್ರಿಯಾಗಿದ್ದು ಮತ್ತೊಂದು ಮಹತ್ವದ ಹೆಜ್ಜೆ ಎನ್ನುವುದರಲ್ಲಿ ಸಂದೇಹವಿಲ್ಲ.



ಪ್ರತಿಮೆ ಸ್ಥಾಪನೆಯ ಯೋಜನೆ

ಪ್ರತಿಮೆಯ ನಿರ್ಮಾಣದ ಜವಾಬ್ದಾರಿಯನ್ನು ನಿರ್ವಹಿಸಲೆಂದೇ 'ಸರ್ದಾರ್ ವಲ್ಲಭಭಾಯ್ ಪಟೇಲ್ ರಾಷ್ಟ್ರೀಯ ಏಕತಾ ಟ್ರಸ್ಟ್'ನ ಸ್ಥಾಪನೆಯಾಯಿತು. ಬೃಹತ್ ಪ್ರಮಾಣದ ಕಬ್ಬಿಣವನ್ನು ಸಂಗ್ರಹಿಸಲು ಕೃಷಿಗಾಗಿ ಬಳಸಿ ಹಳೆಯದಾಗಿರುವ ಕಬ್ಬಿಣದ ಉಪಕರಣಗಳನ್ನು ದಾನವಾಗಿ ನೀಡುವಂತೆ ರೈತರಲ್ಲಿ ಮನವಿ ಮಾಡಲಾಯಿತು. ಸುಮಾರು 5000 ಟನ್‌ಗಳಷ್ಟು ಕಬ್ಬಿಣ ಸಂಗ್ರಹವಾಯಿತು. ಈ ಕಬ್ಬಿಣವನ್ನು ಪ್ರತಿಮೆಗೆ ಬಳಸದಿದ್ದರೂ ಯೋಜನೆಯಲ್ಲಿ ಬಳಸಿದರು. ಗುಜರಾತ್ ಹಾಗೂ ಕೇಂದ್ರ ಸರ್ಕಾರದ ವತಿಯಿಂದಲೂ ಹಣ ಹರಿದು ಬಂತು. ಭಾರತದಾದ್ಯಂತ ನಾನಾ ವಿಧಾನಗಳಲ್ಲಿ ಹಣ ಸಂಗ್ರಹಣೆ ಮಾಡಲಾಯಿತು. ಹಣ ಸಂಗ್ರಹಣೆಯಲ್ಲಿ ಖಾಸಗಿ ಹಾಗೂ ಸಾರ್ವಜನಿಕರ ಸಹಭಾಗಿತ್ವವೂ ಇದೆ.

ಪ್ರತಿಮೆಯ ವಿನ್ಯಾಸ

ಮೊದಲಿಗೆ ಹಲವಾರು ಕಲಾವಿದರು ತಮ್ಮ ವಿನ್ಯಾಸವನ್ನು ಸಮರ್ಪಿಸಿದರು. ದೇಶದಲ್ಲಿರುವ ವಲ್ಲಭಭಾಯಿಯವರ ಹಲವಾರು ಪ್ರತಿಮೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ಇತಿಹಾಸಜ್ಞರು, ಕಲಾವಿದರು, ವಿದ್ವಾಂಸರು, ಕಲಾವಿದ ಪದ್ಮಭೂಷಣ ರಾಮ್ ವಿ.ಸುತರ್‌ರವರ ವಿನ್ಯಾಸವನ್ನು ಅಂಗೀಕರಿಸಿದರು. ಈ ವಿನ್ಯಾಸ ಅಹಮದಾಬಾದಿನ ವಿಮಾನ ನಿಲ್ದಾಣದಲ್ಲಿರುವ ಪ್ರತಿಮೆಯನ್ನೇ ಹೋಲುತ್ತಿತ್ತು. ಶ್ರೀಯುತ ರಾಮ್ ವಿ. ಸುತರ್‌ರವರ ಮಗ ಶ್ರೀ.ಅನಿಲ್ ಸುತರ್ ಅವರು ಹೇಳುವಂತೆ 'ಪ್ರತಿಮೆಯ ಮುಖಭಾವ, ನಿಲುವು ಮತ್ತು ಭಂಗಿ ವಲ್ಲಭ ಭಾಯಿಯವರ ವ್ಯಕ್ತಿತ್ವದಲ್ಲಿದ್ದ ಗಾಂಭೀರ್ಯ, ನಂಬಿಕೆ ಮತ್ತು ಕಬ್ಬಿಣದಂತಹ ಮನಃಸ್ಥೈರ್ಯವನ್ನೂ, ಅದರ ಜೊತೆಜೊತೆಗೆ ಆರ್ದ್ರತೆಯನ್ನೂ ಹೊರಸೂಸುವಂತಿದೆ. ಪ್ರತಿಮೆ ತಲೆ ಎತ್ತಿಕೊಂಡಂತಿದೆ; ಹೆಗಲ ಮೇಲೆ ಶಾಲು ಹೊದ್ದಿದ್ದು, ಕೈಗಳನ್ನು ಅಕ್ಕಪಕ್ಕಗಳಲ್ಲಿ ಇಳಬಿಟ್ಟಿರುವುದು, ಮುನ್ನಡೆದು ಹೋಗಲು ಸಿದ್ಧವಾಗಿರುವಂತೆ ತೋರುತ್ತದೆ.'

3 ಅಡಿ, 18 ಅಡಿ ಹಾಗೂ 30 ಅಡಿಗಳ ಮೂರು ಪ್ರತಿಮೆಗಳನ್ನು ತಯಾರಿಸಿದ ನಂತರ ಮೂರು ಆಯಾಮಗಳಲ್ಲಿ ಸ್ಕ್ಯಾನ್ ಮಾಡಲಾಯಿತು. ಇದನ್ನು ಆಧಾರವಾಗಿರಿಸಿಕೊಂಡು ಸ್ಟೀಲ್ ಚೌಕಟ್ಟು, ಬಲವರ್ಧಿತ ಕಾಂಕ್ರೀಟ್ ಮತ್ತು ಕಂಚಿನ ಹೊದಿಕೆಗಳಿಂದ ನಿರ್ಮಿಸಲಾಗಿದೆ. ವಿಪರ್ಯಾಸವೆಂದರೆ ಹಲವಾರು ದೇಶಗಳಿಂದ ಟೆಂಡರ್ ಆಹ್ವಾನಿಸಿದ್ದರೂ ಚೌಕಟ್ಟು ತಯಾರಿಸುವ ಟೆಂಡರ್ ಪಡೆದುಕೊಂಡದ್ದು ಚೀನಾ ದೇಶ. ಇದಕ್ಕೆ ನಾನಾ ರೀತಿಯ ಟೀಕೆಗಳೂ ಬಂದವು.



ಈ ಯೋಜನೆಯ ವಿನ್ಯಾಸ ಮತ್ತು ನಿರ್ಮಾಣದಲ್ಲಿ ಭಾರತದ 250 ಎಂಜನಿಯರುಗಳ ಶ್ರಮವಿದೆ. ಭಾರತದ ಲಾರ್ಸೆನ್ ಮತ್ತು ಟೋಬ್ರೋ ಸಂಸ್ಥೆ ನಿರ್ಮಾಣ ಮಾಡಿರುವ ಇಡೀ ಕಟ್ಟಡದ ಒಟ್ಟು ಎತ್ತರ 240 ಮೀಟರ್. ಪ್ರತಿಮೆಯ ಕೇಂದ್ರ ಭಾಗವನ್ನು ಸ್ಟೀಲ್ ಚೌಕಟ್ಟು, ಬಲವರ್ಧಿತ ಸಿಮೆಂಟ್ ಕಾಂಕ್ರೀಟ್‌ಗಳಿಂದ ನಿರ್ಮಿಸಿದ್ದಾರೆ. ಅದರ ಮೇಲಿರುವ ಹೊದಿಕೆಯಲ್ಲಿ ಬಹಳ ವಿಶಿಷ್ಟವಾಗಿ ವಿನ್ಯಾಸ ಗೊಳಿಸಿರುವ 553 ಕಂಚಿನ ಫಲಕಗಳಿವೆ. ಪ್ರತಿಯೊಂದು ಫಲಕದಲ್ಲಿ 10ರಿಂದ 15 ಚಿಕ್ಕ ಚಿಕ್ಕ ಫಲಕಗಳಿವೆ. ಟರ್ನರ್ ಕನ್‌ಸ್ಟ್ರಕ್ಷನ್ ಮೈಕೇಲ್ ಗ್ರೇವ್ಸ್ ಮತ್ತು ಅಸೋಸಿಯೇಟ್ಸ್ ಹಾಗೂ ಮೈನ್ಹಾರ್ಡ್ ಗ್ರೂಪ್ ಒಕ್ಕೂಟ ಮೇಲ್ವಿಚಾರಣೆಯನ್ನು ನಿರ್ವಹಿಸಿತು. ಮೈಕೇಲ್ ಗ್ರೇವ್ಸ್ ಬುರ್ಜ್ ಖಲೀಫಾದ ಯೋಜನಾ ವ್ಯವಸ್ಥಾಪಕರಾಗಿದ್ದರು ಎನ್ನುವುದನ್ನೂ ಇಲ್ಲಿ ನೆನಪು ಮಾಡಿಕೊಳ್ಳಬಹುದು. ಅಂಕಿಅಂಶಗಳು ಹೇಳುವಂತೆ 4076 ಕೆಲಸಗಾರರು ಈ ಯೋಜನೆಯಲ್ಲಿ ಕಾರ್ಯನಿರತರಾಗಿದ್ದರು. ಸುಮಾರು ಒಂದು ಸಾವಿರ ಜನ ಪ್ರತಿಮೆಯ ಲೋಹದ ಹೊದಿಕೆ ಸಿದ್ಧಗೊಳಿಸುವುದರಲ್ಲಿಯೇ ಪಾಲ್ಗೊಂಡಿದ್ದು ಅವರಲ್ಲಿ 800 ಸ್ಥಳೀಯ ಕೆಲಸಗಾರರು ಹಾಗೂ 200 ಜನ ಚೀನಾ ದೇಶದ ಕೆಲಸಗಾರರು ಸೇರಿದ್ದಾರೆ. ಒಟ್ಟು 56 ತಿಂಗಳುಗಳಲ್ಲಿ ನಿರ್ಮಾಣ ಪೂರ್ಣಗೊಂಡಿತು.

ಸಮಸ್ಯೆಗಳು

ಸಮಸ್ಯೆಗಳಿಲ್ಲದೆ ಸಾಧನೆಗಳು ಸಾಧ್ಯವೇ? ಈ ಪ್ರದೇಶದಲ್ಲಿ ವಾಸವಾಗಿದ್ದ ಜನ ಈ ಯೋಜನೆಯನ್ನು ವಿರೋಧಿಸಿದರು. ಈ ಪ್ರದೇಶದ ಪ್ರಾಕೃತಿಕ ಸಂಪನ್ಮೂಲಕ್ಕೆ ಧಕ್ಕೆಯಾಗುವುದೆನ್ನುವುದು ಅವರ ಅಭಿಪ್ರಾಯವಾಗಿತ್ತು. ಸುಮಾರು 185 ಕುಟುಂಬಗಳು ಆ ಜಾಗವನ್ನು ತೆರವು ಮಾಡುವುದು ಅಗತ್ಯವಾಗಿತ್ತು. ತಮ್ಮ ನೆಲವನ್ನು ಒಪ್ಪಿಸಲು ಹಲವಾರು ಬೇಡಿಕೆಗಳನ್ನು ಮುಂದಿಟ್ಟರು. ಅವರಿಗೆ 1200 ಎಕರೆ ಬೇರೆ ಜಾಗವನ್ನು ಕೊಟ್ಟು, ಅವರ ಬೇಡಿಕೆಗಳನ್ನು ತಕ್ಕಮಟ್ಟಿಗೆ ಪೂರೈಸಿದ ನಂತರವೇ ಯೋಜನೆ ಪೂರ್ಣಗೊಂಡಿದೆ. ಅಲ್ಲಿ ವಾಸವಾಗಿದ್ದ ಆದಿವಾಸಿಗಳಿಗೆ ಅಲ್ಲಿಯೇ ನೌಕರಿಗಳನ್ನೂ, ಸೌಕರ್ಯಗಳನ್ನೂ ಒದಗಿಸಿದ್ದಾರೆ. ಇಂದು ಈ ಪ್ರದೇಶ ಸಂಪೂರ್ಣ ಪ್ರವಾಸಿ ಕೇಂದ್ರವಾಗಿ ನರ್ಮದಾ ಟೆಂಟ್ ಸಿಟಿಗಳು ಹಾಗೂ ಹಲವಾರು ಹೋಟೇಲುಗಳು ಪ್ರವಾಸಿಗಳನ್ನು ಕೈಬೀಸಿ ಕರೆಯುತ್ತಿವೆ. ಈ ಪ್ರವಾಸಿ ಕ್ಷೇತ್ರಕ್ಕೆ ಪ್ರತಿದಿನ 15000 ಪ್ರವಾಸಿಗಳು ಸಂದರ್ಶಿಸುವರೆನ್ನುವ ನಿರೀಕ್ಷೆ ಇದೆ.



ನಮ್ಮ ಪ್ರವಾಸ

ನಾವು ನಾಲ್ಕು ಜನ ಗೆಳತಿಯರು ದಿನಾಂಕ ಆಗಸ್ಟ್ 3ರಂದು ಬೆಂಗಳೂರಿನಿಂದ ಇಂಡಿಗೋ ವಿಮಾನದಲ್ಲಿ. ಬೆಳಗ್ಗೆ 10.25ಕ್ಕೆ ಹೊರಟು 12.25ಕ್ಕೆ ವಡೋದರಾ ತಲುಪಿದೆವು. 4ರಂದು ಬೆಳಗ್ಗೆ 8.30ಗೆ ವಡೋದರಾದಿಂದ ಟ್ಯಾಕ್ಸಿಯಲ್ಲಿ ಪಂಚಮುಲಿ ಸರೋವರದ ತಟದಲ್ಲಿ ನಿರ್ಮಿಸಿರುವ ನರ್ಮದಾ ಟೆಂಟ್ ಸಿಟಿ–1 ತಲುಪಿದೆವು. ಬಸ್ ಹಾಗೂ ರೈಲುಗಳೂ ಇವೆ. ನಮ್ಮ ವಸತಿ ಟೆಂಟ್‌ಗಳನ್ನು ಮುಂಚಿತವಾಗಿಯೇ ಕಾಯ್ದಿರಿಸಿದ್ದೆವು. ಅಲ್ಲಿನ ಸಿಬ್ಬಂದಿ ವರ್ಗದವರು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಮ್ಮ ಟೆಂಟ್‌ಗಳು ಬಹಳ ಅಲಂಕಾರಿಕವಾಗಿ ಸಜ್ಜುಗೊಂಡಿದ್ದವು. ಗುಜರಾತಿನ ಕಲಾಕೌಶಲವನ್ನು ಬಿಂಬಿಸುವ ಮೇಜುಹಾಸುಗಳು, ಗೋಡೆಯ ಕಸೂತಿ ಹಾಸುಗಳು, ದಿಂಬಿನ ಗೌಸುಗಳು ಮನ ಸೆಳೆದವು. ಊಟದ ಹಜಾರದಲ್ಲಿಯೂ ಶುದ್ಧ ಶಾಕಾಹಾರಿಗಳಿಗೆಂದೇ ತಯಾರಿಸಿ, ಒಪ್ಪವಾಗಿರಿಸಿದ್ದ ಬಗೆಬಗೆಯ ಗುಜರಾತಿ ತಿನಿಸುಗಳು, ಸಿಹಿತಿಂಡಿಗಳು, ಪಾನೀಯಗಳು ನಮ್ಮ ಹಸಿವನ್ನು ತಣಿಸಿದವು.

ಅಂದು ಮಧ್ಯಹ್ನ 3 ಗಂಟೆಗೆ ಪ್ರವಾಸಿಗಳನ್ನು 'ಸ್ಟಾಚೂ ಆಪ್ ಯೂನಿಟಿ' ದರ್ಶನಕ್ಕೆ ಅವರದ್ದೇ ಬಸ್ಸಿನಲ್ಲಿ ಕರೆದೊಯ್ದರು. ಮೊದಲಿಗೆ ನರ್ಮದಾ ಅಣೆಕಟ್ಟು ಮತ್ತು 'ವ್ಯಾಲಿ ಆಫ್ ಫ್ಲವರ್ಸ್' ಗಳಿಗೆ ಭೇಟಿಕೊಟ್ಟೆವು. "ಭಾರತ್ ವನ' ಎಂದು ಹೆಸರಿಸಿರುವ 'ವ್ಯಾಲಿ ಆಪ್ ಫ್ಲವರ್ಸ್' ಸುಸಜ್ಜಿತ ತೋಟ ಸುಮಾರು 24 ಎಕರೆ ಪ್ರದೇಶದ ಕಣಿವೆಯಲ್ಲಿ ವಿಸ್ತಾರವಾಗಿ ಹಬ್ಬಿದೆ. 22 ಲಕ್ಷ ಹೂಗಿಡಗಳನ್ನು ಬೆಳಸಿದ್ದಾರೆ. ಮುನ್ನೂರು ಬಗೆಯ, ವಿವಿಧ ಬಣ್ಣದ ಹೂಗಳನ್ನು ನೋಡುವುದೇ ಆನಂದ. ಫೋಟೋಪ್ರಿಯರ, ಸೆಲ್ಫಿಸ್ನೇಹಿಗಳ ಸ್ವರ್ಗವೆಂದರೆ ಅತಿಶಯವಲ್ಲ.

ನಂತರ ನಮ್ಮ ಬಸ್ಸು ಐಕ್ಯತೆಯ ಪ್ರತಿಮೆಯ ಕಡೆ ಹೊರಟಿತು. ನಾವು ಪ್ರತಿಮೆಯ ಸಮೀಪ ತಲುಪಲು ಉತ್ಸುಕರಾಗಿದ್ದೆವು. ಎಲ್ಲರಿಗೂ ಟೆಂಟ್ ಸಿಟಿಯವರೇ ತಿಂಡಿಯ ಪ್ಯಾಕೆಟ್‌ಗಳನ್ನು ಕೊಟ್ಟಿದ್ದರು. ಆದರೆ ಅವನ್ನು ಒಳಗೆ ಕೊಂಡೊಯ್ಯಲು ಬಿಡುವುದಿಲ್ಲ! ಅವನ್ನು ಬಸ್ಸಿನಲ್ಲಿಯೇ ಬಿಟ್ಟು ಮುಖ್ಯ ಪ್ರವೇಶದ್ವಾರದ ಬಳಿ ರಕ್ಷಣಾ ತಪಾಸಣೆಯ ನಂತರ ಒಳಹೊಕ್ಕೆವು.

ಪ್ರವೇಶ ಬಾಗಿಲ ಬಳಿಯ 'ವಾಲ್ ಆಫ್ ಯೂನಿಟಿ' ಮೊದಲ ಆಕರ್ಷಣೆ. ಈ ಗೋಡೆಯನ್ನು ನಮ್ಮ ದೇಶದ 'ವಿವಿಧತೆಯಲ್ಲಿ ಏಕತೆ' ಉದ್ಘೋಷಕ್ಕೆ ತಕ್ಕಂತೆ ಒಟ್ಟು 1,69,058 ಹಳ್ಳಿಗಳ ಮಣ್ಣುಗಳನ್ನು ಒಟ್ಟುಗೂಡಿಸಿ ನಿರ್ಮಿಸಿದ್ದಾರೆ. 36 ಅಡಿ ಥ 12 ಅಡಿ ಅಳತೆಯ ಈ ಗೋಡೆಯ ಮೇಲೆ ದೇವನಾಗರಿ ಲಿಪಿಯಲ್ಲಿ 'ಏಕ ಭಾರತ್, ಶ್ರೇಷ್ಠ ಭಾರತ್' ಎನ್ನುವ ಬರೆಹವಿದೆ. ಇದರ ಮುಂದೆ ನಿಂತು ಚಿತ್ರ ತೆಗೆಸಿಕೊಳ್ಳಲು ಭಾರತದ ಬಗ್ಗೆ ಹೆಮ್ಮೆ ಮತ್ತು ಗೌರವವುಳ್ಳ ಸಜ್ಜನರು ಸರತಿಯಲ್ಲಿರುತ್ತಾರೆ. ಇದು 'ಐಕ್ಯತೆಯ ಗೋಡೆ' ಯ ಹೆಗ್ಗಳಿಕೆ.

ಮುಂದೆ ನಾಲ್ಕಾರು ಚಲಿಸುವ ಬೆಲ್ಟುಗಳ (ವಿಮಾನ ನಿಲ್ದಾಣಗಳಲ್ಲಿರುವಂತೆ) ಮೇಲೆ ನಿಂತಂತೆಯೇ ಚಲಿಸಿ ಪ್ರತಿಮೆಯ ಕೆಳಗಿನ ಭಾಗದಲ್ಲಿರುವ ದೊಡ್ಡ ಹಜಾರ ತಲುಪಿದೆವು. ಇದರ ವಿಸ್ತೀರ್ಣ 4,647 ಚದರ ಮೀಟರುಗಳು.



ಇಲ್ಲಿ ವಲ್ಲಭಭಾಯಿಯವರ ಜೀವನದ ಅನೇಕ ಘಟನೆಗಳ ಚಿತ್ರಗಳಿವೆ. ನಿಂತಿರುವ ಒಂದು ಪ್ರತಿಮೆ ಹಾಗೂ ಮುಖದ ಮಟ್ಟದಷ್ಟು ಮಾತ್ರವಿರುವ ಬೃಹತ್ ಪ್ರತಿಮೆಯನ್ನೂ ಕಾಣಬಹುದು. ಇಲ್ಲಿರುವ ಒಂದು ಚಿಕ್ಕ ಚಿತ್ರ ಪ್ರದರ್ಶನ ಹಜಾರದಲ್ಲಿ ಆ ಜಾಗದ ವನ್ಯಜೀವಿಗಳ ಹಾಗೂ ಆದಿವಾಸಗಳ ಚಿತ್ರ ನಿರಂತರವಾಗಿ ಪ್ರದರ್ಶಿತವಾಗುತ್ತಿರುತ್ತದೆ.

ದೊಡ್ಡ ಪ್ರತಿಮೆಯ ಹೃದಯ ಭಾಗದಲ್ಲಿರುವ ವೀಕ್ಷಣಾ ಗ್ಯಾಲರಿಗೆ ಕೊಂಡೊಯ್ಯಲು ಪ್ರತಿಮೆಯ ಎರಡೂ ಕಾಲುಗಳೊಳಗೆ ಒಂದು ಬಾರಿಗೆ 26 ಜನರನ್ನು ಕರೆದೊಯ್ಯಬಲ್ಲ ಎರಡೆರಡು ಲಿಫ್ಟ್‌ಗಳಿವೆ. ಕೇವಲ 30 ಸೆಕೆಂಡುಗಳಲ್ಲಿ ನಾವು ಪ್ರತಿಮೆಯ ಹೃದಯ ಭಾಗ ತಲುಪಿದೆವು. ಅಲ್ಲಿನ ವೀಕ್ಷಣಾ ಗ್ಯಾಲರಿ 200 ಜನ ನಿಲ್ಲುವಷ್ಟು ವಿಶಾಲವಾಗಿದೆ. ಬಹುದೂರದ ನರ್ಮದಾ ಅಣೆಕಟ್ಟು, ಸರೋವರ ಮತ್ತು ಇಕ್ಕೆಲಗಳಲ್ಲಿರುವ ಬೆಟ್ಟಗಳನ್ನು ಜಾಲರಿಯ ಮೂಲಕ ನೋಡಿ ಆನಂದಿಸಿದೆವು. ಮತ್ತೆ ಐದು ಎಸ್ಕಲೇಟರುಗಳಲ್ಲಿ ಏರುತ್ತಾ ಪ್ರತಿಮೆಯ ಪಾದದ ಬಳಿ ತಲುಪಿದೆವು. ಬೃಹದಾಕಾರದ ಮೂರ್ತಿಯನ್ನು ನೋಡಿ, ಫೋಟೋಗಳನ್ನು ತೆಗೆಸಿಕೊಂಡು ಖುಷಿಪಟ್ಟೆವು.

ಮುಂದಿನ ಕಾರ್ಯಕ್ರಮ ಲೇಸರ್ ಪ್ರದರ್ಶನ. ಅದಕ್ಕೆ ಮತ್ತೆ ಒಂದು ಗಂಟೆ ಕಾಯುತ್ತಾ ಕುಳಿತೆವು. ಬಳಿಯಲ್ಲಿದ್ದ ಕಾಫಿ ಅಂಗಡಿಗೆ ಭೇಟಿಕೊಟ್ಟದ್ದೂ ಆಯ್ತು. ಲೇಸರ್ ಪ್ರದರ್ಶನ ಬಹಳ ರೋಮಾಂಚಕಾರಿಯಾಗಿತ್ತು. ಸರ್ದಾರರ ಜೀವನ ಮತ್ತು ಸ್ವಾತಂತ್ರ್ಯ ಸಂಬಂಧಿತ ಹಲವಾರು ಘಟನೆಗಳನ್ನು ಹೇಳುತ್ತಾ ಅದಕ್ಕೆ ಪೂರಕ ಚಿತ್ರಗಳನ್ನು ಲೇಸರ್ ಮೂಲಕ ಪ್ರತಿಮೆಯ ಮೇಲೆ ಯಶಸ್ವಿಯಾಗಿ ಮೂಡಿಸುವ ಕಾರ್ಯಕ್ರಮವನ್ನು ನೋಡಿ ತೃಪ್ತರಾದೆವು. ಸಾವಿರಾರು ಸಂಖ್ಯೆಯಲ್ಲಿ ಒಟ್ಟುಗೂಡಿದ್ದ ಜನ ರಾಷ್ಟ್ರಗೀತೆಗೆ ಗೌರವ ಸಲ್ಲಿಸಿ, ಸರ್ದಾರರಿಗೆ ಜೈಕಾರ ಹಾಕಿದೆವು. ನಮ್ಮ ಬಿಡಾರಕ್ಕೆ ವಾಪಸ್ಸಾಗುವಾಗ ರಸ್ತೆಯ ಇಕ್ಕೆಲಗಳಲ್ಲಿದ್ದ ದೀಪಾಲಂಕಾರ ನಮಗೆ ಮೈಸೂರು ದಸರಾದ ನೆನಪು ನೀಡಿತು. ರುಚಿಕರವಾದ ಊಟದ ನಂತರ ಸುಖ ನಿದ್ರೆಗೆ ಜಾರಿದೆವು.



ಮರುದಿನ ಬೆಳಗ್ಗೆ ಕ್ಯಾಕ್ಟಸ್ ಉದ್ಯಾನವನ ಮತ್ತು ಚಿಟ್ಟೆಗಳ ಉದ್ಯಾನವನಕ್ಕೆ ಭೇಟಿ ನೀಡಿದೆವು. ನೀರಿನ ವಸತಿ ಇರುವ ಸ್ಥಳದಲ್ಲಿಯೂ ಮರಳುಗಾಡಿನ ಸಸ್ಯಗಳಾದ ಕ್ಯಾಕ್ಟಸ್ ಬೆಳೆಯಬಲ್ಲವು ಎನ್ನುವುದನ್ನು ಸಾಬೀತುಗೊಳಿಸಲೆಂದೇ ನಿರ್ಮಿಸಿರುವ ಕ್ಯಾಕ್ಟಸ್ ವನದಲ್ಲಿ 450 ಪ್ರಬೇಧಗಳ ಆರು ಲಕ್ಷ ಗಿಡಗಳಿವೆ! ಹಲವು ಗಿಡಗಳಲ್ಲಿ ಬಣ್ಣಬಣ್ಣದ ಹೂಗಳು ಅರಳಿ ನಳನಳಿಸುತ್ತಿವೆ. 25 ಎಕರೆ ಭೂಪ್ರದೇಶ ಮತ್ತು



836 ಚದರ ಮೀಟರ್ ವಿಸ್ತೀರ್ಣವುಳ್ಳ ಗುಮ್ಮಟದೊಳಗಿನ ಈ ಕುರುಚಲು ಸಸ್ಯಗಳ ಅಂದವನ್ನು ನೋಡಿಯೇ ಆನಂದಿಸಬೇಕು. ಏಕತಾ ನಗರ ಆದಿವಾಸಿಗಳ ಪುನರ್ವಸತಿ ಕಾರ್ಯಕ್ರಮದಡಿ ರೂಪುಗೊಂಡಿರುವ ಅದ್ಭುತ ಪ್ರದೇಶ. ಇಲ್ಲಿ ಬೊನ್ಸಾಯ್ ಗಿಡಗಳ ಬೇಸಾಯ, ಮಣ್ಣಿನ ವಿವಿಧ ಸಾಮಗ್ರಿಗಳ ತಯಾರಿಕೆ, ಅಪರೂಪದ ಗಿಡಗಳ ಕೃಷಿ, ಕಪ್ಪು ಕೋಳಿ ಮತ್ತು ಜೇನ್ನೊಣ ಸಾಕಣೆ, ನೀರಿನಲ್ಲಿ ಗಿಡಗಳ ಸಾಗುವಳಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅಲ್ಲಿನ ಮೂಲನಿವಾಸಿಗಳಿಗೇ ನೌಕರಿ ನೀಡಿ ಅವರ ಜೀವನೋಪಾಯಕ್ಕೂ ದಾರಿ ಮಾಡಿಕೊಡಲಾಗಿದೆ. ಈ ಉತ್ಪನ್ನಗಳನ್ನು ಮಾರಾಟ ಮಾಡಲು ಸೌಲಭ್ಯಗಳನ್ನೂ ಒದಗಿಸಿದ್ದಾರೆ. ಆದಿವಾಸಿ ಮಹಿಳೆಯರೇ ನಿರ್ವಹಿಸುವ ಉಪಹಾರ ಮಂದಿರವೂ ಇದೆ. ಇಲ್ಲಿ ಅವರ ವಿಶಿಷ್ಟ ತಿನಿಸುಗಳು, ಪಾನೀಯಗಳು, ಊಟವೂ ಲಭ್ಯವಿವೆ. ಸಾಯಂಕಾಲ ಕಾಶಿಯ ಗಂಗಾರತಿಯಂತೆ ಪ್ರತಿನಿತ್ಯ ನರ್ಮದಾ ಆರತಿಯೂ ಜರುಗುವುದೆಂದು ನಮ್ಮ ಮಾರ್ಗದರ್ಶಿ ಹೇಳಿದರು. ಮುಂದೆ ಔಷಧೀಯ ಸಸ್ಯಗಳಿರುವ ಆರೋಗ್ಯವನವನ್ನೂ ನೋಡಿ, ಟೆಂಟ್ ಸಿಟಿಗೆ ವಾಪಸ್ಸಾದೆವು.

ಮಧ್ಯಾಹ್ನ ಊಟ–ವಿಶ್ರಾಂತಿಗಳ ನಂತರ ಸುಮಾರು ನಾಲ್ಕು ಗಂಟೆಗೆ 'ಹೈ ಟೀ' ಏರ್ಪಡಿಸಿದ್ದರು. 6 ಗಂಟೆಗೆ 'ಯುನಿಟಿ ಗ್ಲೋ ಗಾರ್ಡನ್' ಗೆ ಕರೆದೊಯ್ದರು. ದೀಪಾಲಂಕೃತವಾದ ಗಿಡಮರಗಳು, ಕಾರಂಜಿಗಳು ನಮ್ಮ ಮನದಣಿಸಿದವು. ಸಣ್ಣಗೆ ಮಳೆಯೂ ಬರುತ್ತಿದ್ದು ವಾತಾವರಣ ಹಿತಕರವಾಗಿ ತಂಪಾಗಿತ್ತು. ಅಲ್ಲಿಂದಲೂ ಬಹಳ ದೂರದಿಂದ ಲೇಸರ್ ಪ್ರದರ್ಶನವನ್ನು ಸ್ವಲ್ಪಮಟ್ಟಿಗೆ ಕಾಣಬಹುದು.

ಮೂರನೆಯ ದಿನದಂದು ಶೂಲಪಾನೇಶ್ವರ್ ಜಂಗಲ್ ಸಫಾರಿ ವೀಕ್ಷಿಸುವ ಕಾರ್ಯಕ್ರಮವಿತ್ತು. ಇಲ್ಲಿ ಪಕ್ಷಿ ವೀಕ್ಷಣೆಯೂ ಚೆಂದವಂತೆ. ಅನಂತರ ಮಕ್ಕಳಿಗೆ ಪೌಷ್ಟಿಕ ಮತ್ತು ತಾಜಾ ಆಹಾರದ ಬಗ್ಗೆ ತಿಳಿಸಿಕೊಡಲು ಮತ್ತು ಮಕ್ಕಳ ಮನತಣಿಸಲು ಮಕ್ಕಳಿಗೆಂದೇ ನಿರ್ಮಿಸಿರುವ ಪೌಷ್ಟಿಕ ವನಕ್ಕೆ ಭೇಟಿ ಇರುತ್ತದೆ. ಇಲ್ಲಿಯೂ ಅನೇಕ ಆಕರ್ಷಕ ಪ್ರದರ್ಶನಗಳಿರುತ್ತವೆ. ಜರ್ವಾನಿ ಪ್ರದೇಶದಲ್ಲಿ ರಾತ್ರಿ ಚಾರಣ, ನರ್ಮದಾ ನದಿಯಲ್ಲಿ ಸಾಹಸ ದೋಣಿ ವಿಹಾರ ಇತ್ಯಾದಿ ಕಾರ್ಯಕ್ರಮಗಳನ್ನು ಸೂಕ್ತ ಮಾರ್ಗದರ್ಶಿ ಗಳೊಂದಿಗೆ ಗುಜರಾತಿನ ಅರಣ್ಯ ಇಲಾಖೆಯವರು ನಡೆಸುತ್ತಿದ್ದಾರೆ.

ನಾವು ಎರಡು ದಿನಗಳು ಮಾತ್ರವೇ ತಂಗಿದ್ದರಿಂದ ಇವುಗಳಿಗೆ ಭೇಟಿ ನೀಡಲಾಗಲಿಲ್ಲ. ಮಾರನೆಯ ದಿನ ವಡೋದರಾಗೆ ಬಂದು. ಅಂದು ಸಂಜೆ ಬೆಂಗಳೂರಿಗೆ ಮರಳಿದೆವು. ಮಹಾನ್ ವ್ಯಕ್ತಿಯ ನೆನಪುಗಳು, ಸುಂದರ ನೋಟ, ಗೆಳತಿಯರ ಒಡನಾಟ ಸ್ವಾತಂತ್ರ್ಯದ ಅಮೃತೋತ್ಸವಕ್ಕೆ ನಾಂದಿಯಾಯಿತು.

*****

ಕಥಾ ಪ್ರಪಂಚ

ಝೆನ್ ಕತೆಗಳು

– ವಿಠ್ಠಲ್ ಇಜೇರಿ

ಝೆನ್ ಕತೆಗಳು ಪುಟ್ಟ ಕತೆಗಳು. ಆದರೆ ಅಡಗಿಸಿಕೊಂಡ ಅರ್ಥ, ಹೊಂದಿರುವ ಭಾವ, ತಿಳಿಸುವ ಪಾಠ ದೊಡ್ಡದು. ಝೆನ್ ಎಂದರೆ ಧ್ಯಾನವೆಂದೂ ಹೇಳುತ್ತಾರೆ. ಮೌನವೆಮೂ ಅರ್ಥೈಸುತ್ತಾರೆ. ಈ ಕತೆಗಳ ಅಂತ್ಯದಲ್ಲಿ ಒಂದು ಸಂದೇಶ, ಅರ್ಥ ಇರುವುದು. ಈ ಕತೆಗಳಲ್ಲಿ ಒಂದು ನಿಗೂಢತೆ, ಆಕರ್ಷಣೆ ಇರುವುದು. ಪುಟ್ಟ ಕಥೆಗಳಾದರೂ ಜ್ಞಾನವನ್ನು, ಬೆಳಕನ್ನು, ಕೆಲವೆಡೆ ಮಿಂಚನ್ನು ಹೊಂದಿರುತ್ತವೆ. ಬೌದ್ಧ ಸಂಪ್ರದಾಯದ ಪ್ರಕಾರ ಜ್ಞಾನ ಬರುವುದು ಬೌದ್ಧಿಕ ಚಿಂತನೆಯಿಂದ ಅಲ್ಲ, ಅದು ಎಲ್ಲರ ಮನದಲ್ಲಿ ಹುದುಗಿರುತ್ತದೆ. ಆದರೆ ಅದು ಭ್ರಮೆ ಮತ್ತು ಅಜ್ಞಾನಗಳಿಂದ ಆವೃತ್ತವಾಗಿರುತ್ತದೆ. ಯಾವುದೇ ಮನಸ್ಥಿತಿಯಲ್ಲಿ ಝೆನ್ ಕತೆಗಳು ಮನಸ್ಸಿಗೆ ವಿಸ್ಮಯ ಹಾಗೂ ಸಮಸ್ಯೆಯ ಸುಲಭದ ಪರಿಹಾರ ಸೂಚಿಸಬಲ್ಲವು. ಬದುಕಿನಲ್ಲಿ ಒತ್ತಡ ಇದ್ದೇ ಇರುತ್ತದೆ ಅದನ್ನು ನಿಭಾಯಿಸಿಕೊಂಡು ಹೋಗುವ ವಿಚಾರ ಝೆನ್ ಕತೆಗಳಲ್ಲಿ ಇರುತ್ತದೆ. ಜೀವನದಲ್ಲಿ ಸರಳತೆ ಎಂಬುದು ಸರಳವಲ್ಲ. ಓಕ್ಯಾಮನ್ ರೇಜರ್ ಸಿದ್ಧಾಂತದ ಪ್ರಕಾರ ಎಲ್ಲವೂ ಸಮಾನವಾದರೆ ಪರಿಹಾರ ಅತೀ ಸುಲಭ ಐನಿಸ್ಟಿನ್ ಪ್ರಕಾರ ಬುದ್ಧಿವಂತಿಕೆಯ ಐದು ಮೆಟ್ಟಿಲುಗಳು. ಚೂಟಿ (Smart), ಬುದ್ಧಿವಂತ (Intelligent), ಅತೀ ಬುದ್ಧಿವಂತ (Brillient), ಜಾಣ (Genious), ಸರಳತೆ (Simplicity) ಇತ್ಯಾದಿ. ಝೆನ್ ಕಥೆಗಳನ್ನು ಹಲವು ಧೃಷ್ಟಿಯಿಂದ ನೋಡಬಹುದು. ಪ್ರತಿ ಕಥೆಯೂ ಒಂದು ಭಾವವನ್ನು, ಇಲ್ಲವೇ ಪರಿಹಾರವನ್ನು, ಇಲ್ಲವೇ ಒಂದು ಜೀವನೋಪಯೋಗಿ ಸಂದೇಶವನ್ನು ಹೊಂದಿರುತ್ತವೆ. ಝೆನ್ ಕತೆಗಳು ಸಾಹಿತ್ಯಕ್ಕೂ ಮತ್ತು ಮಾನಸಿಕ ಆರೋಗ್ಯಕ್ಕೂ ಇರುವ ನಂಟನ್ನು ಗುರುತಿಸುತ್ತವೆ. ಚಿಕ್ಕ ಕತೆಗಳು ಎಂಬ ಕಾರಣಕ್ಕೆ ಓದುವುದು ಸುಲಭ ಮತ್ತು ಸರಳ.

ಎಡ್ವಿನ್ ವಿಟ್ ಜೇನ್ ಸ್ಟೀನ್ ಎಂಬ ತತ್ವಶಾಸ್ತ್ರಜ್ಞ ಹೇಳುವುದೇನೆಂದರೆ "ಕೇವಲ ಯೋಚಿಸಬೇಡ ನೋಡು, ಕಣ್ಣಿನಿಂದ ಮನಸಿನಾಳಕ್ಕೆ ತಲುಪಬಲ್ಲ ಶಕ್ತಿ ಈ ಕಥೆಗಳಿಗಿದೆ. ಜೀವನ, ವಾಸ್ತವತೆ, ಸತ್ಯಗಳು ಬಹು ಸರಳ ಎಂದು ಬೋಧಿಸುವ ಝೆನ್ ಕತೆಗಳನ್ನು ಸುಮ್ಮನೆ ರಂಜನೆಗೆಂದು, ಕುತೂಹಲಕ್ಕೆಮು ಓದಿದರೂ ಸರಿಯೇ, ಓದಬೇಕು, ನಮಗರಿವಿಲ್ಲದೆ ಒಂದು ಜೀವನ ಸಂದೇಶ ನಮಗೆ ತಲುಪುತ್ತದೆ."

ಈಗ ಒಂದೆರಡು ಚಿಕ್ಕ ಝೆನ್ ಕತೆಗಳನ್ನು ನೋಡೋಣ.

ಕೈ ಇಲ್ಲದೆಯೂ ಗೆದ್ದ

ನಮ್ಮ ಅಸಮರ್ಥತೆಯನ್ನು ಹೇಗೆ ಸಾಮರ್ಥ್ಯವಾಗಿ ಬಳಸಿಕೊಳ್ಳುವುದು ಎಂಬುದು ಈ ಕತೆಯ ಸಂದೇಶ. ಒಬ್ಬ ಬಾಲಕ, ಅವನಿಗೆ ಇದ್ದುದು ಒಂದೇ ಕೈ, ಅದೂ ಎಡಗೈ. ಆತನಿಗೆ ಕರಾಟೆ ಕಲಿಯುವ ಹುಚ್ಚು. ಗುರು ಒಬ್ಬನನ್ನು ಹುಡುಕಿದ. ಗುರು ಅವನಿಗೆ ಕರಾಟೆ ಕಲಿಸಿದ. ಒಂದೇ ರೀತಿಯ ಪಟ್ಟು ತುಂಬಾ ಅಭ್ಯಾಸ ಮಾಡಿಸಿ ಬಾಲಕನನ್ನು ಸ್ಪರ್ಧೆಗೆ ಕರೆದೊಯ್ದ. ಬಾಲಕ ಮೊದಲ ಹಂತದಲ್ಲಿ ಗೆದ್ದ. ಎರಡನೇ ಹಂತದಲ್ಲೂ ಗೆದ್ದ. ಮೂರನೇ ಹಂತದಲ್ಲಿ ಪ್ರೇಕ್ಷಕರಿಗೆ ಈ ಬಾಲಕ ಸೋಲಬಾರದು ಎಂಬ ಸಾಂತ್ವನ. ಎದುರಾಳಿಯ ಪಟ್ಟಿನಿಂದ ಬಾಲಕನಿಗೆ ಒಳ್ಳೇ ಏಟು ಬಿತ್ತು. ಗುರು ಶಾಂತವಾಗಿದ್ದರು. ಪಂದ್ಯದ ನಿರ್ಣಾಯಕರು "ಪಂದ್ಯವನ್ನು ನಿಲ್ಲಿಸಬೇಕೆ?" ಎಂದು ಗುರುಗಳ ಬಳಿ ಕೇಳಿದರು. ಗುರುಗಳು "ಅಂತಹ ಅವಶ್ಯಕತೆ ಇಲ್ಲ" ಎಂದು ಹೇಳಿದರು. ಕೊನೆಗೆ ಬಾಲಕ ಗೆದ್ದೇ ಬಿಟ್ಟ.

ಮರಳಿ ಮನೆಗೆ ಹೊರಟಾಗ ಬಾಲಕ ಕೇಳಿದ "ಗುರುಗಳೇ ನಾನು ಗೆದ್ದುದು ಹೇಗೆ?"

ಗುರುಗಳು ಹೇಳಿದರು "ನಾನು ನಿನಗೆ ಕಲಿಸಿದ್ದುದು ಒಂದೇ ಪಟ್ಟು, ಅದು ಕಷ್ಟದ ಪಟ್ಟು. ಆ ಪಟ್ಟಿನಲ್ಲಿ ಎದುರಾಳಿ ನಿನ್ನನ್ನು ಸೋಲಿಸಲು ಇರುವುದು ಒಂದೇ ಮಾರ್ಗ. ಎದುರಾಳಿ ನಿನ್ನ ಬಲಗೈ ಹಿಡಿಯಬೇಕು, ಆದರೆ ಆ ಕೈ ನಿನಗೆ ಇಲ್ಲವೇ ಇಲ್ಲ. ಅದೇ ನಿನ್ನ ಸಾಮರ್ಥ್ಯ".

ಬುದ್ಧಿವಂತ ಭೂತ

ಒಬ್ಬ ವ್ಯಕ್ತಿಯ ಹೆಂಡತಿಗೆ ತೀವ್ರವಾಗಿ ಕಾಯಿಲೆಯಾಗಿ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದಳು. ಆಗ ಆಕೆ ಗಂಡನಿಗೆ "ನಾನು ನಿಮ್ಮನ್ನು ಅಗಾಧವಾಗಿ ಪ್ರೀತಿಸುತ್ತೇನೆ. ನಾನು ಸತ್ತ ನಂತರ ನೀವು ಬೇರೆಯವರನ್ನು ಮದುವೆ ಯಾಗುವುದು ನನಗೆ ಇಷ್ಟವಿಲ್ಲ. ಹಾಗೇನಾದರೂ ನಾನು ಸತ್ತ ಮೇಲೆ ಮದುವೆಯಾದರೆ ನಾನು ಭೂತವಾಗಿ ಬಂದು ಕಾಡುತ್ತೇನೆ." ಇಷ್ಟು ಹೇಳಿ ಸತ್ತಳು. ಆ ಮನುಷ್ಯ ಹೆಂಡತಿ ಸಾಯುವಾಗ ಹೇಳಿದ ಮಾತುಗಳನ್ನು ಕೇಳಿಯೇ ಹೆದರಿ ಹೋಗಿದ್ದ ಮತ್ತು ಯಾವಾಗಲೂ ಹೆಂಗಸರಿಂದ ದೂರವೇ ಇರುತ್ತಿದ್ದ. ಒಂದು ಸಲ ಅವನು ಒಬ್ಬ ಚೆಲುವೆಯನ್ನು ಕಂಡು ಆಕೆಯ ಸೌಂದರ್ಯಕ್ಕೆ ಮಾರುಹೋಗಿ ಆಕೆಯತ್ತ ಆಕರ್ಷಿತನಾದ. ಅಂದು ರಾತ್ರಿ ಕನಸಿನಲ್ಲಿ ಅವನ ಹೆಂಡತಿ ಕಾಣಿಸಿಕೊಂಡು, "ನೀವು ಇಂದು ಆ ಹೆಂಗಸಿನತ್ತ ಆಕರ್ಷಿತರಾಗಿರುವಿರಿ, ಆದರೆ ಎಚ್ಚರ. ನಾನು ಈ ಮದುವೆ ನಡೆಯಗೊಡುವುದಿಲ್ಲ" ಎಂದು ಹೇಳಿ ಹೋದಳು. ಮರುದಿನ ಆ ವ್ಯಕ್ತಿ ಹತ್ತಿರದಲ್ಲಿಯೇ ಇದ್ದ ಝೆನ್ ಗುರುಗಳ ಬಳಿ ತನ್ನ ಸಮಸ್ಯೆ ಹೇಳಿದ. ಝೆನ್ ಗುರುಗಳು "ಹೌದು, ಅದು ಬಲು ಬುದ್ಧಿವಂತ ದೆವ್ವ, ಇಂದು ಪುನಃ ಎಚ್ಚರಿಕೆ ಕೊಡಲು ಬರಬಹುದು, ಆಗ ನೀನು ಅದಕ್ಕೆ ಒಂದು ಪ್ರಶ್ನೆ ಕೇಳು" ಎಂದು ಒಂದು ಉಪಾಯ ಸೂಚಿಸಿದರು.

ಆ ರಾತ್ರಿ ಆ ಭೂತ ಬಂತು, ಅವನು ಗುರುಗಳು ಹೇಳಿ ಕೊಟ್ಟ ಹಾಗೆ "ನೀನು ಭಲೇ ಚತುರ ಭೂತ, ನನ್ನ ಒಂದು ಪ್ರಶ್ನೆಗೆ ಉತ್ತರ ಹೇಳು. ನಾನು ಜೀವನ ಪೂರ್ತಿ ಮದುವೆಯಾಗುವುದಿಲ್ಲ" ಅಂದ.

ಅದು " ಕೇಳು ಅದೇನು ನಿನ್ನ ಪ್ರಶ್ನೆ" ಅಂದಾಗ, ಅವನು ಅಲ್ಲಿಯೇ ಇದ್ದ ಚೀಲದಿಂದ ಕೈಗಳ ತುಂಬಾ ಹುರುಳಿ ಹಿಡಿದು, ನಿಖರವಾಗಿ ನನ್ನ ಕೈತುಂಬ ಎಷ್ಟು ಹುರುಳಿಕಾಳುಗಳಿವೆ ಎಣಿಸಿ ಹೇಳು" ಅಂದ. ಭೂತವೇ ಹೆದರಿ ಹೋಯಿತು ಮರಳಿ ಬರಲಿಲ್ಲ.

ಭೂತ ಬೆಳಕಿಗೆ ಬಾರದು, ಆ ಹುರುಳಿಕಾಳು ಎಣಿಸಲು ಒಂದು ದಿನವೇ ಬೇಕಿತ್ತು.

*****

ಗೋಡೆ

– ಮನೋಹಂಸ

ವಾಸಿಸುವ ಮನೆಗೂ ನಾಲ್ಕು ಗೋಡೆ
ಕಾರಾಗೃಹಕೂ ನಾಲ್ಕು ಗೋಡೆ
ವಾಸಿಸುವ ಮನೆಗೆ ಒಳಭದ್ರತೆಗೆ ಗೋಡೆ
ಕಾರಾಗೃಹಕೆ ಹೊರಭದ್ರತೆಗೆ ಗೋಡೆ

ಕುಟುಂಬಗಳನು ಒಂದುಗೂಡಿಸುವ ಗೋಡೆ
ಗುಟ್ಟುಗಳನು ಕಾಪಾಡುವುದಕೆ ಗೋಡೆ
ಸಂಚುಗಳನು ಹುಟ್ಟುಹಾಕಲು ಬೇಕು ಗೋಡೆ
ಆದರಿದು ಕಾರಾಗೃಹದಿ ಖೈದಿಗಳಗಡೆತಡೆ

ಮನೆಮನೆಗಳ ಪ್ರತ್ಯೇಕಿಸುವ ಈ ಗೋಡೆ
ನಿಂತಿರುವುದು ಕಾಪಾಡಲು ಕಳ್ಳರ ದರೋಡೆ
ಚಿತ್ರ ಭಾವಚಿತ್ರಗಳಗೆ ಆಧಾರ ಈ ಗೋಡೆ
ಮರಣಿಸಿದವರ ನೆನಪು ಮರುಕಳಸಲು ಈ ಗೋಡೆ

ಸ್ವಾತಂತ್ರಕೆ ಅಡ್ಡಿಯಾಗಬಹುದೇನೋ ಈ ಗೋಡೆ
ಮನೆಯನೇ ಕಾರಾಗೃಹ ಮಾಡಬಹುದೀ ಗೋಡೆ
ಕಾರಾಗೃಹದಿ ಮನಸ್ಸು ಮಾರ್ಪಡಿಸಬಹದೀ ಗೋಡೆ
ಕಾರಾಗೃಹದೇ ಕಾವ್ಯವರಿಳಸಬಹುದು ಈ ಗೋಡೆ

ಇದು ಮನೆಗಳ ಗೋಡೆಯಾದರೆ ಇನ್ನು ಮನಸ್ಸಿನ ಗೋಡೆ
ಮನುಜರು ಒಬ್ಬರಿಗೊಬ್ಬರು ಹಾಕಿಕೊಂಡಿರುವ ಕಾಣದ ಗೋಡೆ
ಮನೆಯಲ್ಲೊಟ್ಟಿಗಿದ್ದರೂ ಸಂಪರ್ಕ ಕಡಿಸುವ ಮನದ ಗೋಡೆ
ವಾಸ್ತವನ್ನರಿಯದೆ ತಂತಾನೇ ಕಟ್ಟಿಕೊಳ್ಳುವ ಬೃಹತ್ ಗೋಡೆ

ಮನೆಯ ಗೋಡೆಗಳನ್ನುರುಳಸಬಹುದು ಆದರೆ ಮನದ ಗೋಡೆ?

*****

ಸ್ವಾತಂತ್ರ್ಯೋತ್ಸವದ ಸುವರ್ಣಮಹೋತ್ಸವ
ಕಲಕತ್ತೆಯ ರವೀಂದ್ರ ಸದನದಲ್ಲಿ ಮೊಳಗಿದ ಕನ್ನಡ ದೇಶಭಕ್ತಿ ಗೀತೆಗಳ ದುಂದುಭಿ

– ಶ್ರೀಧರ ಬಾಣಾವರ

ತೊಂಬತ್ತೇಳರ ಜುಲೈನಲ್ಲಿ ಮೈಸೂರು ಬ್ಯಾಂಕಿನಲ್ಲಿ ವರ್ಗಾವಣೆಯ ಮೇಲೆ ಕಲ್ಕತ್ತಾ ತಲುಪಿದ್ದೆ. ದೂರದ ಊರಲ್ಲಿ ಮನೆಗೆ ಹತ್ತಿರವೇ ಇದ್ದ ಕರ್ನಾಟಕ ಸಂಘದ ಒಡನಾಟ ತಕ್ಷಣವೇ ಶುರುಮಾಡಿಕೊಂಡಿದ್ದೆ. ಪ್ರತಿ ಬುಧವಾರ ಸಂಜೆ, ತಿಂಗಳ ಒಂದೆರಡು ಭಾನುವಾರ ಅನೇಕ ಕನ್ನಡ ಬಾಂಧವರ ಭೇಟಿಯಾಗುತ್ತಿದ್ದುದು ಮುದಕೊಡುತ್ತಿದ್ದ ವಿಷಯ. ಮೊದಲಬಾರಿಗೆ ಹೊರನಾಡ ಕನ್ನಡಿಗನಾಗಿದ್ದೆ. ಆ ವರ್ಷ ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ. ಒಂದು ಸಂಜೆ ಸಂಘದ ಕಾರ್ಯದರ್ಶಿ ಪಶ್ಚಿಮ ಬಂಗಾಳ ಸರ್ಕಾರದ ಸಂಸ್ಕೃತಿ ಇಲಾಖೆಯಿಂದ ಬಂದಿದ್ದ ಪತ್ರದ ಪ್ರಸ್ತಾಪ ಮಾಡಿದರು. ಅದರಂತೆ ಆಗಸ್ಟ್ ತಿಂಗಳ ಕೊನೆಯ ಎರಡು ಭಾನುವಾರಗಳ ಸಂಜೆ ಕಲ್ಕತ್ತೆಯಲ್ಲಿದ್ದ ಬೇರೆ ರಾಜ್ಯಗಳ ಸಾಂಸ್ಕೃತಿಕ ಸಂಘಗಳು, ಸ್ವಾತಂತ್ರ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಗೀತೆಗಳ ಗಾಯನ, ನೃತ್ಯ, ಸಣ್ಣ ಸ್ಕಿಟ್‌ಗಳು ಮುಂತಾದವುಗಳನ್ನು ಸುಮಾರು 15-20 ನಿಮಿಷಗಳ ಕಾಲ ಪ್ರಸ್ತುತಿಪಡಿಸುವಂತೆ ಕೋರಿಕೊಳ್ಳಲಾಗಿತ್ತು. ಸಂಘದ ಸದಸ್ಯರಲ್ಲಿ ಗಾಯಕರು, ಸಂಗೀತಗಾರರು, ನಟರು, ನೃತ್ಯ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿದ್ದರೂ, ಸಂಘಟನೆಯ ಕೊರತೆ ಹಾಗೂ ಸಾಹಿತ್ಯಿಕ ಸಂಪನ್ಮೂಲಗಳ ಅಂದರೆ ಗೀತೆಗಳ ಸ್ಕ್ರಿಪ್ಟ್ ಮುಂತಾದವುಗಳ ಕೊರತೆಯಿಂದಾಗಿ ಸದಸ್ಯರಲ್ಲಿ ಅಷ್ಟಾಗಿ ಉತ್ಸಾಹ ಕಂಡುಬರಲಿಲ್ಲ. ನಾನು ಹೊಸದಾಗಿ ಕರ್ನಾಟಕದಿಂದ ಬಂದಿದ್ದರಿಂದ ನನ್ನ ಕಡೆಯಿಂದ ಏನಾದರೂ ಸೂಚನೆ ಸಿಗಬಹುದೆಂದು ಕೆಲವು ಗೆಳೆಯರು ನಿರೀಕ್ಷಿಸಿದರು. ರಾಜ್ಯದ ರಾಜಧಾನಿಯ ಪ್ರತಿಷ್ಠಿತ ಕಲಾಮಂದಿರ ರವೀಂದ್ರ ಸದನದ ವೇದಿಕೆಯ ಮೇಲೆ ಕನ್ನಡದ ಕಂಪನ್ನು ನಮ್ಮ ಸಂಘದ ಮೂಲಕ ಪಸರಿಸಲು ಬಂದಿರುವ ಅವಕಾಶವನ್ನು ಕೇವಲ ಸಾಹಿತ್ಯಿಕ ಸಂಪನ್ಮೂಲದ ಕೊರತೆಯಿಂದ ಕಳೆದುಕೊಳ್ಳುವಂತಾಗುತ್ತಿದೆಯಲ್ಲಾ ಎಂದು ಯೋಚಿಸುತ್ತಿದ್ದೆ. ಯುಟ್ಯೂಬ್ ಇನ್ನೂ ಕೇಳಿಲ್ಲದ ವಿಷಯವಾಗಿತ್ತು.

ತಕ್ಷಣ ನನ್ನ ನೆನಪಿಗೆ ಬಂದದ್ದು, ನಮ್ಮ ಮೈಸೂರು ಬ್ಯಾಂಕು 1988ರಲ್ಲಿ ತನ್ನ ಅಮೃತ ಮಹೋತ್ಸವದ ಸಂದರ್ಭದಲ್ಲಿ ಹೊರತಂದಿದ್ದ "ವಿಜಯೋತ್ಸವ" ಎಂಬ ಧ್ವನಿಸುರುಳಿ. ಸಿ.ಅಶ್ವತ್ಥ್ ಅವರು ಸಂಗೀತ ಸಂಯೋಜಿಸಿ ಅವರು ಹಾಗೂ ಪ್ರಖ್ಯಾತ ಗಾಯಕಿಯರಾದ ರತ್ನಮಾಲ ಪ್ರಕಾಶ್, ಬಿ.ಆರ್.ಛಾಯಾ, ಮಾಲತಿ ಶರ್ಮ ಪ್ರಖ್ಯಾತ ಗಾಯಕರಾದ ಶಿವಮೊಗ್ಗ ಸುಬ್ಬಣ್ಣ, ಪುತ್ತೂರು ನರಸಿಂಹ ನಾಯಕ್, ಜೊತೆಗೆ ಸಹಗಾಯಕರಾಗಿ ನಮ್ಮ ಬ್ಯಾಂಕಿನ ಉದ್ಯೋಗಿಗಳೇ ಆದ ಬಾಲಿ, ರೇಖಾ ಭಟ್, ಗೀತಾ ವಸಂತಕುಮಾರ್, ಪ್ರಸಾದ್ ಹಾಗೂ ಗಾಯತ್ರಿ ಹಾಡಿದ್ದ ಧ್ವನಿಸುರುಳಿ ಅದು. ಪ್ರಖ್ಯಾತ ಕವಿಗಳಾದ ಎಂ.ವಿ.ಸೀತಾರಾಮಯ್ಯ, ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಎಸ್.ವಿ.ಪರಮೇಶ್ವರ ಭಟ್ಟ, ಗೋಪಾಲಕೃಷ್ಣ ಅಡಿಗ, ಸಿದ್ದಯ್ಯ ಪುರಾಣಿಕ, ಎಚ್.ಎಸ್.ವೆಂಕಟೇಶಮೂರ್ತಿ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಬರೆದ ಭಾರತ ಸ್ವಾತಂತ್ರ್ಯದ ಕುರಿತಾದ ಗೀತೆಗಳನ್ನು ಆಯ್ದು ಸಂಗೀತ ಸಂಯೋಜನೆ ಮಾಡಲಾಗಿತ್ತು. ಈ ಧ್ವನಿಸುರುಳಿಯನ್ನು ಬ್ಯಾಂಕಿನ ಗ್ರಾಹಕರಿಗೆ ಹಂಚಲಾಗಿತ್ತು. ನಮ್ಮ ಬ್ಯಾಂಕ್ ಮುಂದೆಯೂ ಗ್ರಾಹಕರಿಗೆ ಉಡುಗೊರೆಯಾಗಿ ಕೊಡಲು ಅನೇಕ ಸಂಗೀತದ ಧ್ವನಿಸುರುಳಿಗಳನ್ನು ಬಳಸುತ್ತಿತ್ತು. 'ವಿಜಯೋತ್ಸವ' ಧ್ವನಿಸುರುಳಿಯ ಬಗ್ಗೆ ನನಗೆ ನೆನಪು ಬರುತ್ತಲೇ ಸದಸ್ಯರೊಡನೆ ಚರ್ಚಿಸಿದೆ. ಅದು ಅವರೆಲ್ಲರ ಆಸಕ್ತಿಯನ್ನು ಕೆರಳಿಸಿತು. ಆದರೆ ಈ ಧ್ವನಿಸುರುಳಿ ಅಲ್ಲಿ ನನ್ನ ಬಳಿ ಇರಲಿಲ್ಲ. ಮರುದಿನವೇ ಮೈಸೂರು ಬ್ಯಾಂಕ್ ಕನ್ನಡ ಬಳಗದ ಕಾರ್ಯದರ್ಶಿ ಗುರುಮೂರ್ತಿಗೆ ಕರೆಮಾಡಿದೆ. ಎರಡೇ ದಿನಗಳಲ್ಲಿ ಅಂಚೆಯ ಮೂಲಕ ಅದು ನನ್ನನ್ನು ತಲುಪಿತು.



ಸಂಘದ ಸದಸ್ಯೆಯೊಬ್ಬರು ಖ್ಯಾತ ಸಂಗೀತ ವಿದ್ವಾಂಸರಾಗಿದ್ದರು. ಅವರೊಡನೆ ಇನ್ನೊಬ್ಬ ಯುವಕ ವೇಣುವಾದನ ಪಟು. ಇಬ್ಬರೂ ಸೇರಿ ಹಾಡುಗಳನ್ನು ಕೇಳಿ ಉತ್ಸಾಹಿತರಾಗಿ ನಾಲ್ಕು ಗೀತೆಗಳನ್ನು ಆಯ್ದುಕೊಂಡರು. ಗಾಯನಾಸಕ್ತರ ಗುಂಪೊಂದು ಕೂಡಲೇ ತಯಾರಾಯಿತು. ನಮ್ಮಲ್ಲೇ ಇದ್ದ ತಬಲಾ ವಾದಕರೊಬ್ಬರು ಜೊತೆಗೂಡಿದರು. ಇನ್ನು ಹಾಡುಗಳ ಸಾಹಿತ್ಯ ಒದಗಿಸುವ ಕೆಲಸವೂ ನನ್ನ ಪಾಲಿಗೆ ಬಂತು. ಹಾಡುಗಳನ್ನ ಕೇಳಿ ಸಾಹಿತ್ಯ ಬರೆದುಕೊಳ್ಳ ಬೇಕಾಗಿತ್ತು. ನನ್ನಲ್ಲಿ ಒಂದು ವಾಕ್‌ಮನ್ ಇತ್ತು. ಅದರಲ್ಲಿ ಟೇಪು ಮುಮ್ಮುಖವಾಗಿ ಮಾತ್ರಾ ಚಲಿಸುವ ವ್ಯವಸ್ಥೆ ಇತ್ತು. ರೀವೈಂಡ್ ಸಾಧ್ಯವಿರಲಿಲ್ಲ. ಸಾಲುಗಳನ್ನು ಮತ್ತೆ ಕೇಳಬೇಕಾದಾಗ ಟೇಪಿನ ಇನ್ನೊಂದು ಮುಖವನ್ನು ಹಾಕಿ ಹಿಂದಕ್ಕೆ ತಿರುಗಿಸಿ ಮತ್ತೆ ಹಾಡಿನ ಬದಿಯನ್ನು ಹಾಕಿ ಹಾಡಿನ ಸಾಹಿತ್ಯ ಬರದುಕೊಂಡೆ. ನಾಲ್ಕು ಹಾಡುಗಳನ್ನು ಹಾಡುವ ತೀರ್ಮಾನವಾಯಿತು. ವಿಸೀ ಯವರ 'ಭಾರತೀಯ ಭಾಗ್ಯತಾರೆ', ಕೆಎಸ್‌ನ ಅವರ 'ಆಕಾಶಕ್ಕೆದ್ದು ನಿಂತ', ಎಚ್‌ಎಸ್‌ವಿಯವರ 'ಐದು ಬೆರಳು ಕೂಡಿ ಒಂದು ಮುಷ್ಠಿಯು' ಮತ್ತು ಸಿದ್ದಯ್ಯ ಪುರಾಣಿಕರ 'ಅವಿಭಕ್ತಂ ವಿಭಕ್ತೇಷು' ಇವೇ ಆಯ್ದುಕೊಂಡ ಗೀತೆಗಳು. ಉತ್ಸಾಹಿ ಗಾಯಕರ, ವಾದ್ಯದವರ ತಂಡ ದಿನವೂ ಅಭ್ಯಾಸ ಮಾಡತೊಡಗಿದರು. ನನಗೆ ಹಾಡುವುದಾಗಲೀ ನಿರ್ದೇಶನ ಮಾಡುವುದಾಗಲೀ ಬಾರದಿದ್ದರೂ ನಾನು ದಿನವೂ ಅವರ ಜೊತೆ ಇರಬೇಕೆಂಬ ಕೋರಿಕೆ ಇತ್ತು. ಪ್ರಸ್ತುತಿ ಪಡಿಸುವ ದಿನಾಂಕ ಸಂಯೋಜಕರು ತಿಳಿಸಿದ್ದರು. ತಂಡದ ಸದಸ್ಯರು ರಾಜ್ಯವನ್ನು ಪ್ರತಿನಿಧಿಸುವ ಉಡುಗೆತೊಡುಗೆಗಳ ವ್ಯವಸ್ಥೆ ಮಾಡಿಕೊಂಡಿದ್ದರು. ವೇದಿಕೆಯ ಕಾರ್ಯಕ್ರಮದ ವೇಳೆಗೆ ಉದ್ಘೋಷಿಸಲು ಗೀತೆಗಳ ಬಗ್ಗೆ ಸಣ್ಣದೊಂದು ಟಿಪ್ಪಣಿಯನ್ನು ಸಹಾ ಇಂಗ್ಲಿಷ್‌ನಲ್ಲಿ ತಯಾರಿಸಿಕೊಟ್ಟೆ.

ಕಾರ್ಯಕ್ರಮದ ದಿನ ಸಂಘದ ಹೆಚ್ಚಿನ ಸದಸ್ಯರು ಕುಟುಂಬ ಸಮೇತ ರವೀಂದ್ರ ಸದನದಲ್ಲಿ (ನಮ್ಮ ರವೀಂದ್ರ ಕಲಾಕ್ಷೇತ್ರದ ಸಮಾನ ಸಭಾಂಗಣ) ಸೇರಿದ್ದರು. ಬೇರೆ ಬೇರೆ ರಾಜ್ಯಗಳ ಸಂಘಗಳು ಸಹ ಪಾಲ್ಗೊಂಡಿದ್ದವು. ಹೀಗಾಗಿ ಸದನ ತುಂಬಿ ತುಳುಕುತ್ತಿತ್ತು. ಇಂತಹ ಸಭಿಕರ ಮುಂದೆ ಕನ್ನಡದ ಗೀತೆಗಳನ್ನು ಪ್ರಸ್ತುತಪಡಿಸಲು ನಮ್ಮ ಸದಸ್ಯರು ಬಹಳ ಉತ್ಸುಕರಾಗಿದ್ದರು. ಈ ಮಧ್ಯೆ ನಾನು ಸಭಾಭವನದಲ್ಲಿ ಜಾಗವೊಂದನ್ನು ಹಿಡಿದು ನಮ್ಮ ತಂಡದ ಗಾಯನಕ್ಕೆ ಪ್ರೇಕ್ಷಕರಿಂದ ದೊರಕುವ ಪ್ರತಿಕ್ರಿಯೆಯನ್ನು ಅವಲೋಕಿಸಲು ಕಾದು ಕುಳಿತಿದ್ದೆ. ಅಷ್ಟರಲ್ಲಿ ವೇದಿಕೆಯ ನೇಪಥ್ಯಕ್ಕೆ

ಹೋಗಲು ನನಗೆ ಕರೆಬಂತು. ಅಲ್ಲಿ ಕಾರ್ಯಕ್ರಮದ ನಿರೂಪಕಿಗೆ ನಾನು ಬರೆದುಕೊಟ್ಟಿದ್ದ ಟಿಪ್ಪಣಿಯ ಸಣ್ಣ ರಿಹರ್ಸಲ್ ಕೊಡಬೇಕಾಗಿತ್ತು. ಗೀತೆಗಳ ಮೊದಲ ಸಾಲುಗಳನ್ನು ಕನ್ನಡದಲ್ಲೇ ಹೇಳಬೇಕಾಗಿತ್ತು. ಎಲ್ಲಿಯ ವಂಗ ನಿರೂಪಕಿ ಎಲ್ಲಿಯ ಕನ್ನಡ ಉಚ್ಚಾರಣೆ? ಆಕೆ ಳಕಾರಕ್ಕೆ ಲಕಾರ ಅನ್ನುತ್ತಿದ್ದಳು. ಅನೇಕ ಬಾರಿ ತಿದ್ದಿದರೂ ಆಕೆಯ ಉದ್ಘೋಷಣೆಯಲ್ಲಿ ಅನೇಕ ಪದಗಳು ಅಪಾರ್ಥಕ್ಕೆಡೆಮಾಡುತ್ತಿದ್ದವು. ಅದನ್ನು ಆಕೆಗೆ ವಿವರಿಸಿದಾಗ ಆಕೆ ಕೂಡ ಬೇಸರಗೊಂಡು ನಮ್ಮ ನಿರೂಪಣೆಯ ಭಾಗವನ್ನು ನಾನೇ ಮಾಡುವಂತೆ ಹೇಳಿದಳು. ನಾನು ಒಪ್ಪಿಕೊಂಡು ನೇಪಥ್ಯದಲ್ಲೇ ಉಳಿದೆ. ಅಂತೂ ಕಾರ್ಯಕ್ರಮ ಯಶಸ್ವಿಯಾಯಿತು. ನಮ್ಮ ಸಂಘದವರ ಜೊತೆಗೆ ತಮಿಳು, ಆಂಧ್ರ, ಮಲೆಯಾಳಿ, ಮರಾಠಿ ಸಂಘದವರು, ವಂಗ ಬಂಧುಗಳು ಸಹಾ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಭಾಗವಹಿಸುವಿಕೆಗೆ ಕಾರಣಕರ್ತನಾದ ನನ್ನನ್ನು ಸಂಘದ ಸದಸ್ಯರೆಲ್ಲರೂ ಅಭಿನಂದಿಸಿದಾಗ ಹೊರನಾಡಿನಲ್ಲಿ ಒಂದು ಸಂಘಟನೆಯ ಕೆಲಸಕ್ಕೆ ಕಾರಣೀಭೂತನಾದದ್ದು ಹೆಮ್ಮೆ ಎನಿಸಿತು. 'ವಿಜಯೋತ್ಸವ' ಧ್ವನಿಸುರುಳಿಯ ಹಿಂದಿನ ಶಕ್ತಿಗಳಾದ ಮೈಸೂರು ಬ್ಯಾಂಕು, ಅಶ್ವತ್ಥ್, ಸಾಹಿತಿಗಳು, ಗಾಯಕರು ಎಲ್ಲರನ್ನೂ ಮನದಲ್ಲೇ ಅಭಿನಂದಿಸಿದೆ.

ಒಂದು ವಾರದಲ್ಲಿ ಸಂಯೋಜಕರ ಕಡೆಯಿಂದ ಸಂಘದ ಹೆಸರಿಗೆ ಮೂರು ಸಾವಿರ ರೂ.ಗಳ ಚೆಕ್ ತಲುಪಿತ್ತು. ಈ ಹಣ ಬಳಸಿ ಗಾಯನದಲ್ಲಿ ಪಾಲ್ಗೊಂಡವರೆಲ್ಲರಿಗೂ, ನನ್ನನ್ನೂ ಸೇರಿಸಿ ಸುಂದರವಾದ ಸ್ಮರಣಿಕೆಯನ್ನು ತಯಾರಿಸಿ ಹಂಚಲಾಯಿತು.

*****

ಅಮೃತ ಮಹೋತ್ಸವ

– ಬೆಂ.ಶ್ರೀ. ರವೀಂದ್ರ

ಅಮೃತ ಮಹೋತ್ಸವಕೆ ಬರೆಯಬೇಕೆ ಕವನ
ಭಾವೋದ್ವೇಗದಲಿ ಮರೆಯದಿರಲಿ ಜೀವನ

ಸುತ್ತಲೂ ಹಾರಿಸುತ್ತಿರಲಿ ನವಭಾರತ ಧ್ವಜ
ತ್ರಿವರ್ಣದ ನಿಜದರ್ಥವ ನೆನೆಸುತ್ತಿರಲಿ ಮನ

ಸುಮ್ಮನೇರಲಿಲ್ಲ ಗುಡಿ ಗೌರಿಶಂಕರ ಶಿಖರ
ಹಾದಿಲಿ ಹರಿದಿದೆ ಬಲಿದಾನದ ರಕ್ತ ಅಮರ

ಅಹಿಂಸೆ ಸತ್ಯಾಗ್ರಹ ಚಳವಲಿ ಜನ ಜಾಗೃತಿ
ನಾಡಹೊತ್ತು ನಡೆಯಿತು ಓ ಹಲವು ಸಂತತಿ

ಇಟ್ಟಿಲ್ಲ ಲೆಕ್ಕ ಕೊಟ್ಟಿಲ್ಲ ತಾಮ್ರಪತ್ರ ಪಿಂಚಣಿ
ಭಾರತದ ಭವಿಷ್ಯ ಪ್ರೀತಿಯೆ ಅವರ ರಂಪಣಿ

ಕಿರೀಟಕಿಂದು ಸತ ಸವಾಸವೆ ನುಡಿಯೆ ಕಕ್ಕಟ
ಅವರಿಗಿಂತ ಇವರು ಹೆಚ್ಚು ಎಂಬ ಕಂಗಾಟ

ಹೊಗಳಿಗಕೆ ಹೊನ್ನಶೂಲ ಜನಮನಕೆ ಗೂಟವು
ಮರುಳು ನುಡಿಗೆ ತೆರೆದಿಡಿ ಜಾಗೃತಿ ಆಟವು


ಎಪ್ಪತ್ತೈದು_ ನೂರು ನೂರು ಸಾವಿರ ದಾಟಲಿ
ಬಾಗದಂತೆ ಕಾಯೋಣ ನಾವು ದಿಟ್ಟತನದಲಿ

ಯಾರೋ ಇತ್ತ ಭಾಗ್ಯವಲ್ಲ ನಮ್ಮ ಅರ್ಜನೆ
ನೀವು ನಾವು ಏನೆಂದರಿತರದೇ ಸಮರ್ಥನೆ.

*****

ಬಹು ಉಪಯೋಗಿ ಉಪ್ಪಿನ ಕಾಗದ

– ಜಿ. ವಿ. ಅರುಣ



'ಕತ್ತರಿಸಿದ್ದ ಬೆರಳ ಉಗುರಿಗೆ ಬಟ್ಟೆಯ ಎಳೆ ಸಿಕ್ಕಿ ಹಾಕಿಕೊಳ್ಳುತ್ತಿದೆ' ಎಂದು ಮೊನ್ನೆ ಮೊಮ್ಮಗಳು ಹೇಳಿದಳು. ತಕ್ಷಣ ತೆಳುವಾದ ಮರದ ಪಟ್ಟಿಗೆ ಅಂಟಿಸಿದ್ದ ನಯವಾದ ಉಪ್ಪಿನ ಕಾಗದದಿಂದ ಅವಳ ಉಗುರಿನ ತುದಿಯನ್ನು ಮೆಲ್ಲಗೆ ಉಜ್ಜಿದೆ. ಅವಳು ಆ ಉಗುರಿನ ತುದಿಯನ್ನು ಮತ್ತೊಂದು ಬೆರಳಿನಿಂದ ಸವರಿಕೊಂಡು ಪರೀಕ್ಷಿಸಿದಳು. "ತಾತ ಮೊದಲು ಚೂಪಾಗಿತ್ತು, ಸೀಳು ಬಿಟ್ಟುಕೊಂಡಿತ್ತು. ಈಗ ಅದೆಲ್ಲ ಮಾಯ ಆಗಿ ಹೋಯ್ತು" ಎಂದಳು. ಪಿಂಕ್ ಬಣ್ಣದ ಉಪ್ಪಿನ ಕಾಗದದ ಪಟ್ಟಿಯನ್ನು ತೆಗೆದುಕೊಂಡು ಕೌತುಕದಿಂದ ಪರೀಕ್ಷಿಸಿದಳು. ಅದನ್ನು ತನ್ನ ಚರ್ಮದ ಮೇಲೆ ಇಟ್ಟು ಉಜ್ಜಲು ಹೋದಾಗ, ನಾನು "ಬೇಡ" ಎಂದು ತಡೆದೆ. ಅಷ್ಟು ಹೊತ್ತಿಗೆ ಅದು ಚರ್ಮಕ್ಕೆ ತಾಕಿತ್ತು. "ಹಾ, ಒಳ್ಳೆ ಚಾಕು ತರ ಇದೆ ತಾತ ಇದು" ಎಂದು ಕಾಗದದ ಮೇಲೆ, ಪೆನ್ಸಿಲ್ ಮೇಲೆ, ಕ್ರಯಾನ್ ಮೇಲೆ ಉಜ್ಜಿದಳು. ಅವುಗಳಿಂದ ಉದುರಿದ ಸಣ್ಣಸಣ್ಣ, ಬಣ್ಣಬಣ್ಣದ ಕಣಗಳನ್ನು ನೋಡಿ ಆಶ್ಚರ್ಯಪಟ್ಟಳು. ತಾನು ಹಿಡಿದುಕೊಂಡಿದ್ದ ಆ ಪಟ್ಟಿಯ ಭಾಗವನ್ನು ಗಮನಿಸಿ "ತಾತ, ಇದು ನಾನು ಐಸ್ ಕ್ರೀಂ ತಿನ್ನುವ ಚಮಚದ ರೀತಿ ಇದೆ" ಎಂದು ಉದ್ಗರಿಸಿದಳು.


ಇದು ಅಲಂಕಾರ ಪ್ರಸಾಧನ ಅಂಗಡಿಗಳಲ್ಲಿ 'ಉಗುರಿನ ಅರ – ನೈಲ್ ಫೈಲ್' ಎಂದು ಕೇಳಿದರೆ ದೊರಕುವ ಒಂದು ಉಪಕರಣ. ಉಪ್ಪಿನ ಕಾಗದ ಎಂದು ಜನಸಾಮಾನ್ಯರು ಕರೆಯುವ ಎಮರಿ ಪೇಪರ್ ಅಥವಾ ಸ್ಯಾಂಡ್ ಪೇಪರ್, ಎ4 ಕಾಗದದ ಅಳತೆಯ ಒಂದು ಉಜ್ಜಿ ನಯಮಾಡುವ ಸಾಧನ. ದಪ್ಪನೆಯ ಕಾಗದದ ಮೇಲೆ ಬೆಣಚುಕಲ್ಲಿನ ಕ್ವಾರ್ಟ್ಸ್ ಅಥವಾ ಚಕಮಕಿ ಕಲ್ಲಿನ ಫ್ಲಿಂಟ್, ಇಲ್ಲವೇ ಗಾರ್ನೆಟ್ ಎಂಬ ಸಿಲಿಕೇಟ್ ಗುಂಪಿಗೆ ಸೇರಿದ ಖನಿಜದ ಪುಡಿಯನ್ನು ಅಂಟಿಸಿ ಮಾಡಿರುತ್ತಾರೆ. ಅದನ್ನು ಬೇರೆ ಪದಾರ್ಥಗಳ ಮೇಲೆ ಉಜ್ಜಿದಾಗ, ಸಾಣೆ ಹಿಡಿದಂತೆ ಆಗಿ, ಆ ಪದಾರ್ಥದ ಮೇಲ್ಮೈಯಿಂದ ಬೇಡದ ಪದಾರ್ಥವನ್ನು ಸಣ್ಣ ಪುಡಿಯಂತೆ ತೆಗೆದುಹಾಕಿಬಿಡುತ್ತದೆ. ಈ ಕಲ್ಲನ್ನು ಚೆನ್ನಾಗಿ ಪುಡಿ ಮಾಡಿ, ಜರಡಿ ಹಿಡಿದು ಬೇರೆ ಬೇರೆ ಗಾತ್ರದ ಪುಡಿಗಳನ್ನಾಗಿ ವಿಂಗಡಿಸುತ್ತಾರೆ. ಕಲ್ಲಿನ ಪುಡಿಯ ಗಾತ್ರವು ಗೋಧಿ ಹಿಟ್ಟಿನ ಕಣಕ್ಕಿಂತಲೂ ಸಣ್ಣ ಗಾತ್ರದಿಂದ ಹಿಡಿದು ಉದ್ದಿನಕಾಳಿಗಿಂತ ದಪ್ಪವಾದ ಗಾತ್ರ ಇರಬಹುದು.

ಉಪ್ಪಿನ ಕಾಗದ ಪಡೆಯಲು ಈ ಅಪಕರ್ಷಕ ಖನಿಜದ ಪುಡಿಯನ್ನು ಸೂಕ್ತವಾದ ಗೋಂದಿನ ಜೊತೆ ಬೆರೆಸಿ ದಪ್ಪ ಕಾಗದ, ರಬ್ಬರ್, ಪಾಲಿಯೆಸ್ಟರ್ ಬಟ್ಟೆ, ದಪ್ಪ ಹತ್ತಿ ಬಟ್ಟೆ, ಪ್ಲಾಸ್ಟಿಕ್ ಹಾಳೆ ಮುಂತಾದವುಗಳ ಮೇಲೆ ತೆಳುವಾದ ಲೇಪನವನ್ನು ಒಂದೇ ದಪ್ಪದಲ್ಲಿರುವಂತೆ ಹಚ್ಚಿ, ಅದನ್ನು ಉಷ್ಣ ಸಂಸ್ಕರಣೆ ಮಾಡಿ ಒಣಗಿಸಿರುತ್ತಾರೆ.

ಅಪಘರ್ಷಕ ಖನಿಜದ ಪುಡಿಯ ಗಾತ್ರವನ್ನು ಅನುಸರಿಸಿ ಉಪ್ಪಿನ ಕಾಗದವನ್ನು 40 ಗ್ರೇಡ್, 50 ಗ್ರೇಡ್, 60 ಗ್ರೇಡ್ ಎಂದು ಕರೆದರೆ ಅದು ದಪ್ಪ ಪುಡಿಯನ್ನು ಮೆತ್ತಿ ಮಾಡಿದ ಉಪ್ಪಿನ ಕಾಗದವಾಗಿರುತ್ತದೆ. ಪುಡಿಯು ನಯವಾಗಿದ್ದರೆ

100ರಿಂದ 320 ಗ್ರೇಡ್ ಇರುತ್ತದೆ. ಸೂಪರ್ ನಯವಾಗಿದ್ದರೆ 1500 ಗ್ರೇಡಿನವರೆಗೆ ಅವುಗಳನ್ನು ವರ್ಗೀಕರಿಸುತ್ತಾರೆ. ನ್ಯಾನೋ ಗಾತ್ರ ಇರುವ ಪುಡಿಯ ಉಪ್ಪಿನ ಕಾಗದಗಳು ಕೂಡ ಮಾರುಕಟ್ಟೆಯಲ್ಲಿ ಸಿಗುತ್ತವೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿಕೊಂಡು ಉದ್ಯಮಗಳಲ್ಲಿ ಬಳಸುತ್ತಾರೆ.

ಒರಟಾದ 50 ಗ್ರೇಡ್ ಹಾಗು ನಯವಾಗಿರುವ 100 ಗ್ರೇಡ್ ಉಪ್ಪಿನಕಾಗದವನ್ನು ಗಮನಿಸಿ.



ಬಣ್ಣ ಬಳಿಯುವ ಮೇಲ್ಮೈಯನ್ನು ತಯಾರು ಮಾಡಲು ಮರಗೆಲಸದ ವಸ್ತುಗಳಿಗೆ, ಗೋಡೆಗೆ ಹಚ್ಚಿರುವ ಲೆಪ್ಪದ ಮೇಲೆ ಮೊದಲು ಉಪ್ಪಿನ ಕಾಗದದಿಂದ ಉಜ್ಜುತ್ತಾರೆ. ಯಂತ್ರಗಳಿಂದ ಲೋಹಗಳ ಬಿಡಿಭಾಗಗಳನ್ನು ತಯಾರಿಸಿದಾಗ ಅವುಗಳಲ್ಲಿ ಅಂಟಿಕೊಂಡಿರುವ ಲೋಹದ ತಡಕಲು ಬರ್‌ಗಳನ್ನು ತೆಗೆಯಲು, ಅನಗತ್ಯವಾಗಿರುವ ಚೂಪಾದ ಅಂಚುಗಳನ್ನು ನಯ ಮಾಡಲು ಇವುಗಳನ್ನು ಬಳಸುತ್ತಾರೆ. ಉಕ್ಕಿನ ಹಾಳೆಗಳು ತುಕ್ಕು ಹಿಡಿದಿದ್ದರೆ ಉಪ್ಪಿನಕಾಗದದಿಂದ ಉಜ್ಜಿ ತೆಗೆಯುತ್ತಾರೆ.

ಎಮರಿ ಪೌಡರ್ ಅಥವಾ ಎಮರಿ ಮರಳು, ಎಮರಿ ಉಪ್ಪು ಎಂದು ಹಾರ್ಡವೇರ್ ಅಂಗಡಿಗಳಲ್ಲಿ ಪೊಟ್ಟಣಗಳಲ್ಲಿ ಸಿಗುವ ಪುಡಿಯನ್ನು ಬಡಗಿಗಳು ಇಟ್ಟುಕೊಂಡಿರುತ್ತಾರೆ. ಅವರು ತಮ್ಮ ಹತ್ತರಿ ಹಿಡಿಯುವ ಸಲಕರಣೆಗಳನ್ನು, ಉಳಿ ಮೊದಲಾದ ಆಯುಧಗಳನ್ನು, ಅವು ಸವೆದು ಹೋದಂತೆಲ್ಲ ಆಗಿಂದಾಗ ಚೂಪು ಮಾಡಿಕೊಳ್ಳುತ್ತಿರುತ್ತಾರೆ. ಇದಕ್ಕೆ ಅವರು ಬಳಸುವುದು ಈ ಎಮರಿ ಪೌಡರನ್ನೇ. ಅದನ್ನು ಒಂದು ಸಮತಟ್ಟಾದ ಮರದ ತುಂಡಿನ ಮೇಲೆ ತೆಳುವಾಗಿ ಹರಡಿ, ಅದರ ಮೇಲೆ ಉಳಿಯನ್ನು ಕೋನವಾಗಿ ಹಿಡಿದು ಒತ್ತಿ, ಉಜ್ಜಿ ಸಾಣೆ ಹಿಡಿಯುತ್ತಾರೆ. ಆಗ ಅದು ಹರಿತವಾಗುತ್ತಾ ಹೋಗುತ್ತದೆ. ಬಡಗಿಯ ಕೆಲಸ ಆಗ ಸುಲಭವಾಗುತ್ತದೆ.

ಮನೆಯ ಮುಂದೆ ಆಗಿಂದಾಗ 'ಕತ್ತರಿ, ಚಾಕು ಸಾಣೆ ಹಿಡಿಯೋದೂ. . .' ಎಂದು ಕೂಗುತ್ತಾ ಸಾಣೆ ಹಿಡಿಯುವ ಚಕ್ರವನ್ನು ಮರದ ಚೌಕಟ್ಟಿಗೆ ಜೋಡಿಸಿ, ಕಾಲಿನಿಂದ ತುಳಿದು ತಿರುಗಿಸುವ ಸಾಧನವನ್ನು ತರುವ ವ್ಯಕ್ತಿಗಳನ್ನು ನಾವು ಅನೇಕ ಬಾರಿ ನೋಡಿರುತ್ತೇವೆ. ಅವರಿಂದ ಕೆಲಸವನ್ನು ಮಾಡಿಸಿಕೊಂಡು ಹಣ ನೀಡಿರುತ್ತೇವೆ. ಆತ ಚಾಕುವನ್ನು ತಿರುಗುತ್ತಿರುವ ಸಾಣೆಕಲ್ಲಿಗೆ ಹಿಡಿದಾಗ ಬರುವ ಚೊಂಯ್ ಶಬ್ದವು ನಮ್ಮ ಚಾಕು ಚೂಪಾಗುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿ ಕೇಳಿಸುತ್ತದೆ! ಅದನ್ನು ಸಾಣೆ ಹಿಡಿದು "ಆಯ್ತು ಸಾಮಿ" ಎಂದು ಹಿಂದಿರುಗಿಸಿದಾಗ, ಅದನ್ನು ಪಡೆದು, ಪರಿಶೀಲಿಸಿ, "ಇನ್ನೊಂದು ಸ್ವಲ್ಪ ಚೂಪು ಮಾಡಪ್ಪ.." ಎಂದು ಹಿಂದಿರುಗಿಸುವುದು, ಅವನು ಮತ್ತೆರೆಡು ಬಾರಿ ಚೊಂಯ್ ಚೊಂಯ್ ಎನ್ನಿಸಿ, "ಬಾಳ ಚೂಪಾಗೋಯ್ತು ಸಾಮಿ, ಉಸಾರು" ಎನ್ನುವುದು ಈ ವೃತ್ತಿಯೊಡನೆ ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ. ಹಾಗೆ ಮಾತುಕತೆಯಾದಾಗಲೇ ಇಬ್ಬರಿಗೂ ಸಮಾಧಾನ!



ಈ ಸಾಣೆ ಹಿಡಿಯುವ ಚಕ್ರವು ಕೂಡ ಎಮರಿ ಪೌಡರನ್ನು ಒಟ್ಟುಗೂಡಿಸುವ ಸೂಕ್ತ ಬಂಧಕಗಳೊಡನೆ ಬೆರೆಸಿ ಚಕ್ರಾಕಾರವಾಗಿ ಒತ್ತಿ ಮಾಡಿರುವ ಒಂದು ಉಪಕರಣ. ಇದರ ಬಗ್ಗೆ ತಿಳಿಯುವುದು ಅನೇಕ ವಿಚಾರಗಳು ಇವೆ. ಅವನ್ನು ಮುಂದೊಂದು ದಿನ ತಿಳಿದುಕೊಳ್ಳೋಣ.

ಸ್ಕೂಟರ್ ಸವಾರರು ಸ್ಪಾರ್ಕ್ ಪ್ಲಗ್ಗಿನಲ್ಲಿ ಇಂಗಾಲವು ತುಂಬಿಕೊಂಡರೆ ಒಂದು ಚೂರು ಉಪ್ಪಿನಕಾಗದದಲ್ಲಿ ಉಜ್ಜಿ ಮತ್ತೆ ಸುಸ್ಥಿತಿಗೆ ತರುತ್ತಾರೆ. ನಾವು ಎಂಜಿನಿಯರಿಂಗ್ ಓದುತ್ತಿದ್ದಾಗ ನಕ್ಷೆಗಳನ್ನು ತಯಾರಿಸಲು ವಿವಿಧ ಛಾಯೆಗಳ ಕಪ್ಪು ಪೆನ್ಸಿಲ್ಲನ್ನು ಉಪಯೋಗಿಸುತ್ತಿದ್ದೆವು. ಆಗ ಅದನ್ನು ಚೀವಲು ತುಂಡುಮಾಡಿದ ಅರೆ ಬ್ಲೇಡೂ ಜೊತೆಗೆ ಸೀಸವನ್ನು ಚೂಪು ಮಾಡಲು ಒಂದು ಚೂರು ನವಿರಾದ ಉಪ್ಪಿನ ಕಾಗದದ ತುಂಡೂ ನಮ್ಮ ಜಾಮೆಟ್ರಿ ಪೆಟ್ಟಿಗೆಯ ಅವಿಭಾಜ್ಯ ಅಂಗವಾಗಿರುತ್ತಿತ್ತು.

ಒಂದು ಕಿವಿಮಾತು. ಮನೆಯಲ್ಲಿ ಬಳಸುವ ಕತ್ತರಿ, ಚಾಕು ಮೊದಲಾದುವನ್ನು ಉಪ್ಪಿನಕಾಗದ ಬಳಸಿ ತಕ್ಷಣಕ್ಕೆ ನಾವೇ ಚೂಪು ಮಾಡಿಕೊಳ್ಳಬಹುದು. ಹೀಗೆ ಉಪ್ಪಿನ ಕಾಗದವು ಬಹಳ ಉಪಯೋಗಿಯಾದ ಸಾಧನವಾಗಿದೆ.

*****

ಋತುಗಳ ಪಾತ್ರಗಳು

– ಎಂ ಆರ್. ರಘುನಾಥ್

"ಶಿಶಿರ"ನೊಬ್ಬ ಕ್ಷೌರಿಕ
ತರುಗಳಲಿ ಹಸಿರೆಲೆಗಳ
ತರಗೆಲೆಗಳಾಗಿ
ಉದುರಿಸಿದ.

"ವಸಂತ"ನೊಬ್ಬ ಪ್ರಸಾಧಕ
ತರುಲತೆಗೆಲ್ಲ ಜೀವತುಂಬಿ
ಚಿಗುರುವಂತೆ ಮಾಡಿದ
ಬಣ್ಣಗಳ ತುಂಬಿ ಅಲಂಕರಿಸಿದ
ಹರುಷವನ್ನೆ ಪಸರಿಸಿದ

"ಗ್ರೀಷ್ಮ"ನೊಬ್ಬ ವಾಹಕ
ತಾಪವಿಳಿಸಿ ಗಾಳಿ ಬೀಸಿ
ಬಾನಿನಲ್ಲಿ ಮೋಡಗಳನು
ಆಟವಾಡಿಸಿ ಕೊಂಡೊಯ್ದ ಭೂಪ

'ವರ್ಷ'ನೊಬ್ಬ ಸಂಯೋಜಕ
ಬಾನಿನಿಂದ ಮಳೆಯ ಸುರಿಸಿ
ಜನ ಜಾನುವಾರಗಳಿಗೆಲ್ಲ
ಆಹಾರಕ್ಕೆ ಅಣಿಮಾಡಿದ

"ಶರತ"ನೊಬ್ಬ ಶಕ್ತಿ.. ಭಕ್ತಿಯ ಪ್ರತೀಕ
ಶಕ್ತಿದೇವತೆಗಳಿಗೆ ಪೂಜೆ ಸಲ್ಲಿಸಿ
ದೀಪೋತ್ಸವದಿ ತಮವಹರಿಸಿ
ಭಕ್ತಿ ಸಾಮ್ರಾಜ್ಯ ಮೆರೆಸಿದ

"ಹೇಮಂತ"ನೊಬ್ಬ
ಸೋಮಾರಿತನದ ಉತ್ತೇಜಕ
ಜನರ ಕೂರಿಸಿ ಉಣಿಸಿ
ಹೊದಿಸಿ ಮಲಗಿಸಿದ

ಸರದಿಯಂತೆ ಪ್ರತಿ ವರುಷ
ಬರುವರಿವರು
ಭುವಿಯ ಜೀವರಾಶಿಗೆಲ್ಲ
ಸಮತೋಲನ ಕಾಯುವರು.

***

ಮೂರು ದೇಶಭಕ್ತಿ ಗೀತೆಗಳು

ಮೂಲ: ಸ್ವಾತಂತ್ರ್ಯವೀರ ಸಾವರ್ಕರ್
ಕನ್ನಡಕ್ಕೆ: ಮನೋಹರ ಗೋಖಲೆ

೧. ಕಾಣುತಿಹುದು ಉಜ್ವಲ ಭವ್ಯ ಭವಿಷ್ಯತ್ಕಾಲ

ಕಾಣುತಿಹುದು ಉಜ್ವಲ ಭವ್ಯ ಭವಿಷ್ಯತ್ಕಾಲ
ಹಿಂದೂವೀರ ಸನ್ನದ್ಧ ಸಮರ ಸಂಭಾವ್ಯ ಕಾಲ
ಅಳಿದುಹೋಗಲಿ ವರ್ತಮಾನದ ಕುಟಿಲ ವೈರಿ ಜಾಲ

ಐಕ್ಯತೆಯ ಮಂತ್ರ ಸಾರುತ್ತ ಮುನ್ನಡೆಯೋಣ ಮುಂದೆ
ಕೋಟಿ ಕೋಟಿ ಹಿಂದೂವೀರರು ಸಿದ್ಧ ಶಸ್ತ್ರಸೈನ್ಯಬಲದೆ

ದೇಶವ್ಯಾಪಿ ಶತ್ರುಪೀಡೆ ಹಿಂಸೆ ನಮ್ಮ ಸಹನೆಗೆ ಭಂಗ
ಕಂಬಕಂಬಗಳಲಿ ಅವತರಿಸುತಿರಲಿ ಉಗ್ರ ನರಸಿಂಗ

ಯುಗಯುಗದಿಂದಲೂ ದುಷ್ಟ ದಮನ ಧರ್ಮಸಂರಕ್ಷಣೆ ಇಲ್ಲಿ
ರಾವಣ ಕಂಸ ಕೀಚಕ ದುಶ್ಯಾಸನ ಸಂತಾನ ಲೆಕ್ಕ ಮುಗಿಯದಿಲ್ಲಿ

ಸುಭದ್ರ ಸಿಂಹಾಸನದಿ ಪ್ರಜಾನಾಯಕ ಆಗಿರಲಿ ನಿರ್ಭೀತ
ರಾಷ್ಟ್ರ ನಿರ್ಮಾಣಕೆ ಪ್ರಾಣ ಮೀಸಲು ಇದು ದಿಟದಿಟ

ಉದಯವಾಗಲಿ ಭವ್ಯ ಭಾರತ ಮುಕ್ತವಾಗಲಿ ವಿಶ್ವದಿಕ್ಪಥ
ಸಮನ್ವಯ ಸಮಾನತೆಯ ದೇಶ ರಕ್ಷಣೆ ಇದು ನಮ್ಮ ಶಪಥ.

೨. ಶಸ್ತ್ರ ಗೀತೆ

ವ್ಯಾಘ್ರ ನಖ್ರ ಸರ್ಪ ಸಿಂಹ ಹಿಂಸ್ರ ಸರ್ವಜಂತು ಲೋಕವು
ಅಸ್ತ್ರಭಕ್ತಿ ಶಸ್ತ್ರಶಕ್ತಿಯಲಿ ರಕ್ಷಣೆ ನರನ ಪ್ರಾಣವು

ರಾಮಚಂದ್ರ ಧನುರ್ಧಾರಿ ಚಕ್ರಪಾಣಿ ಶ್ರೀಹರಿ
ಆರ್ತರಕ್ಷಣೆಗೆ ಶಸ್ತ್ರ ಎತ್ತಿಹಿಡಿದ ವಿಶ್ವದೊಡೆಯ ನರಹರಿ

ಆತ್ಮರಕ್ಷಣೆಯಲಿ ಶಸ್ತ್ರ ಪಾಪವಲ್ಲ ಪುಣ್ಯವಂತೂ ಅಲ್ಲ
ಇಷ್ಟಾನಿಷ್ಟ ಸ್ವಯಂ ವಿವೇಚನೆ ಜಾಣನಂತೂ ಬಲ್ಲ

ರಾಷ್ಟ್ರರಕ್ಷಣೆಗೆ ಶಸ್ತ್ರಮಾನ್ಯ ಸರ್ವ ಧರ್ಮ ಸೂತ್ರವು
ಬ್ರಿಟನ್ ಜರ್ಮನಿ ಜಪಾನಿಗೂ ಒಂದೇ ಭೂಮಿ ಚಿತ್ರವು

ಸ್ವದೇಶ ಹಿತರಕ್ಷಣೆಗೆ ಭಾರತಮಾತೆಯ ಮಕ್ಕಳೂ ಬದ್ಧ
ಅಸ್ತ್ರಸಂಗ್ರಹ ಶಸ್ತ್ರಾಭ್ಯಾಸದಿ ನಾವು ಸದಾ ಸನ್ನದ್ಧ

ನಷ್ಟ ಸಂಕಷ್ಟ ಕಾಲಕೆ ಶಸ್ತ್ರಸಂಗ್ರಹ ಸಾಗಬೇಕು ನಿರಂತರ
ಸಮರ್ಥ ಸಮರ ನಡೆಯಬೇಕು ಶತ್ರುನಿಗ್ರಹ ಸಂಹಾರ

ಸ್ವದೇಶ ಸ್ವಧರ್ಮ ರಕ್ಷಣೆಗೆ ಸ್ವಯಂಶಿಸ್ತು ಭೂಷಣ
ಹೊಸ ಪೀಳಿಗೆಗೆ ಹೊಸ ರಕ್ತಕೆ ಸಿಗಬೇಕು ಸಮರ ಶಿಕ್ಷಣ.

೩. ಭಗತಸಿಂಹನಿಗೆ ಜಯವಾಗಲಿ

ವೀರ ಭಗತಸಿಂಹನಿಗೆ ಜಯವಾಗಲಿ
ಗಲ್ಲುಶಿಕ್ಷೆಗೆ ಬಲಿಯಾದ ನರ ಸಿಂಹ
ಹುತಾತ್ಮನಿಗೆ ಜಯವಾಗಲಿ

ರಾಜಗುರು ನಿನಗೆ ಜಯವಾಗಲಿ
ರಾಷ್ಟ್ರಕರ್ಪಣೆ ಆತ್ಮ ನಿವೇದನೆ
ನಿರ್ಭಯ ಭಕ್ತಾಗ್ರೇಸರನಿಗೆ ಜಯವಾಗಲಿ

ರಾಜಕಿರೀಟ ನೀವು ಧರಿಸಿದಿರಿ
ಮೃತ್ಯು ಕಿರೀಟದಿ ಹೊಳೆಯುವ ನಿಮ್ಮನು
ಪ್ರಜೆಗಳು ಶಿರದಲಿ ಮುಡಿದಿಹರು
ಶಸ್ತ್ರಗಳ ಸ್ವಯಂ ಧರಿಸಿಹರು
ರಣಾಂಗಣಕೆ ಉತ್ಸಾಹದಿ ಹೊರಟಿಹರು
ನಿಮ್ಮ ವೀರಮರಣದ ಸ್ಫೂರ್ತಿಯ ಪಡೆದು
ಸಮರಕ್ಷೇತ್ರದಿ ಹೋರಾಟಕೆ ನಿಂತಿಹರು

ಹುತಾತ್ಮ ಬಂಧುಗಳು ಅಮರರಾಗಲಿ
ನಿಮ್ಮ ಸಾಕ್ಷಿಯಲಿ ಶಪಥ ತೊಟ್ಟವರು
ದೇಶ ಸ್ವಾತಂತ್ರ್ಯಕೆ ಹೋರಾಡುವೆವು
ಹೋರಾಟದಿ ಗೆಲುವನು ಗೆದ್ದೇ ತೀರುವೆವು

ವೀರ ಭಗತಸಿಂಹ ರಾಜಗುರು ಸಿಂಹ
ನಿಮ್ಮ ಹೆಸರು ಅಮರ
ಮುಂದೆ ನಮ್ಮದೇ ಜಯ
ಹೌದು ನಮ್ಮದೇ ಜಯ.

***

ದೊಡ್ಡ ಐಕ್ಳು ಅ ಆ ಇ ಈ ಕಲ್ತಿದ್ದು

– ಡಾ. ಶುಭಶ್ರೀ ಪ್ರಸಾದ್

ಅಕ್ಷರ ಎಂದರೆ ನಾಶವಿಲ್ಲದ್ದು. ಅಕ್ಷರ ವಿದ್ಯೆಯ ಮೊದಲ ಹಂತ. ಅಕ್ಷರಗಳು ಪದಗಳಾಗಿ, ವಾಕ್ಯಗಳಾಗಿ ದೊಡ್ಡ ದೊಡ್ಡ ವಾಕ್ಯವೋ ಕಾವ್ಯವೋ ಆದೀತು. ಆದಿಮಾನವ ಸಂಜ್ಞೆಗಳಿಂದ ತನ್ನ ಭಾವನೆಗಳನ್ನು ಹೇಳಿಕೊಳ್ಳುತ್ತಿದ್ದ. ನಂತರ ಭಾಷೆಯ ಉಗಮ. ಭಾಷೆ ಕೇವಲ ಮನುಷ್ಯನಿಗೆ ಮಾತ್ರ ಸೀಮಿತವಾಗಿಲ್ಲ. ಆದರೆ ಮನುಷ್ಯನ ಭಾಷೆ ಬೇರೆ ಯಾವುದೇ ಜೀವಿಯ ಭಾಷೆಗಿಂತ ವಿಶೇಷವೂ, ಯೋಜನಾಬದ್ಧವೂ ಆಗಿದೆ. ಅಕ್ಷರವನ್ನು ಓದಲು ಬರೆಯಲು ಬಾರದವರೂ ಮಾತಿನ ಮೂಲಕ ಭಾಷೆಯ ಬಳಕೆ ಉಪಯೋಗವನ್ನು ಪಡೆದಿರುತ್ತಾರೆ. ಆದರೆ ಓದಲು ಬರೆಯಲು ಬಾರದವರು ವಂಚನೆಗೆ ಒಳಗಾಗುವ ಸಾಧ್ಯತೆ ಹೆಚ್ಚೆಂದೇ ಸರ್ಕಾರದವರು ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡಲು ಹೊರಟಿದ್ದಾರೆ. ಅದರಲ್ಲೊಂದು ವಯಸ್ಕರ ಶಿಕ್ಷಣ. ಚಿಕ್ಕ ವಯಸ್ಸಿನಲ್ಲಿ ಯಾವುದೋ ಕಾರಣಕ್ಕೆ ಓದಲಾಗದ ಇಳಿ ವಯದವರನ್ನು ಸಂಜೆ ಶಾಲೆಯಲ್ಲಿ ಸಾಕ್ಷರರನ್ನಾಗಿಸುವ ಉತ್ತಮ ಪ್ರಯತ್ನವಿದು.....

ನಿಮ್ಗೆ ನಮ್ಮ ಹಳ್ಳಿಯಲ್ಲಿ ನಡೆದ ಸಾಕ್ಷರತಾ ಕಲಿಕಾ ಕಾರ್ಯದ ಬಗ್ಗೆ ಹೇಳಬೇಕು.

ನಮ್ಮ ಹಳ್ಳಿಯ ಸ್ಕೂಲಿಗೆ ಹೊಸದಾಗಿ ಮೇಡಮ್ ಆಗಿ ಬಂದ ಮುವ್ವತ್ತರ ಸೀತಾಬಾಯಿಯು ಕರಿಯಪ್ಪ, ಕೆಂಪೇಗೌಡ, ಶಾರದಮ್ಮ, ಬಿಳೀಮೂತಿ ಸುಂದ್ರಮ್ಮ, ಸಿದ್ದಪ್ಪ, ಗುಂಡಮ್ಮ, ಗೌರೀಗೌಡ, ನಾಗರಕಟ್ಟೆ ನಂಜುಂಡಪ್ಪ, ಶಂಕರಪ್ಪ, ತಿಮ್ಮಯ್ಯ, ಸೋಮಶೇಖರ, ಕರೀರಾಮಯ್ಯ, ಚಿಕ್ಕೋನು, ಜಟಕಾ ಹೊಡೆಯೋ ಕರೀಂಸಾಬಿ, ಕೆಂಪಜ್ಜ, ಮೂಲೆಮನೆ ಮರಿ, ದೊಡ್ಡತೊಟ್ಟಿಮನೆ ಸಿದ್ದೇಗೌಡ, ಗಿರೀಗೌಡ, ರಾಚಪ್ಪ, ಜೋಸೆಫ್, ಸುಂಕದಕಟ್ಟೆ ಗೋವಿಂದ ಇನ್ನೂ ಹತ್ತಾರು ವಯಸ್ಕರು ಮತ್ತು ವಯೋವೃದ್ಧರ ಮನವೊಲಿಸಿ ಸಂಜೆ ಸ್ಕೂಲಿಗೆ ದಾಖಲಿಸಿದರು. ಅವರ ಹೆಂಡತಿಯರು, ಗಂಡಂದಿರು, ಅಕ್ಕಪಕ್ಕದವರು, ಮಕ್ಕಳು ಮರಿಗಳು ಮೋಟರು ಮೊಂಡರು 'ಈ ವಯಸ್ಸಿನಲ್ಲಿ ಇಸ್ಕೂಲಂತೆ' ಎಂದು ಕಿಸಿಕಿಸಿ ಎಂದದ್ದೂ ಆಯಿತು.

"ನಮ್ಮೂರ್ನಾಗೂ ಸಂಜೆ ಇಸ್ಕೂಲ್ ಸುರುಮಾಡ್ತಾವ್ರಂತೆ. ಬೆಳ್ಗೂ, ಬೈಗೂ ದುಡ್ದು ಐರಾಣಾಗಿರೋ ರೈತಾಪಿ ಮಕ್ಳು ಸಂಜೇನಾದ್ರೂ ವೈನಾಗಿ ತಿಂದು, ಕುಡ್ದು ಮನೀಕಳ್ಳೆ ಅನ್ನಾದ್ ಬುಟ್ಟು ಇದೇನ್ ಒಸಾ ಸುಮ್ಕಾನ? ಅಕ್ಸರ ಕಲೀತಾವಂತೆ ಅಕ್ಸರಾವಾ. ಕಲ್ತೇನ್ ಉದ್ದಾರ ಆಯ್ತಾರೆ ನಾನೂ ನೋಡೇಬುಡ್ತೀನಿ" ಎಂದು ಎಗರಾಡಿದ ಲೇವಾದೇವಿ ಲಕ್ಷ್ಮಣ. ಹತ್ತು ರೂಪಾಯಿಗೆ ಹದಿಮೂರು ಅಂತ ಬರೆದುಕೊಳ್ತಿದ್ದ ಲಕ್ಷ್ಮಣನಿಗೆ ಹೊಟ್ಟೆಯಲ್ಲಿ ಮೆಣಸಿನಕಾಯಿ ಕಿವುಚಿದಂತಾಗಿತ್ತು. ಕಾಣದ ದೇವರಿಗೆ ಹಿಡಿಶಾಪ ಹಾಕುತ್ತಿದ್ದ.

ಒಂದು ಒಳ್ಳೆಯ ದಿನ ಊರ ಮುಂದಿನ ಗುಡಿಯ ಹಿಂಭಾಗದ ಸರ್ಕಾರೀ ಶಾಲೆಯ ಫಂಕ್ಷನ್ ಹಾಲಿನಲ್ಲೇ ಸಂಜೆ ಸ್ಕೂಲು ಶುರುವಾಯಿತು. ಹಿರಿಯರನ್ನು ಎಳೇ ಮಕ್ಕಳಂತೆ ಬೆಂಚಿನ ಮೇಲೆ ಕೂಡಿಸಿ ಪಾಠ ಮಾಡಲಾದೀತೇ?

ಅಂದು ಬೆಳಗ್ಗೆಯಿಂದಲೇ ಮೇಷ್ಟ್ರಮ್ಮ (ಹಾಗಂತ಼್ೇ ವಯಸ್ಕರು ಕೂಗೋಕೆ ಸುರುವಚ್ಕಂಡಿದ್ದು) ಎಲ್ಲರ ಮನೆಮನೆಗೆ ಹೋಗಿ ಸ್ಕೂಲಿಗೆ ಆಹ್ವಾನ ಕೊಟ್ಟುಬಂದಿದ್ರು.

ಸೂರ್ಯ ಇಳಿಯುವ ಹೊತ್ತಿಗೆ ಸರಿಯಾಗಿ ಇಪ್ಪತ್ತೈದು ವಯಸ್ಕರು ಸಂಭ್ರಮದಿಂದ ಶಾಲೆಗೆ ಬಂದರು. ಎಲ್ಲರ ಮುಖದಲ್ಲಿ ಆಗಲೇ ಏನೋ ಸಾಧಿಸಿದ ಕಳೆಯೂ, ಒಂದು ಬಗೆಯ ದಿಗಿಲೂ ಕಾಣುತ್ತಿತ್ತು. ಮೊದಲ ದಿನದ ಖುಷಿಯಲ್ಲಿ ಎಲ್ಲರೂ ಒಗೆದ ಬಿಳೀ ಪಂಚೆ ಷರ್ಟು ಹಾಕೊಂಡು ಬಂದಿದ್ದರು.

ಮೊದಲ ದಿನವಲ್ಲವಾ ಎಲ್ಲರೂ ದೇವಸ್ಥಾನಕ್ಕೆ ಹೋಗಿ ಶಿವಪ್ಪಂಗೆ ನಮಸ್ಕಾರ ಮಾಡಿ ಹಣೆಗೆ ವಿಭೂತಿ ಇಟ್ಟುಕೊಂಡು ಬಲಗಾಲಿಟ್ಟು ಸ್ಕೂಲಿನೊಳಗೆ ಬಂದರು. ಮೇಡಮ್ ಸೀತಾಬಾಯಿ ಎಲ್ಲರಿಗೂ ಒಂದೊಂದು ಗುಲಾಬಿ ಹೂ ಕೊಟ್ಟು ಬರಮಾಡಿಕೊಂಡರು.

ನೆಲದ ಮೇಲೆ ದೊಡ್ಡ ಜಮಖಾನವನ್ನು ಹಾಸಲಾಗಿತ್ತು. ಕರಿಯಪ್ಪ, ಕೆಂಪೇಗೌಡ, ಶಾರದಮ್ಮ, ಬಿಳೀಮೂತಿ ಸುಂದ್ರಮ್ಮ, ಸಿದ್ದಪ್ಪ, ಗುಂಡಮ್ಮ, ಗೌರೀಗೌಡ, ನಾಗರಕಟ್ಟೆ ನಂಜುಂಡಪ್ಪ, ಶಂಕರಪ್ಪ, ತಿಮ್ಮಯ್ಯ, ಕೆಂಪಜ್ಜ, ಸೋಮಶೇಖರ, ಕರೀರಾಮಯ್ಯ, ಚಿಕ್ಕೋನು, ಮೂಲೆಮನೆಮರಿ, ಗಿರೀಗೌಡ, ರಾಚಪ್ಪ, ಸುಂಕದಕಟ್ಟೆ ಗೋವಿಂದ ಎಲ್ಲರೂ ಚಕ್ಕಳಮಕ್ಕಳ ಹಾಕಿಕೊಂಡು ಕುಳಿತರು.

ದೊಡ್ಡತೊಟ್ಟಿಮನೆ ಸಿದ್ದೇಗೌಡ ಮಾತ್ರ 'ನಂಗೆ ಶಾನೆ ಮಂಡಿ ನೋವು. ನೆಲದ್ ಮ್ಯಾಕ್ ಕೂರಕ್ಕಾಯಕ್ಕಿಲ್ಲ ಮೇಡಮ್ಮೋರೆ' ಎಂದ. ಸರಿ ಸೀತಾಬಾಯಿ ಸ್ಟಾಫ್ ರೂಮಿನ ಬೀಗ ತೆಗೆದು ಒಂದು ಕುರ್ಚಿಯನ್ನು ತಂದರು. ಅದನ್ನು ನೋಡಿ ತಿಮ್ಮಯ್ಯ 'ಅವ್ವಾರೇ ನನ್ ಕರ್ದಿದ್ರೆ ನಾನೆ ತತ್ತಿದ್ದಲ್ಲಾ' ಎಂದ. ಸೀತಾಬಾಯಿ 'ಇದು ನಿಮ್ ಯಜಮಾನರ ಮನೆ ಅಲ್ಲ. ಸ್ಕೂಲು. ಇಲ್ಲಿ ನೀನು ಜವಾನಿಕೆ ಮಾಡೋದೇನು ಬೇಡ. ಚೆನ್ನಾಗಿ ಪಾಠ ಕಲಿ' ಎಂದರು. 'ಸಿದ್ದೇಗೌಡ ಕುರ್ಚಿ ಮೇಲೆ ಕೂರೋದೂ ನಾನು ಕೆಳಗಡೆ ಕೂರೋದಾ? ನಾನು ಅವನಿಗಿಂತ ಏನು ಕಮ್ಮಿ? ಅವನ ಪಕ್ಷಕ್ಕೆ ಅವನು ದೊಡ್ಡೋನಾದ್ರೆ ನನ್ ಪಕ್ಷಕ್ಕೆ ನಾನೇ ದೊಡ್ಡೋನು' ಎಂದು ಒಳಗೇ ಕುದಿದ ಕೆಂಪೇಗೌಡ.

ಮೇಷ್ಟ್ರಮ್ಮ ಎಲ್ಲರಿಗೂ 'ಮೊದಲು ವಿದ್ಯಾಧಿದೇವತೆ ಸರಸ್ವತಿಗೆ ಕೈಮುಗಿದು ವಿದ್ಯೆ ತಲೆಗೆ ಹತ್ತುವಂತೆ ಮಾಡಮ್ಮಾ ಎಂದು ಬೇಡಿಕೊಳ್ಳಿ' ಎಂದರು. ಒಂದಿಬ್ಬರು ಬಿಟ್ಟರೆ ಎಲ್ಲರೂ ದೇವರಿಗೆ 'ಸಣ್' ಮಾಡಿಕೊಂಡರು.

'ಬರೆಯುವ ಮೊದಲು ಎಲ್ಲರೂ ಬಾಯಿಪಾಠ ಕಲಿಯಿರಿ. ಇನ್ನೊಂದು ವಾರ ಬಿಟ್ಟು ಬರೆಯುವುದನ್ನು ಕಲಿಸುತ್ತೀನಿ' ಎಂದರು ಮೇಷ್ಟ್ರಮ್ಮ. ಅ ಆ ಇ ಈ ಉ ಊ ಬಾಯಿಪಾಠ ಶುರುವಾಯಿತು. ಇವೆಲ್ಲವೂ ಮಾತನಾಡಿ ಗೊತ್ತಿದ್ದರಿಂದ ಎಲ್ಲರೂ ಸುಲಭವಾಗಿ ಹೇಳಿಬಿಟ್ಟರು. ಅ ಇಂದ ಕ್ಷ ತನಕದ ಬಾಯಿಪಾಠವಾಯಿತು.

ಬೋರ್ಡಿನ ಮೇಲೆ ಅ ಆ ಇ ಈ ಎಂಬ ನಾಲ್ಕಕ್ಷರಗಳನ್ನು ಬರೆದು ತೋರಿಸಿದರು.

ಬೆಳಗ್ಗೆ ನಾಲ್ಕಕ್ಕೇ ಎದ್ದು ಕೊಟ್ಟಿಗೆ ಗುಡಿಸಿ ಹಾಲು ಕರೆದು ಕಾಪಿ ಕಾಯಿಸಿ ಎಲ್ರಿಗೂ ತಿಂಡಿ ಮಾಡ್ಕೊಟ್ಟು, ಆಳುಕಾಳುಗಳಿಗೆಲ್ಲ ಮುದ್ದೆ ಉಪ್ಪೆಸ್ರು ಮಾಡಿಕೊಟ್ಟು ಮತ್ತೆ ಸಂಜೆ ಹಾಲು ಕರೆದು, ಹೂ ಬಿಡಿಸಿ ಕಟ್ಟಿ ದೇವರ ದೀಪ ಹಚ್ಚಿ ಸ್ಕೂಲಿಗೆ ಬಂದಿದ್ದ ಗುಂಡಮ್ಮನಿಗೆ ಸ್ಕೂಲಲ್ಲಿ ಪಾಠ ಶುರುವಾದ ಕೂಡಲೇ ತೂಕಡಿಕೆ ಶುರು. ಚಿಕ್ಕವಯಸ್ಸಿನಿಂದ ಕಷ್ಟಪಟ್ಟಿದ್ದ ಸೀತಾಬಾಯಿಯವರು ಸೈಕಾಲಜಿ ಅರಿತವರು ಜೊತೆಗೆ ಮನುಷ್ಯರ ಕಷ್ಟಸುಖಗಳನ್ನೂ ಅರಿತವರು. ಅದರಲ್ಲೂ ವಯಸ್ಕರಾದ ಮೇಲೆ ಒಂದು ಕಡೆ ಕುಳಿತು ಅಕ್ಷರ ಕಲಿಯುವುದೆಂದರೆ ಸುಲಭವಲ್ಲ ಎಂಬುದನ್ನೂ ಅರಿತವರು. ಮಧ್ಯೆ 'ಎಲ್ರೂ ಸೇರಿ ಒಂದು ದೇವರ ಹಾಡನ್ನು ಹೇಳೋಣ್ವೇ?' ಎಂದು ಒಂದು ಹಾಡನ್ನೂ ಹಾಡಿಸಿದರು.

ಕೂಲಿ ಕೆಲಸದ ತಿಮ್ಮಮ್ಮನಿಗೆ ಗಂಟೆಗೊಂದು ಸಲ ಎಲೆಯಡಿಕೆ ಹಾಕಿಕೊಳ್ಳದಿದ್ದರೆ ಮೈಯೆಲ್ಲ ಕಹಿಯಾಗುತ್ತಿತ್ತು. ಮೇಷ್ಟ್ರಮ್ಮ ಯಾವಾಗ ಪಾಠ ನಿಲ್ಲಿಸುತ್ತಾರೋ ಎಂದು ತಡಬಡಿಸುತ್ತಿದ್ದಳು. ಎರಡು ದಿನ ಕಳೆಯುವುದರಲ್ಲಿ ತಿಮ್ಮಮ್ಮ

ಹಾದಿ ಕಂಡುಕೊಂಡಳು. ಕೈನ ಕೊನೇ ಬೆರಳನ್ನು ತೋರಿ ಆಗಾಗ ಹೊರಗೆ ಹೋಗಿ ಎಲೆಯಡಿಕೆ ಹಾಕಿಕೊಂಡು ಬರುತ್ತಿದ್ದಳು.

ಮೊದಲ ದಿನ ನಾಲ್ಕಕ್ಷರಗಳನ್ನು ನೋಡಿದ ಅವರೆಲ್ಲ ತಮ್ಮ ಸ್ಲೇಟಿನಲ್ಲಿ ಮೊದಲಕ್ಷರವನ್ನು ತಿದ್ದಿದರೂ ಕೂಡ. ಅಂದಿಗೆ ಪಾಠ ಮುಗಿಯಿತು. 'ನಾಳೆ ಎಲ್ಲರೂ ತಪ್ಪದೇ ಬರಬೇಕು' ಎಂದು ಸೀತಮ್ಮ ಎಲ್ಲರನ್ನೂ ಬೀಳ್ಕೊಟ್ಟರು.

ಎರಡನೇ ದಿನ ಅದೇ ಬಟ್ಟೆಗಳನ್ನು ಹಾಕಿಕೊಂಡು ಬಂದರು. ಇವತ್ತು ಕೆಂಪೇಗೌಡನೂ ತನಗೆ ಕಾಲುನೋವು ಕೆಳಗೆ ಕೂರೋಕಾಗಲ್ಲ ಎಂದು ಹೇಳಿ ಕುರ್ಚಿಯ ಮೇಲೆಯೇ ಕುಳಿತ.

ಮೊದಲ ದಿನ ಇಪ್ಪತ್ತಾರಿದ್ದ ಹಾಜರಿ ಎರಡನೇ ದಿನ ಇಪ್ಪತ್ನಾಲ್ಕಾಗಿತ್ತು. ಸೀತಮ್ಮನಿಗೆ ಇವರನ್ನು ಸೇರಿಸುವುದು ಕಪ್ಪೆಗಳನ್ನು ತಕ್ಕಡಿಗೆ ಹಾಕಿದಂತೆನ್ನುವುದು ಗೊತ್ತಾಯಿತು. ಎರಡನೇ ದಿನ ಹಿಂದಿನ ದಿನ ಬರೆಸಿದ ಅ ಅಕ್ಷರದ ಜೊತೆಗೆ ಆ ಅಕ್ಷರವನ್ನೂ ಬರೆಸಿದರು.

ಮೂರನೇ ದಿನ ಹಾಜರಿ ಇಪ್ಪತ್ಮೂರಾಯಿತು. ಎರಡನೇ ದಿನ ಬಂದಿರದಿದ್ದ ಕರೀಂಸಾಬಿ ಇವತ್ತು ಬಂದಿದ್ದ. ಸೀತಾಬಾಯಿ 'ಯಾಕೆ ಸಾಬ್ರೇ ನಿನ್ನೆ ಬಂದಿರಲಿಲ್ಲ' ಎಂದು ಕೇಳಿದ್ದಕ್ಕೆ ಕುದುರೆಗಾಡಿ ಓಡಿಸುತ್ತಿದ್ದ ಕರೀಂಸಾಬಿ 'ಮೇಷ್ಟ್ರಮ್ಮಾ ಕುದುರೆ ಟುಕುಟುಕು ಓಡಿ ಮೈಕೈ ಎಲ್ಲಾ ನೋಯ್ತಿರ್ತದೆ. ನಿನ್ನೆ ಸೊಂಟ ನೋವು ಜಾಸ್ತಿ ಆಗ್ಬುಟ್ಟಿತ್ತು ಅದ್ಕೇ ಬರ್ನಿಲ್ಲಾ' ಎಂದ. ಅವನು ಸೊಂಟ ನೋವು ಅಂದ ತಕ್ಷಣ ಶಾರದಮ್ಮನವರೂ 'ನಂಗೂ ಶಾನೆ ಸೊಂಟ ನೋವು ಅಮ್ಮೋರೆ. ಕುಂತ್ಕಳಕ್ಕೇ ಕಸ್ಟ ಆಯ್ತುದೆ' ಅಂದರು. ಒಂದು ಮಗು ಕುಯ್ ಅಂತ ಅತ್ತರೆ ಅಕ್ಕಪಕ್ಕದ ಮಕ್ಕಳು ಅಳುವ ಹಾಗೆ ಇದು ಎಂದು ಸೀತಮ್ಮನಿಗೆ ಗೊತ್ತಾಯಿತು. ಮಾತನ್ನು ಮರೆಸಲು ಒಂದು ದೇವರಸ್ತುತಿಯನ್ನು ಹೇಳಿಸಿದರು. ಬಿಳೀಮೂತಿ ಸುಂದ್ರಮ್ಮಂಗೆ ಕಾಲುನೋವು, ಜೋಸೆಫ್‌ಗೆ ಬೆನ್ನು ನೋವು ಹೀಗೆ ಎಲ್ಲರೂ ಒಂದೊಂದು ನೆಪ ಹೇಳಿ ತರಗತಿಗೆ ತಪ್ಪಿಸಿಕೊಳ್ಳುತ್ತಿದ್ದರು. ಆದರೂ ಆಕೆ ಛಲಬಿಡದ ತ್ರಿವಿಕ್ರಮೆ. ಮನೆಮನೆಗೆ ಹೋಗಿ ಮತ್ತೆ ಹೇಳಿಬರುತ್ತಿದ್ದರು.

ಕೆಲವು ಹೆಂಗಸರಿಗೆ ಪಾಠಕ್ಕಿಂತ ಮೇಷ್ಟ್ರಮ್ಮ ಹಾಕಿಕೊಂಡುಬರುವ ಸೀರೆ ಒಡವೆಗಳ ಮೇಲೆಯೇ ಗಮನ.

ಬೆಳಗ್ಗೆ ಅಷ್ಟೇನೂ ಕಾಟಕೊಡದ ಸೊಳ್ಳೆಗಳು ಸಂಜೆಯಾಗುತ್ತಿದ್ದಂತೆ ಶಾಲೆಯಲ್ಲಿ ಬಂದು ಅಲ್ಲಿ ಕುಳಿತಿದ್ದವರ ರಕ್ತ ಹೀರಲು ಕಾತರಿಸುತ್ತಿದ್ದವು. ವಿಪರೀತವಾಗುತ್ತಿದ್ದ ಸೊಳ್ಳೆಕಾಟದಿಂದ ಮೇಷ್ಟ್ರಮ್ಮ ಬರೆದಿದ್ದನ್ನು, ಬರೆಸಿದ್ದನ್ನು ಬರೆಯುವುದನ್ನು ಬಿಟ್ಟು ಚಟ್‌ಪಟ್ ಎಂದು ಸೊಳ್ಳೆ ಹೊಡೆಯುವುದು ಸಾಮಾನ್ಯವಾಗಿಬಿಡುತ್ತಿತ್ತು. ವಯಸ್ಕ ಶಿಷ್ಯರು ಸೊಳ್ಳೆ ಹೊಡೆಯುವುದರಲ್ಲಿ ತೋರುವ ಆಸಕ್ತಿಯನ್ನು ಅ ಆ ಇ ಈ ಬರೆಯುವುದರಲ್ಲಿ ತೋರುವುದಿಲ್ಲ ಎಂಬುದು ಮೇಷ್ಟ್ರಮ್ಮನಿಗೆ ಗೊತ್ತಾಗಿಬಿಡ್ತು. ಆದರೂ ಮೇಷ್ಟ್ರಮ್ಮ ನಾಲ್ಕು ತಿಂಗಳ ಸಹನೆಯಿಂದ ಅ ಆ ಇಂದ ಳ ಕ್ಷ ತನಕ ಕಲಿಸಿಯೇಬಿಟ್ಟರು. ಇನ್ನು ಕಾಗುಣಿತ ಕಲಿಸುವುದು ಎಷ್ಟು ಕಷ್ಟ ನೀವೇ ಊಹಿಸಿ.

ಒಂದು ದಿನ ಬೆಳಗ್ಗೆ ಹರಟೆಕಟ್ಟೆಯಲ್ಲಿ ಗಿರೀಗೌಡ, ರಾಚಪ್ಪ, ಸುಂಕದಕಟ್ಟೆ ಗೋವಿಂದ, ಮೂಲೆಮನೆಮರಿ, ಸೋಮಶೇಖರ, ನಾಗರಕಟ್ಟೆನಂಜುಂಡಪ್ಪ ಕುಳಿತು ಮಾತನಾಡುತ್ತಿದ್ದರು. ಹಾದಿಯಲ್ಲಿ ಹೋಗುತ್ತಿದ್ದ ಡ್ರೈವರ್ ದಿನೇಶನನ್ನು ನೋಡಿ ಸುಮ್ಮನಿರಲಾದರೆ ಗೋವಿಂದ 'ಓಯ್ ದಿನೇಶಾ ನೀನೂ ಇಸ್ಕೂಲ್ಗೆ ಬಾರ್ಲಾ. ಅ ಆ ಇ ಈ ನಾಲಕ್ಕಕ್ಸರ ಕಲ್ತಂಗಾಯ್ತುದೆ' ಅಂದ. ದಿನೇಶ 'ನಾನ್ ನಿನ್ ಥರ ಮುಕ್ಕ ಅಲ್ಲ. ನಾನು ನಿನ್ನಂಗ್ ಇಸ್ಕೂಲ್ ಅನ್ನಕ್ಕಿಲ್ಲ.

ಅದು ಸ್ಕೂಲು. ನಾನೂ ಒನ್ನೇ ಕ್ಲಾಸ್ನ ಒಂದಿನ ಓದೀವ್ನಿ. ಶಿಶುವಿಹಾರಕ್ಕೂ ಹೋಗೀವ್ನಿ. ಅ ಆ ಇ ಈ ಮಾತ್ರ ಯಾಕೆ ಎ ಬಿ ಸಿ ಡೀ ನೂ ಕಲ್ತೀವ್ನಿ. ಒಂದು ಎರ್ಡೂ ಕಲ್ತಿವ್ನಿ. ನಿಂಗೊತ್ತಿಲ್ಲ ಅಂದ್ರೆ ನಂಗೆ ಏನೂ ಬರಕ್ಕಿಲ್ಲ ಅಂತಾನಾ?' ಎಂದು ತಿರುಗುಬಾಣ ಬಿಟ್ಟ. ಇವೆಲ್ಲ ಗೊತ್ತಿಲ್ಲದ ಗೋವಿಂದ 'ಔದಾ? ಅದ್ಯಾವಾಗ ಓಗಿದ್ದೆ? ಮತ್ಯಾಕೆ ಬುಟ್ಟೆ?' ಎಂದು ಮರುಪ್ರಶ್ನೆ ಹಾಕಿದ. ಅದಕ್ಕೆ ದಿನೇಶ 'ಅದಾ? ನಾನು ಒಂದನೇ ಕ್ಲಾಸಿಗೆ ಓದ್ನಾ? ಮಧ್ಯಾಹ್ನ ನಮ್ ಮೇಷ್ಟ್ರು ಅದ್ಯಾವ ಸಿಟ್ಟಿತ್ತೋ ಅದ್ಯಾರ ಮೇಲೆ ಸಿಟ್ಟಿತ್ತೋ ಹೆಂಡ್ತೀನ ಬಡ್ಯೋ ಹಾಗೆ ನನ್ ಬಡಿದ್ಬಿಟ್ಟ. ಅವತ್ತೇ ಕೊನೆ ನಾ ಸ್ಕೂಲ್ಗೆ ಹೋಗಕ್ಕಿಲ್ಲ ಅಂತ ಹಠ ಮಾಡ್ಬುಟ್ಟೆ. ಮೇಷ್ಟ್ರು ಹೊಡೀದಿದ್ರೆ ನಾನೂ ಇಂಜಿನಿಯರ್ ಆಗ್ತಿದ್ದೆ. ಈಗ ಇಂಜಿನ್ ಮೇಲೆ ಕೂರೋ ಡ್ರೈವರ್ ಆಗಿದೀನಿ. ಏನಾಗ್ಲಿ ನಮ್ ಮೇಷ್ಟ್ರು ಚಂದಾಗಿರ್ಲಿ ಅಷ್ಟೇ. ಅದ್ನ ಆವತ್ತೇ ಹೇಳ್ಬಟ್ಟೆ. ಈವತ್ತೂ ಅದ್ನೇ ಹೇಳ್ತೇನಿ. ಆದ್ರೆ ನೋವಿಗೆ ಹೆದರಿ ನಾ ಸ್ಕೂಲು ಬಿಟ್ಟೆ. ಮೇಷ್ಟ್ರ ಮೇಲಿನ ಬೇಜಾರಿಗಲ್ಲ. ಆದದ್ದೆಲ್ಲ ಒಳ್ಳೆದಕ್ಕೇ' ಎಂದು ನಕ್ಕು ಹೊರಟ. ಗೋವಿಂದಂಗೆ ಆಶ್ಚರ್ಯ. ಅಷ್ಟು ಹೊಡೆದ್ರೂ ಅವನು ಮೇಷ್ಟ್ರನ್ನ ಅದೆಷ್ಟು ಸುಲಭವಾಗಿ ಕ್ಷಮಿಸಿಬಿಟ್ಟ. ನಾವು ಯಾರನ್ನೂ ಏಕೆ ಇಷ್ಟು ಸುಲಭವಾಗಿ ಕ್ಷಮಿಸಲಾರೆವು ಎಂಬುದು ಅವನಿಗೆ ದೊಡ್ಡ ಪ್ರಶ್ನೆಯಾಗಿಬಿಟ್ಟಿತು. ಅದನ್ನು ಗಿರೀಗೌಡ, ಮೂಲೆಮನೆಮರಿ, ಸೋಮಶೇಖರ, ನಾಗರಕಟ್ಟೆನಂಜುಂಡಪ್ಪನ ಹತ್ತಿರ ಹೇಳೂ ಬಿಟ್ಟ. ಅವರಲ್ಲಿ ಸೋಮಶೇಖರ ತುಸು ಬುದ್ಧಿವಂತ, ಪುರಾಣ ಪ್ರವಚನವನ್ನು ಕೇಳಿ ಬೆಳೆದವನು. 'ಚಿಕ್ಕ ವಯಸ್ಸಿನಲ್ಲಿ ಮುಗ್ಧವಾಗಿರುತ್ತೇವೆ. ಗುರುಹಿರಿಯರನ್ನು ಪೂರ್ತಿ ನಂಬುತ್ತೇವೆ. ಅವರು ಮಾಡಿದ್ದೆಲ್ಲ ನಮ್ಮ ಒಳ್ಳೆಯದಕ್ಕೇ ಎಂಬು ನಂಬುತ್ತೇವೆ. ಅದಕ್ಕೇ ಅವರು ತಪ್ಪು ಮಾಡಿದರೂ ಅದು ನಮಗೆ ತಪ್ಪೆನಿಸುವುದಿಲ್ಲ. ದೊಡ್ಡವರಾದ ಮೇಲೆ ನಾವು ಮಾಡಿದ್ದೇ ಸರಿ ಎಂದುಕೊಂಡುಬಿಡುತ್ತೇವೆ. ಹಾಗಾಗಿ ಬೇರೆಯವರನ್ನು ಕ್ಷಮಿಸುವುದಿಲ್ಲ. ನಮ್ಮ ತಪ್ಪನ್ನೂ ಹೇಳುವುದಿರಲಿ, ತಿದ್ದುಕೊಳ್ಳುವುದೂ ಇಲ್ಲ. ಇದೇ ನಮ್ಮ ಎಲ್ಲ ತೊಂದರೆಗಳಿಗೆ ಕಾರಣ. ಈಗ ನೋಡಿ ನಮ್ ಸೀತಮ್ಮ ಮೇಷ್ಟ್ರಿಣಿ ಎಷ್ಟು ಕಷ್ಟಪಟ್ಟರೂ ನಮಗೆ ಮನಸ್ಸಿಲ್ಲ ಅದಕ್ಕೇ ಅದು ತಲೆಗೆ ಹೋಗುವುದಿಲ್ಲ' ಎಂದ. ಎಲ್ಲರಿಗೂ ಬೆಳಕು ಮೂಡಿದಂತಾಯಿತು.

ಇದಾಗಿ ಒಂದೆರೆಡು ತಿಂಗಳಲ್ಲೇ ಅಲ್ಲಿನ ವಯಸ್ಕ ಶಿಕ್ಷಣದ ಐಕ್ಳು ಹೆಬ್ಬೆಟ್ಟು ಬಿಟ್ಟು ಸಹಿ ಮಾಡಲು ಕಲಿತೇಬಿಟ್ಟರು. ಜೊತೆಗೆ ಅಂಕಿಗಳನ್ನು ಓದಿ ತಿಳಿದುಕೊಳ್ಳುವುದನ್ನೂ. . . . .

*****

ಕಾಡು ನಾಡಿಗರರಮನೆ

– ರೇಣುಕಾ ದೇಸಾಯಿ

(1) ಇಲ್ಲೊಂದು ಪುಟ್ಟ ಪ್ರಪಂಚ
ಮಲೆನಾಡಿನ ಮಲೆಸಿರಿಯ
ಮಧ್ಯದಲಿ ಅವರ ವಾಸ
ಅವರೊಡೆಯರಿಗೆ ದಿನವೂ
ಹರ ಸಾಹಸ ಅವರನ್ನು ಹುಡುಕಿ
ತರಲದು ಮರು ಹುಟ್ಟು ಮರುಸಾವಿನಾಟ
ಜೀವದೊಂದಿಗೆ ಚೆಲ್ಲಾಟ

(2) ದಿನವೂ ಬರಬೇಕು ಇಲ್ಲಿಗೆ
ಸ್ನಾನೂಟಾದಿಗಳ ಸಮೃದ್ಧಿ ಇಲ್ಲಿದೆ
ತನ್ನೊಡೆಯನೊಡನೆ ಸರಸ ಸಲ್ಲಾಪ
ಅರ್ಧ ದಿನಕ್ಕೆ ಮರಳಬೇಕು ಕಾಡಿಗೆ
ಇದುವೇ ಅವುಗಳ ಪ್ರಲಾಪ
ಸಹಜ ಜೀವನ ಯಾರಿಗೂ ಇಲ್ಲಿಲ್ಲ
ಕ್ರೂರ ಮೃಗಗಳ ಮುಖಾಮುಖಿ ಅಲ್ಲೆಲ್ಲಾ
ಹೀಗಿದೆ ಅವರ ದಿನಚರಿ ಸುತ್ತಲಿದೆ ಹಸಿರಸಿರಿ

(3) ಇಪ್ಪತ್ತೊಂದು ಕೂಡು ಕುಟುಂಬಕ್ಕೊಂದು
ಹಸುಗೂಸು 'ಧನುಷ್' ಮೂರು ವರುಷದ ಬಾಲ
ಬಾಲ ಲೀಲೆಯಿಂದದು ಕಾಡಲ್ಲಿ ಕಣ್ಮರೆ ಕೆಳ
ಮನೆಮಂದಿಗೆಲ್ಲ ದುಃಖ ಭಯ ಆತಂಕ
ಭೀಮ ಬಲ, ಆನೆ ಛಲವಿದ್ದರೂ ಇಲ್ಲ ನಿರಾತಂಕ
ಅದೋ ಬಂದ ನೋಡಲ್ಲಿ!!! ಪುಂಡ
ಪುಟಪುಟನೆ ಹೆಜ್ಜೆ ಇಟ್ಟು ಕೃಷ್ಣನಿವನು ತುಂಟ
ಸಂತಸದ ನೋಟ ಮಾವುತನಿಗೆ
ಅವನನ್ನೆತ್ತಾಡಿಸಿದ ಮನಸುಗಳಿಗೆ

(4) ಬಂದವನೆ ಓಡಿದನು ಸ್ನಾನದ ಘಟ್ಟಕ್ಕೆ
ಧನುಷನಿವನು ಬಾಣದಂತೆ ದೊಡ್ಡವರ ಪಕ್ಕಕ್ಕೆ
ನೊಡಲದೊಂದು ಕಣ್ಮನಕೆ ಮೋಡಿ
ಅಮ್ಮನ ಬಳಯಲ್ಲಿ ಪುಟ್ಟ ಕಂದನಾ ಜೋಡಿ
ಅವರಿಗಿಹುದು ನಿಸರ್ಗದ ಮಡಿಲಲ್ಲಿ
ವಿಶಾಲವಾಗಿಹ ಹಿನ್ನೀರು ಕೊಳವಿಲ್ಲಿ
ತುಂಗೆ ಅಲ್ಲಿ ನಿಂತಿಹಳು ಶಾಂತವಾಗಿ
ಜೀವ ಜಗತ್ತಿಗೆ ಅಭಯ ನೀಡಿಹಳು ಬಾಗಿ
ಸುತ್ತಲು ಹಸಿರು ಸಂಪತ್ತು ಅವಳದೆ
ಪ್ರಕೃತಿಯ ವನಪು ವೈಯಾರ ಜೊತೆಗಿದೆ

. . . .2

– 2 –




(5) ಧನುಷ್‌ನಂತಹ ತುಂಟನಲ್ಲ ಅಪ್ಪು
ಅದೊಂದು ಎರಡು ವರುಷದ ಹಸುಗೂಸು ಪಪ್ಪು
ಅಮ್ಮನ ಸೆರಗಲ್ಲಿ ಅವಿತಿಹ ಮುದ್ದು ಬಾಲ
ಅವನೊಬ್ಬ ಎಲ್ಲರ ಪ್ರೀತಿಯ ಲೋಲ
ಅವರೆಲ್ಲರ ಪ್ರೀತಿಯ ಶಿಸ್ತಿನ ಪುಟಾಣಿ
ಅದಕೆಂದೆ ಕರೆದಿಹರು ಅಪ್ಪು.... ಅಪ್ಪು.. ..ನಮ್ಮ ಕಣ್ಮಣಿ
ಗುಣದಲ್ಲಿ ಹೋಲುವನು ಕನ್ನಡಿಗರ ಹೃದಯಗೆದ್ದ
ಅಪ್ಪು, ಅಲ್ಪ ಕಾಲದಲಿ ಮನೆಮನೆಯ ಮಾತಾಗಿದ್ದ
ಈ ಅಪ್ಪುಗಿರಲಿ ದೀರ್ಘಾಯುಷ್ಯವೆಂದರು
ಮನದುಂಬಿ ಹರಿಸಿದರು ನೋಡಬಂದವರು

(6) ಆರು ವರುಷದ ಮಗು 'ಐರಾವತ' ಲೆಕ್ಕಕ್ಕಿಲ್ಲ ಆಟಕ್ಕುಂಟು
ಹೀಗೆಂದರೆ ಅವನೊಡೆಯ ಮಂಜುನಾಥಗೆ ಸಿಟ್ಟು ಬರುವದುಂಟು
ಆಹಾ!! ಏನವನ ನೃತ್ಯ, ಬಂದವರಿಗೆ ಹಾಕುವನು ನಮಸ್ಕಾರ
ಸೊಂಡಲಿನಿಂದ ಚಿತ್ತಾರ ಬಿಡಿಸಿ ತೋರಿಸುವ ಚಮತ್ಕಾರ
ಎರಡು ಕಾಲಿನಮೇಲೆ ನಿಲಬಲ್ಲ, ಕುಣಿಯಬಲ್ಲ
ಮಾವುತನ ಆದೇಶವಿದ್ದರೆ ಲಯದ ಹೆಜ್ಜೆ ಹಾಕಬಲ್ಲ
ಅಮ್ಮನಿಲ್ಲದೆ ಬೆಳೆದು ದೊಡ್ಡದಾದ ಕಂಡವರ ಕೂಸು
ಕಾಯಿ ರುಬ್ಬಿ ತೆಗೆದ ಹಾಲು ಕುಡಿದು ಬೆಳೆದ ಶಿಶು
'ಐರಾವತ' ಮೈಸೂರು ದಸರಾ ಅಂಬಾರಿ ಹೊರುವಂತಾಗಲಿ
ಬಂದವರು ಆಶಿಸಿದರು ತಾಯಿ ಚಾಮುಂಡಿ ಹರಿಸುವಂತಾಗಲಿ

. . .3

– 3 –



ಅಮ್ಮನಿಲ್ಲದೆ ಬೆಳೆದು ದೊಡ್ಡದಾದ ಕಂಡವರ ಕೂಸು
ಕಾಯಿ ರುಬ್ಬಿ ತೆಗೆದ ಹಾಲು ಕುಡಿದು ಬೆಳೆದ ಶಿಶು
'ಐರಾವತ' ಮೈಸೂರು ದಸರಾ ಅಂಬಾರಿ ಹೊರುವಂತಾಗಲಿ
ಬಂದವರು ಆಶಿಸಿದರು ತಾಯಿ ಚಾಮುಂಡಿ ಹರಿಸುವಂತಾಗಲಿ

(7) ಮೂವತ್ತು ವರುಷದ ರಾಘವೇಂದ್ರ ಪ್ರಬುದ್ಧ, ಪ್ರಶಾಂತ
ಬಂದಿಹನು ಮಂತ್ರಾಲಯದ ಮಠದಿಂದ ವನವಿದು ಅನಂತ
ಅದಕವನಿಗೆ ಹಿಡಿಸಲಾರದ ಸಂತಸ ಸ್ವಾತಂತ್ರ್ಯ
ಭಕ್ತರು ಕೊಡುವ ಬಾಳೆಹಣ್ಣು, ಕಾಯಿಬೆಲ್ಲ ಪರತಂತ್ರ್ಯ
ಹಸಿರು ಹುಲ್ಲು, ಸ್ವಚ್ಛಂದ ಬದುಕು, ತನ್ನವರ ಸಹವಾಸ
ಅರ್ಧದಿನವಲ್ಲಿ ಇನ್ನರ್ಧ ತನ್ನೊಡೆಯ ಪಾಷಾನ ಆದೇಶ
ಬಲವಾದ ಕೋರೆ, ಬಲಿಷ್ಠ ದೇಹ ಆಕಾಶದೆತ್ತರ ಇರುವನು
ನನ್ನ ಕೋರೆ ಹಿಡಿದು ನಿಂತ ಫೋಟೋ ಬೇಕೆ ಎನ್ನುವನು
ಮೈದಡವಿ ತೋಳು ಗಾತ್ರದ ಕೋರೆ ಹಿಡಿದ
ಫೋಟೋ ಇದ್ದರೆ ಬಿಂಕಬಿಗುಮಾನ
ಮಧ್ಯದಲ್ಲಿರುವ ಮಾವುತನ ಬಿಂಬ
ಅಂಕುಶವಾಗಿ ತಿವಿದಿರೇ ಹುಸಿಯಾಯ್ತೆ ಮಾನ

(೮) ಕುಂತಿಯಿನ್ನೂ ಕಾಲು ನೀಡಿ ನೀರಲ್ಲಿ ಮಲಗಿಹಳು
ಗಜಗಾತ್ರದ ಗರ್ಭ ಹೊತ್ತು ಮುಗುಳು ನಗುತಿಹಳು
ಗಂಗೆಯೊಂದಿಗೆ ಏನೋ ಅನುಸಂಧಾನ ನಡೆಸಿಹಳು
ಗರ್ಭದಾ ಭಾರ, ಸಂತೋಷ ಸಡಗರ ಹೇಳುತಿಹಳು
ಹದಿನೆಂಟು ತಿಂಗಳ ತುಂಬು ಗರ್ಭಿಣಿ ಇವಳು

. . . 4.

– 4 –

ಇನ್ನು ಮೂರು ಮಾಸದಲಿ ಮಧ್ಯಪಾಂಡವನ ನಿರೀಕ್ಷೆಯಲ್ಲಿಹಳು
ನಾವೆಲ್ಲ ಬರಬೇಕು ಆಗ ಹರಸಿ ಹಾಡಿ ಹೆಸರಿಡಲು
ಈ ಭಾವ ಮನದಲ್ಲಿ ಮೂಡಿ ಮೈ ರೋಮಾಂಚನವಾಗಿರಲು
ನಮ್ಮ ಮನದ ಮಾತಿಗೆ ಸಾಕ್ಷಿ ಅನಂತಾಕಾಶ, ಹಚ್ಚ ಹಸಿರಿನ ವನ
ಹೋಗೋಣ ಬನ್ನಿ ಜೋಗುಳವ ಹಾಡಿ ಸಂತೋಷಪಡಲಿ ಮನ

(9) ಸೋಮಣ್ಣ, ಬಹದ್ದೂರ್, ಬಾಲಣ್ಣ ಚೆನ್ನಗಿರಿ ಕಾಡಿನವರು
ಆಹಾರವರಸಿ, ಅನುಕೂಲ ಬಯಸಿ ವಲಸೆ ಬಂದವರು
ರವಿ,ಸಾಗರ,ಕೃಷ್ಣ, ತೇಜಸ್ ರೆಲ್ಲ ಈ ಮನೆಯ ಯುವದಂಡು
ಅನಂತ ಹಸಿರಿನ ಮಡಿಲಲಿ ತನ್ನವರ ಕಾವಲು ಕಾಯುವ ಹಿಂಡು
ವನಪು ವೈಯಾರದ ನೇತ್ರಾವತಿ,ಭಾನುಮತಿ,ಅಲೆ
ಹಿಗ್ಗಿಹುದು ಸಗ್ಗದಂತೆ ಹದಿಹರೆಯದ ಸೆಲೆ
ಈ ಸುಂದರ ಸಂಸಾರ ನೋಡಲದೆಷ್ಟು ಸುಖದಸೋಪಾನ
ನಾವೆಲ್ಲ ಕಲಿಯಬೇಕು ಮೌನದಲಿ ಅವರು ಹೇಳುವ ಪಾಠವನ

(10) ಮುಗಿಲೆತ್ತರಕ್ಕೆ ನಿಂತ ಬಲರಾಮನದೇನೋ ತಕರಾರು
ಗುರ್.. .. ಎಂದು ನೋಡಿ ಮಾಡುವ ಬಂದ ಪ್ರವಾಸಿಗರ ಪೆಕರು
ಹೊಡೆದಾಟ, ಬಡಿದಾಟ ಅವನ ನಿತ್ಯ ಮಂತ್ರ
ಕಾಡು ಬಾಂಧವರಿರಲಿ, ನಾಡು ಜನರಿರಲಿ ವೈರಿಗಳೆನ್ನುವ ಕುತಂತ್ರ
ಹಾಗಾಗಿ ನಾಲ್ಕೂ ಕಾಲಿಗೂ ಸರಪಳಿಯ ವಾಸ
ಎಲ್ಲರಿಂದ ದೂರದಲಿ ಅವನ ವಾಸ ವನವಾಸ
ಘೀಳಿಡುವನು ನುಂಗಿವವನೇನೋ ಎನ್ನುವ ನೋಟ ನಮ್ಮ ನೋಡಿ
ಅವನ ಯಜಮಾನನು ಹೇಳುವನು ಅವನ ಬಳಿ ಹೋಗಬೇಡಿ
ನೋಡಿಯೆಮ್ಮ ತಿಂಗಳ ಹಿಂದಷ್ಟೇ ಕಾಡು ಮೃಗಗಳೊಂದಿಗೆ ಕಾಳಗ
ತುಂಬಿರುವೆ ಬಂಡಿಯಷ್ಟು ಅರಿಷಿಣ ಗಾಯದ ಆಳಕ

(11) ಇಪ್ಪತ್ತೂರು ವರುಷದ ಅರ್ಜುನ ಹೊರಟಿಹನು ಮುಂದೆ
ಗಜಗಾಂಭೀರ್ಯದಿಂದ ಸಾಲು ಗಜ ಮೆರವಣಿಗೆ ಹಿಂದೆ ಹಿಂದೆ
ದೊಡ್ಡವು, ಚಿಕ್ಕವು, ಮರಿಪುಟಾಣಿಗಳು ಹೊರಟುನಿಂತವು ಸಂತಸದಿ
ಅದು ಅಲ್ಲವೇ ಅವರಿಗೆ ಸಡಗರದ ಅರಮನೆ
ಅದಕಾಗಿ ಹೊರಟಿಹರು ಚಂದದಿ
ನಿಜದ ಮನೆಯಲ್ಲಿವೆ ನೂರಾರು ಸವಾಲು
ಆದರೂ ಅದರಾಕರ್ಷಣೆ ಸೂಜಿಗಲ್ಲು
ಮತ್ತೆ ನಾಳೆ ನಸುಕಿಗೆ ಬರುವೆವೆಂಬ ಅಭಯ ನಮಗೆ,
ತಮ್ಮ ಯಜಮಾನರಿಗೆ
ಇದುವೆ ಜೀವನ, ಇದರ ಮರ್ಮ ಯಾರರಿಯರು
ಇರಬೇಕು ಇದ್ದು ಜಯಿಸಬೇಕೆಂದರು ದಾಸವರೇಣ್ಯರು
ಈಜಿ ಜಯಿಸುವದೊಂದೆ ಪ್ರತಿದಿನದ ಮಂತ್ರ
ಸಕ್ಕರೆಬೈಲಿನ ಅಕ್ಕರೆಯ ಕುಟುಂಬದ ಹೊಸ ತಂತ್ರ

***

(ಶಿವಮೊಗ್ಗ ಜಿಲ್ಲೆ ಗಾಜನೂರಿನ ಸಕ್ರೆಬೈಲಿನಲ್ಲಿರುವ
ಆನೆ ಶಿಬಿರಕ್ಕೆ ಭೇಟಿ ನೀಡಿದಾಗ ಮೂಡಿಬಂದ ಕವನ)

ನೋಡಿಯೋ ಸಾಹಿತ್ಯ ದಾಸೋಹ 204

ಅಧ್ಯಕ್ಷರ ಅನಿಸಿಕೆಗಳು

– ಜೆ.ಎನ್. ಜಗನ್ನಾಥ

ಸಮನ್ವಯ ಸಮಿತಿಯ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯ 204ನೇ ಪ್ರಸ್ತುತಿಯಲ್ಲಿ ಭಾಗವಹಿಸಿರುವ ಎಲ್ಲಾ ಸಾಹಿತ್ಯಾಸಕ್ತರಿಗೂ ನಮಸ್ಕಾರಗಳು. ಈ ವೇದಿಕೆಯು ಬಹಳ ವರುಷಗಳಿಂದ ಶಿಸ್ತಿನಿಂದ, ಪ್ರೌಢತೆಯಿಂದ ಸದಸ್ಯರನ್ನು ಬೆಳೆಸುತ್ತಾ ಬಂದಿದೆ. ಸಮಿತಿಯ ಮೂಲಪುರುಷರಿಗೆ, ಅದನ್ನು ಬೆಳೆಸಿದವರಿಗೆ, ಇಂದು ಮುಂದೆ ನಿಂತು ನಡೆಸುತ್ತಿರುವವರಿಗೆ ನಾನು ಕೃತಜ್ಞ. ನಾನು ಸಂದೇಹಗಳು ಬಂದಾಗ ಎಚ್ಚೆಸ್ಕೆ ಸಂಪಾದಕತ್ವದ 'ಬ್ಯಾಂಕಿಂಗ್ ನಿಘಂಟು'ಗೆ ಶರಣು ಹೋಗುತ್ತೇನೆ.

'ಬ್ಯಾಂಕಿಂಗ್ ಲೋಕದ ಪ್ರತಿಭಾನ್ವಿತರು' ಪುಸ್ತಕದಲ್ಲಿ 28 ಸಾಧಕರನ್ನು ಶ್ರೀ ಎಂ.ಜಿ. ವೆಂಕಟೇಶ ಮೂರ್ತಿಯವರು ಪರಿಚಯಿಸಿದ್ದಾರೆ. ಅದಕ್ಕೆ ಎಷ್ಟು ಶ್ರಮವಾಗುತ್ತದೆ ಎಂಬುದು ತಿಳಿಯುತ್ತದೆ. ಅಂತಹದರಲ್ಲಿ ಈ ಬಳಗದ ಚೈತನ್ಯ ಶಕ್ತಿ ಎಚ್ಚೆಸ್ಕೆಯವರು ಸಾವಿರಕ್ಕೂ ಹೆಚ್ಚು ಸಾಧಕರನ್ನು ಪರಿಚಯಿಸಿರುವುದು ಎಷ್ಟು ಕಠಿಣ ಕಾರ್ಯ ಎಂಬುದನ್ನು ಯೋಚಿಸುವುದಕ್ಕೂ ಕಷ್ಟ. ಆ ಪ್ರಯತ್ನ ನಾವು ಮಾಡುವುದು, ಅರ್ಥವಿಲ್ಲದ ವ್ಯರ್ಥ ಪ್ರಯತ್ನವಾದೀತು.

ಈ ವೇದಿಕೆಯ ಕಾರ್ಯಕ್ರಮಕ್ಕೆ ನನ್ನನ್ನು ಅಧ್ಯಕ್ಷನಾಗು ಎಂದಾಗ ನನ್ನ ಸೌಭಾಗ್ಯ ಅನಿಸಿದ್ದು ನಿಜ. ಶ್ರೀಯುತರಾದ ಮಹಾಬಲ, ಬೆಂ.ಶ್ರೀ. ರವೀಂದ್ರ, ಶೃಂಗೇಶ್ವರ ಶರ್ಮ ಮತ್ತು ಮನೋಹಂಸರಿಂದ ಇಂದಿನ ಕಾರ್ಯಕ್ರಮ ಪ್ರಾರಂಭವಾಯಿತು. ಇನ್ನು ಮುಂದುವರಿಸೋಣ.

ಶ್ರೀಮತಿ ಸುಜಾತಾ ರವೀಶ್:

ಮೊದಲಿಗೆ ಶ್ರೀಮತಿ ಸುಜಾತಾ ರವೀಶ್‌ರವರು ಒಂದು ಗಝಲ್ ಪ್ರಸ್ತುತಪಡಿಸಿದರು. ಸನಾತನ ಪರಂಪರೆಯನ್ನು ಗೀತಾಚಾರ್ಯರ ಬೋಧನೆ, ಚರಿತೆಯ ವೈಭವದ ಜೊತೆ, 'ಸುಜಿಯ ಜೀವನದ ಅವಿಭಾಜ್ಯ ಭವ್ಯತೆಯ ಸುಸ್ವರೂಪ ನಮ್ಮ ದೇಶ' ಎಂದು ಅಂತ್ಯಗೊಳಿಸುತ್ತಾರೆ. 'ಸಾಹಿತ್ಯ ಸಿಂಧು' ಪ್ರಶಸ್ತಿ ವಿಜೇತ ಸುಜಾತಾರವರೇ, ತಮ್ಮ ಅಂತರಂಗದ ಆಲಾಪ, ಮನವೀಣೆಯ ಮೀಟು ಕವನ ಸಂಕಲನ ಪ್ರಕಟಿಸಿದ್ದೀರಿ. 75ನೆಯ ಸ್ವಾತಂತ್ರೋತ್ಸವದ ಸಮಯದಲ್ಲಿ ತಮ್ಮ ಈ ಕವನ ಬಹಳ ಪ್ರಶಸ್ತವಾಗಿದೆ. ಈ ಕವನದಿಂದ ಕಾರ್ಯಕ್ರಮ ತಾವು ಪ್ರಾರಂಭಿಸಿರುವುದು ಸಂದರ್ಭೋಚಿತ.

ಶ್ರೀ ಗಣಪತಿ ಹೆಗ್ಗಡೆ:

ಶ್ರೀ ಗಣಪತಿ ಹೆಗಡೆಯವರು 'ಅರಿಸಮಾಸ' ಲೇಖನದಲ್ಲಿ ತಿಳಿಸುವಂತೆ, ಜನ ಸಂಪರ್ಕಕ್ಕಾಗಿ ಭಾಷೆ. ಮೊದಲು ವೇದ, ವೈದ್ಯಕೀಯ ಶಾಸ್ತ್ರ, ನೀತಿಶಾಸ್ತ್ರ, ಆಡಳಿತಾತ್ಮಕವಾದ ಗ್ರಂಥಗಳು, ಧರ್ಮಶಾಸ್ತ್ರ, ಅರ್ಥಶಾಸ್ತ್ರ ಹಾಗೂ ರಸೋತ್ಪತ್ತಿಗೆ ಸಂಬಂಧಿಸಿದ ಲಕ್ಷಣ ಗ್ರಂಥಗಳು ಸಂಸ್ಕೃತದಲ್ಲಿ ಇದ್ದವು. ಸಂಸ್ಕೃತದ 'ಹರಿಃ' ಕನ್ನಡದ 'ಹರಿ' .ಎರಡು

ಸಂಸ್ಕೃತ ಪದಗಳು ಸೇರಿದಾಗ ಸಂಸ್ಕೃತ ಸಂಧಿ, ಒಂದು ಸಂಸ್ಕೃತ ಪದಕ್ಕೆ ಒಂದು ಕನ್ನಡ ಪದ ಸೇರಿದರೆ ಕನ್ನಡ ಸಂಧಿಯಾಗುತ್ತದೆ. ಆದರೆ, ಕನ್ನಡ ಪದಕ್ಕೂ ಸಂಸ್ಕೃತ ಪದಕ್ಕೂ ಸಮಾಸ ಕೂಡದು. ಇದನ್ನು ಅರಿಸಮಾಸ ಎನ್ನುತ್ತಾರೆ ಎಂದು ವಿವರಿಸಿದ್ದಾರೆ. ಆದರೆ ಇದಕ್ಕೆ ಲೋಪಗಳವೆ. ಕ್ರಿಯಾ ಸಮಾಸ, ಗಮಕ ಸಮಾಸ, ಬಿರುದಾವಳಿಗಳಿಗೆ ಅರಿಸಮಾಸ ದೋಷವಿಲ್ಲ. ಕೇಶಿರಾಜ ಬಿರುದಾವಳಿ ಮತ್ತು ಪೂರ್ವ ಕವಿಪ್ರಯೋಗ ಎರಡು ಬಿಟ್ಟು ಉಳಿದ ಕಡೆ ಅರಿಸಮಾಸ ದೋಷ ಎನ್ನುತ್ತಾನೆ.

ಇದೊಂದು ಪ್ರೌಢ ಬರಹ. ಈ ವೇದಿಕೆಯಲ್ಲಿ ವ್ಯಾಕರಣದ ಬಗ್ಗೆ, ಭಾಷೆಯ ಬಗ್ಗೆ ತಿಳಿಸಿಕೊಟ್ಟಿರುವ ವಿದ್ವಾಂಸರು ಇವರು. ಇನ್ಫೋಸಿಸ್‌ನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದಿನ ಆರ್.ಎನ್.ನಾಗರಾಜ್ ನೆನಪಿಗೆ ಬರುತ್ತಾರೆ. ಅವರ ಪಿಎಚ್‌ಡಿ ಮಂಡನೆಯಲ್ಲಿ ನಾನು ಸಹಿತ ಭಾಗಿಯಾಗಿದ್ದೆ. ಈ ಲೇಖನ ನನಗೆ ಹೊಸ ವಿಚಾರಗಳನ್ನು ತಿಳಿಸಿಕೊಟ್ಟಿದೆ. ತಾಳಮದ್ದಲೆ, ಯಕ್ಷಗಾನ, ಅಪರೂಪದ ಪುರಾಣ ಪುರುಷರ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿರುವ ಹೆಗಡೆಯವರ ಈ ಬರಹ ಬಹಳ ಉತ್ತಮವಾಗಿದೆ.

ಶ್ರೀಮತಿ ಶಾಂತಿ ವಾಸು:

ಶ್ರೀಮತಿ ಶಾಂತಿ ವಾಸುರವರು ಇಂದು 'ಶಾವಾತ್ಮ ಪದಗಳು – ಮತ್ಸರದ ಕಪಿಯಾಟ' ಪ್ರಸ್ತುತಪಡಿಸಿದ್ದಾರೆ. ನಾವು ಸಂತೋಷದಿಂದಿರಲು, ಸಹಬಾಳ್ವೆ ರೂಪಿಸಿಕೊಳ್ಳಲು, ನಾವೇ ಅನೇಕವೇಳೆ ಅಡ್ಡಿಯಾಗಿ ಬಿಡುತ್ತೇವೆ. ಎಲ್ಲಾ ಉತ್ತಮವಾಗಿ ಸಾಗುವಾಗ, ನಾನು ಎಂಬ ಪೆಡಂಭೂತ ಕಾಣಿಸಿಕೊಳ್ಳುತ್ತದೆ. ನಾನು ಎನ್ನುವುದು, ನಾನೇ ಹೆಚ್ಚು ಎನ್ನುವುದು ಮತ್ಸರ, ವೈಮನಸ್ಯ, ಅಸಂತೋಷಕ್ಕೆ ಕಾರಣವಾಗುತ್ತದೆ. ಈ ಭಾವನೆ ನಮ್ಮ ಒಳಗೆ ಇದೆ, ಇದರಿಂದ ನಮ್ಮ ರೀತಿ ಬದಲಾಗುತ್ತಿದೆ. ನಡತೆ ವ್ಯತ್ಯಯವಾಗುತ್ತಿದೆ ಎನ್ನುವ ಅರಿವು ಸಹಿತ ನಮಗೆ ಆಗುವುದಿಲ್ಲ. ಮಂಗನಂತೆ ನಾವು ವರ್ತಿಸುತ್ತೇವೆ. ಈ ಸಾರಾಂಶವೇ ಶಾಂತಿವಾಸು ತಿಳಿಸಿರುವ ಮತ್ಸರದ ಕಪಿಯಾಟ. ತುಂಬಾ ಉತ್ತಮ ಒಳ ಅರ್ಥ ತುಂಬಿರುವ ಕವನ. ನನಗೆ ಕನಕದಾಸರು ನೆನಪಾಗುತ್ತಾರೆ. ಯಾರು ಸ್ವರ್ಗಕ್ಕೆ ಹೋಗಬಹುದು ಎಂದಾಗ, ನಾನು ಹೋದರೆ ಹೋದೇನು ಎನ್ನುತ್ತಾರೆ. ದಾಸಸಾಹಿತ್ಯದಲ್ಲಿ ಹೆಚ್ಚಿನ ಗುಹ್ಯಾಗಳನ್ನು, ವಿಷಯಗಳನ್ನು ಕನಕದಾಸರು ನೀಡಿದ್ದಾರೆ. ನಾನು ಎಂಬ ಭಾವನೆ ಹೋದರೆ ಮುಕ್ತಿ ಪಥದಲ್ಲಿ ಸಾಗಬಹುದು ಎಂದು ತಿಳಿಸುತ್ತಾರೆ. ನಾನು ಎಂಬ ಅಹಂ ಹೋಗುವುದು ಬಹು ಕಠಿಣ.

ಶ್ರೀಮತಿ ಶೀಲಾ ಅರಕಲಗೂಡು:

ಶ್ರೀಮತಿ ಶೀಲಾ ಅರಕಲಗೂಡು ಒಂದು ರೀತಿ ಜ್ಞಾನದ ಗೂಡು. ಅನೇಕ ವರುಷ ರವಿ ಬೆಳಗೆರೆಯ ಪಾರ್ಥನಾ ಶಾಲೆಯ ಮುಖ್ಯಸ್ಥರಾಗಿ, ಅನೇಕ ಕವಿಗಳು, ಲೇಖಕರ ಭಾಷಣ ಏರ್ಪಡಿಸಿದ್ದಾರೆ. ಭಾಮಿನಿಯಲ್ಲಿ ಪದ್ಯಗಳು, ಕಗ್ಗದ ಮೇಲೆ ಪ್ರತಿನಿತ್ಯ ಪ್ರವಚನ, ಇವರ ಸೃಜನಶೀಲತೆ ನನಗೆ ಹೆಮ್ಮೆ. ಇವರ 'ಕ' ಪ್ರಾರಂಭ ಅಕ್ಷರದಿಂದ ನಿಘಂಟು ತೆರೆದಿಟ್ಟ ಕವನ ಎಲ್ಲೆಡೆ ಅವರ ವಿದ್ವತ್ತನ್ನು ಪಸರಿಸಿದೆ. ಇವರ ಇಂದಿನ ಪ್ರಸ್ತುತಿಯಲ್ಲಿ 'ಜಯವಾಯಿತು ಕೃಷ್ಣನ ಬೆಂಬಲದಿ, ಒಳಿತಾಯಿತು ಧರ್ಮದ ನಂಬಿಕೆಗೆ' ಎಂದು ತಿಳಿಸುತ್ತಾರೆ. ಇಂದಿನ ಇವರ ಮೊದಲ ಕವನವನ್ನು, ಎಲ್ಲರೂ 'ಶೀಲಾ ಇನ್ನೂ ಮೊದಲೇ ಕಾವ್ಯ ಪ್ರಪಂಚಕ್ಕೆ ಬರಬೇಕಿತ್ತು' ಎಂದು ತಿಳಿಸುತ್ತಿದ್ದಂತೆ ರಚಿಸಿದ್ದಾರೆ. ನನಗೆ ರನ್ನನ 'ಗದಾಯುದ್ಧ' ನೆನಪಿಗೆ ಬರುತ್ತದೆ. ಕೃಷ್ಣನು ಸಂಧಾನಕ್ಕೆ ಬಂದು ಅವಗಡಿಸಿದ ಅಹಂಕಾರ ಎಲ್ಲಿತ್ತು. ಕಾಂತೇಯರಂ ಕಾಂತಾರದೋಳ್ ತಿರ್ರನೆ ತಿರುಪಿದ ಸೊರ್ಕೀಗಳೇನಾದುವು? ಇದು ರನ್ನನ ಪ್ರಶ್ನೆ.

ಕೃಷ್ಣ ಇರುವ ಕಡೆ ವಿಜಯ, ಇದು ದುರ್ಯೋಧನನಿಗೆ ತಿಳಿಯದೆ? ವಿಧಿಲಿಖಿತ, ಭೂಭಾರ ನಿವಾರಣೆ ನಮಗೆ ಎಟುಕದ ಕಟುಸತ್ಯ. ನಾನು ಕುರುಕ್ಷೇತ್ರಕ್ಕೆ ಹೋದಾಗ ಅಲ್ಲಿಯ ಜನ ತಿಳಿಸುವ ಕಥೆ 'ಕೊಳದಲ್ಲಿ ನಿಂತು ಘಟೋದ್ಗಜನ ಮಗ ಸಮರ ನೋಡಿದ. ಆತನ ಪ್ರಕಾರ ಸುದರ್ಶನ ಚಕ್ರ ಪೂರ್ಣವ್ಯಾಪ್ತಿಯಾಗಿತ್ತು, ಎಲ್ಲಾ ಕೃಷ್ಣನ ಲೀಲೆ'.

ಶೀಲಾರವರೇ, 'ಕರುನಾಡಿನ ಮಕ್ಕಳು ನಾವು ಜಯ ಭಾರತವೆನ್ನುವ' ಎಂದು ಅಂತ್ಯಗೊಳಿಸಿದ್ದೀರ. ಉತ್ತಮ ಕವನ.

ಶ್ರೀಮತಿ ಗಿರಿಜಾ ರಾಜ್:

ಶ್ರೀಮತಿ ಗಿರಿಜಾ ರಾಜ್ ಮೇಧಾವಿ ಕನ್ನಡ ಉಪನ್ಯಾಸಕರು, ವಿದ್ವಾಂಸರು. ಅನೇಕ ಪ್ರೌಢ ಲೇಖನಗಳನ್ನು ನೀಡಿರುವ ತಾವು ಈ ಬಾರಿ ಹಾಸ್ಯ ಪ್ರಸಂಗವೊಂದನ್ನು ಪ್ರಸ್ತುತಪಡಿಸಿರುವಿರಿ. ಕನ್ನಡ ಸಾಹಿತ್ಯದಲ್ಲಿ ಬೀಚಿ, ರಾಶಿ, ಕೈಲಾಸಂ ಹಾಸ್ಯದ ಹೊನಲು ಉಕ್ಕಿಸಿದ್ದರೆ, ಇನ್ನೂ ಅನೇಕ ಕವಿಗಳು ಹಾಸ್ಯ ಕವನಗಳನ್ನು ನೀಡಿದ್ದಾರೆ. ನಿಸಾರ್ ಅಹಮದರ 'ಅಮ್ಮ ಆಚಾರ ನಾನು' ಕವನದಲ್ಲಿ ಹುಡುಗಿಯನ್ನು ಹುಡುಕುವ ಬಗ್ಗೆ ಬಹಳ ರಸವತ್ತಾಗಿ ತಿಳಿಸಿದ್ದಾರೆ.

ಗಿರಿಜಾ ರಾಜ್ ಅವರು ಈ ಲೇಖನದಲ್ಲಿ ಪರೀಕ್ಷೆಯ ನಂತರ ಮೌಲ್ಯಮಾಪನ ಮಾಡುವಾಗ ಎಲ್ಲರಿಗೂ ಬೇಸಿಗೆಯಲ್ಲಿ ಗಂಭೀರ ವಾತಾವರಣ, ರಜೆ ಇಲ್ಲದೆ ಮುಂದುವರಿಸುವ ಸಮಯದಲ್ಲಿ ವಿನೋದಮಯ ಉತ್ತರಗಳಿಂದ ಹಾಸ್ಯ ಸನ್ನಿವೇಶಗಳು ಕೆಲಹೊತ್ತಾದರೂ ತುಟಿಗಳಲ್ಲಿ ನಗೆ ಅರಳಿಸುತ್ತಿದ್ದವು. ಅಂತಹ ಒಂದು ಮೌಲ್ಯಮಾಪನ ಪ್ರಸಂಗವನ್ನು ಪ್ರಸ್ತುತಪಡಿಸಿದ್ದಾರೆ. ಈ ಹಾಸ್ಯ ಪ್ರಸಂಗ ನಮ್ಮ ಇಂದಿನ ಸಭೆಯನ್ನು ತಿಳಿಗೊಳಿಸಿದೆ.

ಶ್ರೀಮತಿ ನಾಗರತ್ನ ಚಂದ್ರಶೇಖರ್:

ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರ ಪ್ರಸ್ತುತಿ 'ಸಾಯುವುದು ಬೇಕಾ ಬೇಡವಾ? ನೀವೇ ಹೇಳಿ' ಎಂಬ ನಗೆಲೇಖನ. 'ಹುಟ್ಟು ಆಕ್ಸಿಡೆಂಟಲ್, ಸಾವು ಖಂಡಿತ' ಎಂದು ವೈ.ವಿ.ಗುಂಡೂರಾವ್ ಒಂದು ಭಾಷಣದಲ್ಲಿ ಹೇಳಿದ್ದರು. ಕರ್ಮಸಿದ್ಧಾಂತ ನಂಬುವವರಿಗೆ, ಯಾವುದೂ ಕಾಕತಾಳೀಯ, ಆಕಸ್ಮಿಕ ಅಲ್ಲ. ನಾಗರತ್ನರ ಪ್ರಕಾರ ಸಾವು ಅಗತ್ಯ, ಅವಶ್ಯಕ ಎಂದು ತಿಳಿದಾಗ ಸಾಯುವುದೋ ಬೇಡವೋ ತಿಳಿಯುವುದು ಕಷ್ಟ. ರೋಗಿ ಸಾವು ಮುಂದೂಡಿದರೆ ಆಸ್ಪತ್ರೆಗೆ ಲಾಭ. ರೋಗಿಯ ಬಂಧುಗಳಿಗೆ ಎದೆಯಲ್ಲಿ ಖರ್ಚಿನ ಢವಢವ. ನಾಗರತ್ನರವರು ಸಾವು ನಿರ್ಧರಿಸುವುದು ವೈದ್ಯರು, ಯಮಧರ್ಮ ಎಂದು ಅಂತ್ಯಗೊಳಿಸಿದ್ದಾರೆ. 13 ಪುಸ್ತಕಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ನಾಗರತ್ನ, ನನಗೆ ಟಿ.ಸುನಂದಮ್ಮ ಅವರನ್ನು ನೆನಪಿಸಿಕೊಳ್ಳುವಂತೆ ಮಾಡಿದ್ದಾರೆ. ಮಾ.ಭಿ.ಶೇ., ನರಸಿಂಹಮೂರ್ತಿ ಮತ್ತು ಸುನಂದಮ್ಮ, ನಮ್ಮ ಕಾಲೇಜು ದಿನಗಳಲ್ಲಿ 'ಸುಧಾ' ವಾರಪತ್ರಿಕೆಯ ಆಕರ್ಷಣೆ. ತಿಳಿಹಾಸ್ಯ, ಮೊನಚು, ಹಾಸ್ಯಮಿಶ್ರಣದ ಈ ಬರಹ ಉಲ್ಲಾಸ ನೀಡುತ್ತದೆ.

ಶ್ರೀಮತಿ ಜಿ.ವಿ. ನಿರ್ಮಲ:

ಸ್ವಾತಂತ್ರ್ಯದ ಅಮೃತೋತ್ಸವದ ಸಂಭ್ರಮದ ದಿನಗಳಲ್ಲಿ ಶ್ರೀಮತಿ ಜಿ.ವಿ.ನಿರ್ಮಲ ಭಾರತದ ಉಕ್ಕಿನ ಮನುಷ್ಯ ವಲ್ಲಭಭಾಯ್ ಪಟೇಲ್‌ಗೆ ಗೌರವ ಸಲ್ಲಿಸಲೆಂದೇ ತಮ್ಮ ಕೆವಾಡಿಯಾ ಪ್ರವಾಸದ ವಿವರ ನೀಡಿದ್ದಾರೆ. ಪ್ರತಿಮೆಯ ಮುಖಭಾವ, ನಿಲುವು, ಭಂಗಿ, ವಲ್ಲಭಭಾಯ್ ಪಟೇಲರ ಗಾಂಭೀರ್ಯ, ನಂಬಿಕೆ ಮತ್ತು ಕಬ್ಬಿಣದಂತಹ ಮನಸ್ಥೈರ್ಯವನ್ನು ಹೊರಸೂಸುತ್ತದೆ.

ನಿರ್ಮಲಾರವರು ತಮ್ಮ ಪ್ರಸ್ತುತಿಯಲ್ಲಿ ಪ್ರವಾಸದ ಸಮಯ, ಅನುಕೂಲ, ವಸತಿಸ್ಥಳದ ವಿಚಾರ ಮುಂತಾದುವುಗಳನ್ನು ವಿವರವಾಗಿ ನೀಡಿದ್ದಾರೆ. ಈ ಲೇಖನ ಎಲ್ಲರಿಗೂ ಉಪಯುಕ್ತವಾಗಿದೆ. ನನಗೂ ಒಮ್ಮೆ ಈ ಸ್ಥಳಕ್ಕೆ ಹೋಗಬೇಕೆಂಬ ಆಸೆಯಾಗಿದೆ. ಓರ್ವ ವಿಜ್ಞಾನಿಯಾದ ನಿರ್ಮಲ ಅವರು ವಿಜ್ಞಾನದ ವಿಚಾರವಾಗಿ ನೀಡಿರುವ ಅಮೋಘ ಲೇಖನಗಳ ಜೊತೆಗೆ ಪ್ರವಾಸ ಕಥನ ಹಂಚಿಕೊಂಡಿರುವುದು ಸಂತಸವಾಗುತ್ತದೆ

ಶ್ರೀ ವಿಠ್ಠಲ್ ಇಜೇರಿ:

ಶನಿವಾರ, ಭಾನುವಾರ ರಾಮಕೃಷ್ಣಾಶ್ರಮದಲ್ಲಿ ಸೇವೆ ಸಲ್ಲಿಸುವ ಶ್ರೀ ವಿಠ್ಠಲ್ ಇಜೇರಿಯವರು ಚಿರಯೌವ್ವನದ ಮಹಾನುಭಾವ. ಡಿಸೆಂಬರ್ 2020ರಿಂದ, ಪ್ರತಿ ದಾಸೋಹದಲ್ಲಿ 'ಕಥಾ ಪ್ರಪಂಚ' ಪರಿಚಯ ಮಾಡುತ್ತಾ ಬಂದಿದ್ದಾರೆ. ವಡ್ಡಾರಾಧನೆ, ಜೈನ ಕಥೆಗಳು, ಪಂಚತಂತ್ರ, ಜಾತಕ ಕಥೆಗಳು, ಈಸೋಪನ ನೀತಿಕಥೆಗಳು, ಖಲೀಲ್ ಗಿಬ್ರಾನ್, ಚಂದಮಾಮ, ಮುಲ್ಲಾ ನಸರುದ್ದೀನ್, ಆಧುನಿಕ ಕಥೆಗಳು ಹೀಗೆ ಕಥಾ ಪ್ರಪಂಚವನ್ನೇ ಸುತ್ತು ಹಾಕಿದ್ದಾರೆ. ಇವರ ಲೇಖನ ಸದ್ವರ್ತನೆ ಮತ್ತು ಮನರಂಜನೆಗಳ ಸಮ್ಮಿಶ್ರ. ಈ ಬಾರಿ ಝೆನ್ ಕಥೆಗಳ ಸ್ವರೂಪ ಮತ್ತು ಉದಾಹರಣೆಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ವೇದಿಕೆಯಲ್ಲಿ ನಾನು ಇವರಿಂದ ಕಥೆಗಳ ಬಗ್ಗೆ ಸಾಕಷ್ಟು ಅರಿತುಕೊಂಡೆ. ಇಂದು ಪ್ರಸ್ತುತಪಡಿಸಿದ ಝೆನ್ ಕಥೆ ಎಂದರೆ ಧ್ಯಾನ ಮೌನ ಎಂದು ಅರ್ಥ. ಪುಟ್ಟ ಕಥೆಯಾದರೂ ಮಿಂಚನ್ನು ಅಡಗಿಸಿಟ್ಟು ಸಾರ್ಥಕತೆ ತೋರುತ್ತದೆ. ಇಲ್ಲದಿರುವುದೇ ಒಂದು ಶಕ್ತಿಯಾಗಬಲ್ಲದು. ಬಲಗೈ ಹಿಡಿದರೆ ತೊಂದರೆ. ಆ ಕೈ ಇಲ್ಲದಿರುವುದೇ ಶಕ್ತಿ. ಅಚ್ಚರಿ ತರಿಸುವ ಸುಂದರ ಕಥೆ. ಸರಳವಾಗಿ ನಿರೂಪಿಸಿ, ಅರ್ಥವತ್ತಾಗಿ ವಿಠಲರು ಚಿತ್ರಿಸಿದ್ದಾರೆ.

ಶ್ರೀ ರೇಣುಕಾ ದೇಸಾಯಿ:

ರೇಣುಕಾ ದೇಸಾಯಿಯವರು ಸದಾ ಹಸನ್ಮುಖಿ. ಯಾವಾಗಲೂ ಯಾವುದಾದರೊಂದು ಕಾರ್ಯಕ್ರಮದಲ್ಲಿ ತೊಡಗಿಕೊಂಡಿರುವವರು. ಇವರು ಇಂದು ಪ್ರಸ್ತುತಪಡಿಸಿದ 'ಕಾಡು ನಾಡಿಗರರಮನೆ' ನೀಳ್ಗವನ ಮಲೆನಾಡಿನ ಸಕ್ಕರೆ ಬೈಲಿನಲ್ಲಿ ವಾಸಿಸುವ 21 ಕೂಡುಕುಟುಂಬದ ಜೀವನ ಸಾರ್ಥಕತೆಗೆ ಸಂಬಂಧಿಸಿದ್ದು. ಒಂದೊಂದೇ ಆನೆಯ ಹೆಸರು ತಿಳಿಸುತ್ತಾ ಸಾಗುವ ಕವನ. ಕುಂತಿ ಇನ್ನೂ ಕಾಲುನೀಡಿ ನೀರಲ್ಲಿ ಮಲಗಿಹಳು. ಗಜಗಾತ್ರದ ಗರ್ಭ ಹೊತ್ತು ಮುಗುಳು ನಗುತಿಹಳು. ಇದು ಇವರ ಚಂದದ ಸಾಲುಗಳು. ಲಾಲಿತ್ಯವಾಗಿ ಮೂಡಿಬಂದಿರುವ ಕವನ. ಆನೆಗಳು ಕರ್ನಾಟಕದ ದಸರಾ ಹಬ್ಬಕ್ಕೆ ಮೆರಗು. ಆನೆಗಳ ಹಿಂಡು ನೋಡುವುದೇ ಒಂದು ಸಂತಸ. ರೇಣುಕಾರವರ ಕವನ ಸಾರ್ಥಕವಾಗಿದೆ.

ಶ್ರೀಮತಿ ಶುಭಶ್ರೀ ಪ್ರಸಾದ್:

ಸಾಧಕರ ಸಾಲಿನಲ್ಲಿ ಸೇರುವ ಶ್ರೀಮತಿ ಶುಭಶ್ರೀ, ಕನ್ನಡದಲ್ಲಿ ಪಿಎಚ್‌ಡಿ ಮಾಡಿದವರು. ಶ್ರೀ ಭೈರಪ್ಪನವರನ್ನು ಸಂದರ್ಶಿಸಿರುವ ಅದೃಷ್ಟವಂತೆ. ಅನೇಕ ಕಾರ್ಯಕ್ರಮಗಳಿಗೆ ರಂಗದ ಮೇಲೆ ಏರುವ ಸಾಮರ್ಥ್ಯ ಉಳ್ಳವರು. 'ದೊಡ್ಡ ಐಕ್ಳು ಅ ಆ ಇ ಈ ಕಲ್ತಿದ್ದು' ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಅಕ್ಷರ ಎಂದರೆ ನಾಶವಿಲ್ಲದ್ದು. ಓದಲು ಬಾರದವರು ಶೋಷಣೆಗೆ, ದಬ್ಬಾಳಿಕೆಗೆ ಒಳಗಾಗುತ್ತಾರೆ. ಈ ಸಮಾಜದಲ್ಲಿ ಎಲ್ಲರಿಗೂ ವಿದ್ಯೆ ದೊರೆಯಬೇಕು. ಚಿಕ್ಕ ವಯಸ್ಸಿನಲ್ಲಿ ವಿದ್ಯೆ ದೊರಕದವರು, ಸಂಜೆ ಶಾಲೆಯಲ್ಲಿ ಅಥವಾ ಸಾಕ್ಷರತಾ ಕಲಿಕಾ ಕಾರ್ಯಕ್ರಮದಲ್ಲಿ ವಿದ್ಯೆ ಕಲಿಯಬಹುದು ಎಂಬುದು ಈ ಲೇಖನದ ಉದ್ದೇಶ.

ಕೆಲವರು ದೇವಸ್ಥಾನಕ್ಕೆ ಹೋಗಿ ಶಿವಪ್ಪನಿಗೆ ನಮಸ್ಕಾರ ಮಾಡಿ ಹಣೆಗೆ ವಿಭೂತಿ ಇಟ್ಟುಕೊಂಡು ಬಲಗಾಲಿಟ್ಟು ಸ್ಕೂಲಿಗೆ ಬಂದರು. ತಿಮ್ಮಯ್ಯ ತಾನೇ ಕುರ್ಚಿ ತರುತ್ತಿದ್ದೆ ಎಂದುದಕ್ಕೆ ಸೀತಾಬಾಯಿ, ನಿಮ್ಮೆಜಮಾನ್ರ ಮನೆ ಅಲ್ಲ ಎನ್ನುವುದು ಲೇಖನಕ್ಕೆ ಸರಳತೆಯ ಹೊದಿಕೆ ಹೊದಿಸುತ್ತದೆ. ಒಟ್ಟಿನಲ್ಲಿ ಹೆಬ್ಬೆಟ್ಟು ಒತ್ತುವ ಬದಲು ಸಹಿ ಮಾಡಲು ಕಲಿತರು ಮತ್ತು ಅಂಕೆ ತಿಳಿದುಕೊಳ್ಳುವ ಮಟ್ಟಕ್ಕೆ ಬಂದ ಹಳ್ಳಿಗರ ಬಗ್ಗೆ ಸಂತಸ ಮೂಡುತ್ತದೆ. ಮಂಡ್ಯ ಸುತ್ತಮುತ್ತ ಬ್ಯಾಂಕಿನಲ್ಲಿ ನಾನು ಐದು ವರುಷ ಕೆಲಸ ಮಾಡಿದ್ದೇನೆ. ಮಂಡ್ಯದ ಶುಭಶ್ರೀ ತಿಳಿಸಿರುವ ವಿಚಾರಗಳು ಅಲ್ಲಿಯ ನಿಜ ಜೀವನವನ್ನು ಪ್ರತಿಬಿಂಬಿಸುತ್ತವೆ.

ಶ್ರೀ ಶ್ರೀಧರ ಬಾಣಾವರ:

ನಾನು ಬ್ಯಾಂಕಿನಲ್ಲಿ ಇದ್ದಾಗ ಕಂಪ್ಯೂಟರ್ ಬಗ್ಗೆ, ತಂತ್ರಜ್ಞಾನದ ಬಗ್ಗೆ ಸಂಶಯ ಬಂದಾಗ ಅಥವಾ ಯಾವುದಾದರೂ ವಿಚಾರ ಬೇಕಾದರೆ ನಮಗೆ ಅತ್ಯುತ್ತಮ ವಿವರ ನೀಡುತ್ತಿದ್ದವರು ಶ್ರೀ ಶ್ರೀಧರ ಬಾಣಾವರ. ಶ್ರೀಧರ್‌ರವರ ಬರಹಗಳು ತಂತ್ರಜ್ಞಾನದ ಬಗ್ಗೆ ಅನೇಕ. ಇಂದು ಅವರು ಆರಿಸಿಕೊಂಡಿರುವ ವಿಚಾರ ಬಹಳ ಮಹತ್ವದ್ದು. 1997ರಲ್ಲಿ ಸ್ವಾತಂತ್ರ ಬಂದು 50 ವರ್ಷವಾಗಿತ್ತು. ಕಲ್ಕತ್ತಾದಲ್ಲಿ ಹೊರನಾಡ ಕನ್ನಡಿಗನಾಗಿ ಕನ್ನಡಿಗರೊಡನೆ ಕಲೆತು, ಆಚರಿಸಿದ ಸಂಭ್ರಮ ಬಹಳ ಆಸಕ್ತಿ ಮೂಡುವಂತೆ ಹಂಚಿಕೊಂಡಿದ್ದಾರೆ . 1988ರಲ್ಲಿ ರತ್ನಮಾಲಾ ಪ್ರಕಾಶ್, ಬಿ. ಆರ್.ಛಾಯಾ, ಮಾಲತಿ ಶರ್ಮಾ, ಶಿವಮೊಗ್ಗ ಸುಬ್ಬಣ್ಣ ಮುಂತಾದವರನ್ನು ಸೇರಿಸಿ ಮೈಸೂರು ಬ್ಯಾಂಕು ಹೊರತಂದಿದ್ದ "ವಿಜಯೋತ್ಸವ" ಎಂಬ ದೇಶಭಕ್ತಿ ಗೀತೆಗಳ ಧ್ವನಿಸುರಳಿ ಉಪಯೋಗಕ್ಕೆ ಬಂದ ಬಗ್ಗೆ ವಿವರಿಸಿದ್ದಾರೆ. ಮನಸಿದ್ದರೆ ಮಾರ್ಗ ಎಂಬಂತೆ ಸೌಕರ್ಯಗಳು, ಯೂಟ್ಯೂಬ್ ಇಲ್ಲದ ಕಾಲದಲ್ಲಿ ಕಲ್ಕತ್ತಾದ ರವೀಂದ್ರ ಕಲಾ ಸದನದಲ್ಲಿ ಕನ್ನಡಿಗರು ನೀಡಿದ ಕಾರ್ಯಕ್ರಮ, ಅದರಲ್ಲಿ ತನ್ನ ಪಾತ್ರ ಅವರ ನೆನಪಿನಾಳದಿಂದ ತೆಗೆದು ನಮ್ಮೊಡನೆ ಹಂಚಿಕೊಂಡಿದ್ದಾರೆ. 75ನೇ ಸ್ವಾತಂತ್ರ ದಿನಾಚರಣೆಯ ಸಮಯದಲ್ಲಿ ಈ ನೆನಪು ಬಹಳ ಮಾನ್ಯವಾಗಿದೆ.

ಮನೋಹಂಸ:

'ವಾಸಿಸುವ ಮನೆಗೆ ಒಳ ಭದ್ರತೆಗೆ ಗೋಡೆ. ಕಾರಾಗೃಹಕ್ಕೂ ಹೊರಭದ್ರತೆಗೆ ಗೋಡೆ' ಎಂದು ಮನೋಹಂಸ ತಮ್ಮ ಕವನ 'ಗೋಡೆ'ಯನ್ನು ಮನೋಹರವಾಗಿ ಪ್ರಾರಂಭಿಸಿದ್ದಾರೆ. ಕುಟುಂಬ, ಸಂಚು, ಮನೆ ಮನೆ, ನೆನಪಿಗೆ, ಸ್ವಾತಂತ್ರ ಅಡ್ಡಿಗೆ, ಕಾರಾಗೃಹಕ್ಕೆ ಎಲ್ಲೆಡೆಯು ಗೋಡೆ. ಆದರೆ ಮನದ ಗೋಡೆ ಸುಭದ್ರ. ಮನದ ಗೋಡೆಗಳು – ಮನಸು, ನಮ್ಮ ಸಂತಸ, ಹಿತಸಂಬಂಧ ತೊಂದರೆಗೆ ಸಿಲುಕುವುದೇ ಈ ಗೋಡೆಯಿಂದ. ಗೋಡೆ ಮನದಲ್ಲಿಲ್ಲದಿದ್ದರೆ ಸಂಬಂಧ ಉತ್ತಮಗೊಳ್ಳುತ್ತದೆ 'ಮನೋಹಂಸ' ಕಾವ್ಯನಾಮದ ಕವಿತೆ ಅರ್ಥಪೂರ್ಣವಾಗಿದೆ.

ಇದೇ ವೇಳೆ ಕಾರ್ಯಕ್ರಮದ ಆರಂಭದಲ್ಲಿ ಮನೋಹಂಸರು ಹಾಡಿದ 'ಜಯತಿ ಜಯತಿ ಗಾಯನ' ಆಕರ್ಷಕವಾಗಿತ್ತು. ಸಕಲ ಜೀವ ಸಮತಾ, ಇಂದಿಗೆ ಬಹಳ ಆವಶ್ಯಕ. ಸ್ವಾತಂತ್ರೋತ್ಸವಕ್ಕೆ ಬಹಳ ಸನಿಹ.

ಶ್ರೀ ಮನೋಹರ ಗೋಖಲೆ:

ಶ್ರೀ ಮನೋಹರ ಗೋಖಲೆಯವರು ಸ್ವಾತಂತ್ರ್ಯವೀರ ಸಾವರ್ಕರ್ ವಿರಚಿತ ಮೂರು ದೇಶಭಕ್ತಿ ಗೀತೆಗಳನ್ನು ಅನುವಾದಿಸಿದ್ದಾರೆ. ಉಜ್ವಲ, ಭವ್ಯಭವಿಷ್ಯ, ಐಕ್ಯತೆ, ಸಮಾನತೆ ಇವುಗಳ ಬಗ್ಗೆ ತಿಳಿಸುತ್ತಾರೆ. ಸಾವರ್ಕರ್ ಅಂಡಮಾನ್ ಜೈಲಿನಲ್ಲಿದ್ದ ಜಾಗ ನೋಡಿದರೆ ಈ ಕನಸುಗಳು ಸಾಧ್ಯವೇ ಎನಿಸುತ್ತದೆ. ಅವರ ಶಸ್ತ್ರ ಗೀತೆ, ರಾಷ್ಟ್ರ

ರಕ್ಷಣೆಗೆ, ಶಸ್ತ್ರ ಮಾನ್ಯ, ಸರ್ವ ಧರ್ಮ ಸೂತ್ರ ಎನ್ನುತ್ತಾರೆ. ಇವರ ಪದಗಳು ಬಹಳ ಶಕ್ತಿಯುತವಾಗಿದೆ. ಸ್ವದೇಶ, ಸ್ವಧರ್ಮ, ರಕ್ಷಣೆಗೆ ಸ್ವಯಂ ಶಿಸ್ತು ಭೂಷಣ. ಹೊಸ ಪೀಳಿಗೆಗೆ ಹೊಸ ರಕ್ತಕ್ಕೆ ಸಿಗಬೇಕು ಸಮರ ಶಿಕ್ಷಣ ಎಂದು ಅನುವಾದಿಸಿದ್ದಾರೆ. ಸ್ವಾತಂತ್ರದ 75ನೇ ವರುಷಕ್ಕೆ ಇನ್ನೆರಡು ದಿನವಿರುವಾಗ ಈ ಕವನ ಸಮಯೋಚಿತ ಎನಿಸುತ್ತದೆ. 'ಶಿಶಿರ ನನ್ನೂರು ನೆನಪು ನೂರಾರು' ಪುಸ್ತಕ ಪ್ರಕಟಿಸಿರುವ ಇವರು ಮೈಸೂರು ಬ್ಯಾಂಕಿನ ಕನ್ನಡ ಬಳಗದ ಆಸ್ತಿ.

ಶ್ರೀ ಎಂ ಆರ್ ರಘುನಾಥ್:

ಶ್ರೀ ರಘುನಾಥರು ಋತುಗಳ ಪಾತ್ರಗಳು ಕವನ ಪ್ರಸ್ತುತಪಡಿಸಿದ್ದಾರೆ. ಶಿಶಿರ ಒಬ್ಬ ಕ್ಷೌರಿಕ. ತರುಗಳಲ್ಲಿದ್ದ ಹಸಿರೆಲೆಗಳ ತರಗೆಲೆಗಳ ಮಾಡಿ ಉದುರಿಸಿದ ಎಂಬುದು ಒಂದು ಉತ್ತಮ ಕಲ್ಪನೆ. ವಸಂತ ಋತು ಹೊಸ ಚಿಗುರು ನೀಡಿ ಜೀವ ತುಂಬುತ್ತದೆ. ಗ್ರೀಷ್ಮಾ ಮೋಡಗಳನ್ನು ಆಟವಾಡಿಸಿ ಕೊಂಡೊಯ್ಯುತ್ತದೆ. ವರ್ಷ ಮಳೆಯ ಸುರಿಸಿದ, ಶರತ ಶಕ್ತಿ ಭಕ್ತಿ ಪ್ರತೀಕ, ಹೇಮಂತ ಜನರ ಕೂರಿಸಿ, ಗುಡಿಸಿ. ಮಲಗಿಸಿದ. ಅಂತೂ ಸರದಿಯಂತೆ ಬರುವ ಋತುಗಳು ಭೂಮಿಯ ಜೀವರಾಶಿಗೆಲ್ಲ ಸಮತೋಲನ ಕಾಯುತ್ತದೆ. ವಿವಿಧ ಋತುಗಳು ವಿವಿಧ ಕಾರ್ಯಗಳಲ್ಲಿ ತೊಡಗಿ ಜನರ ಜೀವನಕ್ಕೆ ಬದಲಾವಣೆಗಳನ್ನು ಮತ್ತು ಅವಶ್ಯಕತೆಗಳನ್ನು ನೀಡುತ್ತದೆ. ಈ ಋತುಗಳು ಚಕ್ರದಂತೆ ಮತ್ತೆ ಮತ್ತೆ ಬರುತ್ತದೆ ರಘುನಾಥರ ಕವನ ಬಹಳ ಆಕರ್ಷಕವಾಗಿದೆ.

ಶ್ರೀ ಕೆ.ಎನ್. ಮಹಾಬಲ:

ಶ್ರೀ ಮಹಾಬಲರು ತಮ್ಮ 'ಅಪ್ಪುಗೆ' ಕವನದಲ್ಲಿ ಎರಡು ವರುಷ ಕಳಚಿ ಹೋಗಿದ್ದ ಸಾಮೀಪ್ಯ ಮರಳಿ ಬಂದಿದೆ ಎನ್ನುತ್ತಾ, ನಾವು ಮಾಡಿದ ತಪ್ಪುಗಳು ನಮ್ಮನ್ನು ಕಾಡುತ್ತವೆ. ಎಲ್ಲರೂ ತಪ್ಪಿತಸ್ಥರೇ. ಆದರೆ ಎಲ್ಲ ಮರೆತು ನಾವು ಹೊಸ ಸಮಯ, ಜೀವನ ಆರಂಭಿಸಬಹುದು ಎಂದು ಅರ್ಥವತ್ತಾಗಿ ತಿಳಿಸುತ್ತಾರೆ. ಜೊತೆಯಲ್ಲಿ ಸಾಗಿದರೆ ಜೀವನ, ಎಂಬ ನಿತ್ಯ ಸತ್ಯ ಎಂದು ತಮ್ಮ ಕವನದಲ್ಲಿ ವಿವರಿಸುತ್ತಾರೆ. ಕೆ.ಎಸ್.ನರಸಿಂಹಸ್ವಾಮಿ ಕನ್ನಡ ಸಾಹಿತ್ಯ ಲೋಕದ ಬಹಳ ಗೌರವಾನ್ವಿತ ರಸಿಕರು. ಅವರ ರಾಯರು ಬಂದರು ಮಾವನ ಮನೆಗೆ, ನನಗೂ ನನ್ನ ನಾದಿನಿ ಹೇಳಿದ್ದಳು. ಅವರ ಕವನಗಳಿಗೆ ಸ್ವಾತಂತ್ರ ಸಂಗ್ರಾಮದ ಕಥೆ ಹೆಣೆದ 'ಮೈಸೂರ ಮಲ್ಲಿಗೆ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆಯಿತು. ಅಂತಹವರ ಮಗ ರಕ್ತಗತವಾಗಿ ಸಾಹಿತಿ. 'ಜಗನ್ನಾಥ್, ದಾಸೋಹದ ಅಧ್ಯಕ್ಷರಾಗಿ' ಎಂದಾಗ ನನಗೆ ದಿಗಿಲಾಯಿತು. ಮಹಾಬಲರು ಎಲ್ಲ ತಿಳಿಸಿದ ಮೇಲೆ ಒಪ್ಪಿಕೊಂಡೆ. ಈ ಸಮನ್ವಯ ಸಮಿತಿ ಧೀಮಂತರ, ಪ್ರಖ್ಯಾತರ, ಸಾಧಕರ ತಾಣವಾಗಿ ಬಿಟ್ಟಿದೆ. ಈ ಗುಂಪಿನ ನಿರ್ಮಾಣ, ಶಿಸ್ತು ಶ್ಲಾಘನೀಯ. ಮಹಾಬಲರೆ, ತಮ್ಮ ಕಾರ್ಯಗಳಂತೆ ಕವನವೂ ಅರ್ಥಪೂರ್ಣವಾಗಿದೆ.

ಶ್ರೀ ಬೆಂ.ಶ್ರೀ. ರವೀಂದ್ರ:

ನಾಯಕತ್ವ ಕಠಿಣ ವಿಚಾರ. ಎಲ್ಲರನ್ನೂ ತೂಗಿಸಿಕೊಂಡು, ಸೇರಿಸಿಕೊಂಡು, ಎಚ್ಚರಿಸಿಕೊಂಡು, ಸಂತೋಷ ವಾಗಿರಿಸುತ್ತ, ಅವರ ಪ್ರತಿಭೆಗಳನ್ನು ಬೆಳಕಿಗೆ ತರುವ ಕಾರ್ಯ ಬಹಳ ಮಹತ್ವದ್ದು. ಶ್ರೀ ರವೀಂದ್ರರು ಇದರಲ್ಲಿ ಸಫಲರಾಗಿದ್ದಾರೆ. ರಂಗರಾಜನ್, ರವೀಂದ್ರ ಸೇರಿ ಪ್ರಕಟಿಸಿರುವ ಇಬ್ಬನಿ–ಬನಿ ಓದುತ್ತಿದ್ದೆ. ಬನಿ ಕವನದಲ್ಲಿ ಮನುಜ ನಿನ್ನನ್ನು ಆದು ಸಜೀವ ನಿರ್ಜೀವಗಳು ಸ್ವಾರ್ಥವ ನಳಿದು ಇವೆ. ನೀನೆಂದು ಅಂತ ಆಗುವೆ ಎಂದು ಪ್ರಶ್ನಿಸುತ್ತಾರೆ. ತುಂಬ ಉತ್ತಮ ವಿಚಾರ. ಅವರು ಮಂಡಿಸಿದ ಅಮೃತ ಮಹೋತ್ಸವದ ಕವನ. – ಇಟ್ಟಿಲ್ಲ ಲೆಕ್ಕ, ಕೊಟ್ಟಿಲ್ಲ ತಾಮ್ರಪತ್ರ, ಪಿಂಚಿನಿ, ಭಾರತದ ಭವಿಷ್ಯ ಪ್ರೀತಿಯೇ ಅವರ ರಂಪಣಿ. ಯಾರೋ ಇತ್ತ ಭಾಗ್ಯವಲ್ಲ ನಮ್ಮ ಅರ್ಜನೆ. ನೀವು ನಾವು ಏನೆಂದು ಅರಿತರೆ ಅದೇ ಸಮರ್ಥನೆ. ಸತ್ಯದ ಮಾತು. ಉತ್ತಮ ಧ್ಯೇಯ. ಅಂತಾದರೆ ಎಲ್ಲಾ ಸಾರ್ಥಕ.

ಶ್ರೀ ಜಿ.ವಿ ಅರುಣ:

ಸಮನ್ವಯ ಸಮಿತಿ ವೇದಿಕೆಯಲ್ಲಿ ನನ್ನ ಮೊದಲ ಕಾರ್ಯಕ್ರಮ ಜೀವಿಯವರ ಬಗ್ಗೆ ಮಾತುಕತೆ. ಅಂದು ನನ್ನ ನಂತರ ವೆಂಕಟಸುಬ್ಬಯ್ಯನವರ ಪುತ್ರ ಶ್ರೀ ಜಿ.ವಿ.ಅರುಣರಿಂದ ಮಾತುಕತೆ. ನನಗೆ ಅಚ್ಚರಿ. ರವೀಂದ್ರರಿಗೆ ನಾನು ಋಣಿ.

ಶ್ರೀ ಜಿ.ವಿ.ಅರುಣ ಅವರು ಸಾಹಿತ್ಯ ಸಾಮ್ರಾಜ್ಯದಲ್ಲಿ ಹುಟ್ಟಿದವರು. ರಾಜ್ಯದ ಅಗ್ರಗಣ್ಯ ನಿಘಂಟುತಜ್ಞರ ಆಶೀರ್ವಾದದಲ್ಲಿ ಬೆಳೆದವರು. ಅರುಣರವರು ಅನೇಕ ಪ್ರೌಢ ಲೇಖನಗಳನ್ನು ನೀಡಿದ್ದಾರೆ. ಇಂದು ಅವರು, ನಾವು ಮನೆಗಳಲ್ಲಿ ಉಪಯೋಗಿಸುವ, ನಮ್ಮ ಕೆಲಸಗಳನ್ನು ಸುಲಭಗೊಳಿಸುವ ಸಣ್ಣ ಪುಟ್ಟ ಉಪಕರಣಗಳ ಹಿಂದೆ ಇರುವ ವಿಜ್ಞಾನದ ವಿಚಾರಗಳತ್ತ ಕೇಳುಗರ ಗಮನ ಸೆಳೆಯುವ ಸಾರ್ಥಕ ಪ್ರಯತ್ನವನ್ನು ಮಾಡಿದ್ದಾರೆ. 'ಬಹು ಉಪಯೋಗಿ ಉಪ್ಪಿನ ಕಾಗದ' ಉಗುರಿನ–ಅರ, ನೈಲ್ ಫೈಲ್ ಆಗಿ ಮೊಮ್ಮಗಳಿಗೆ ಉಪ್ಪಿನ ಕಾಗದ ಉಪಯೋಗಿಸುವುದನ್ನು ಕಲಿಸಿಕೊಟ್ಟವರು. ಉಪ್ಪಿನ ಕಾಗದ ಮನೆಗೆ ಬಣ್ಣ ಬಳೆಯುವ ಮೊದಲು ಗೋಡೆ ಸ್ವಚ್ಛ ಮಾಡಲು, ಮರಗೆಲಸ ವಸ್ತುಗಳಿಗೆ, ಎತ್ತಿನ ಹಾಳೆ ತುಕ್ಕು ಹಿಡಿದಿದ್ದರೆ ಉಪ್ಪಿನ ಕಾಗದ ಉಪಯೋಗವಾಗುತ್ತದೆ. ಸ್ಪಾರ್ಕ್ ಪ್ಲಾಗ್ ಶುಚಿಗೊಳಿಸಲು, ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪೆನ್ಸಿಲ್ ಅತಿ ಚೂಪು ಮಾಡಲು ಉಪ್ಪಿನ ಕಾಗದ ಉಪಯೋಗಿಸುತ್ತಿದ್ದೆವು ಎಂದು ತಿಳಿಯಪಡಿಸಿದ್ದಾರೆ. ಇದು ಒಂದು ಉತ್ತಮ ಮಾಹಿತಿ ಒದಗಿಸುವ ಸಾರ್ಥಕ ಬರಹ.

ಇಂದಿನ ದಾಸೋಹದಲ್ಲಿ ಕಥೆ, ಕವನ, ವಿಚಾರ ಸಾಹಿತ್ಯ, ವ್ಯಾಕರಣ, ಗಜಲ್ – ಹೀಗೆ ವಿವಿಧ ರೀತಿಯ ಲೇಖನಗಳನ್ನು ಸದಸ್ಯರು ಆಸಕ್ತಿಯಿಂದ ಮಂಡಿಸಿದ್ದಾರೆ.

ನನ್ನ ಮಟ್ಟದಲ್ಲಿ ಏನು ಸಾಧ್ಯವೋ ಅಷ್ಟರಮಟ್ಟಿಗೆ ನಾನು ನನ್ನ ಅನಿಸಿಕೆಗಳನ್ನು ಹಂಚಿಕೊಂಡಿದ್ದೇನೆ. ಒಟ್ಟಿನಲ್ಲಿ ಬರಹಗಳು ಸಂತಸ ನೀಡಿದೆ. ನನಗೆ ಅಧ್ಯಕ್ಷನಾಗಲು. ಎಲ್ಲರ ಪ್ರಸ್ತುತಿಗಳನ್ನು ಕೇಳಿಸಿಕೊಂಡು ನಂತರ ನನ್ನ ಅನಿಸಿಕೆಗಳನ್ನು ನಿಮ್ಮೊಡನೆ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟು ಪ್ರೋತ್ಸಾಹಿಸಿರುವಿರಿ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿರುವಿರಿ. ವಂದನೆಗಳು.

*****

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ,
ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com